




## ಬೆಡ್ ರೂಂ ಪರಿಮಳಗಳು

| ಮೊದಲ 6 ತಿಂಗಳು | 2 ವರ್ಷಗಳ ನಂತರ | 10 ವರ್ಷಗಳ ನಂತರ |
| --- | --- | --- |
| ಸೆಂಟ್ ಸ್ಪ್ರೇ ಹೂಗಳು | ಬೇಬಿ ಪೌಡರ್ ಬೇಬಿ ಆಯಿಲ್ | ಅಮೃತಾಂಜನ್ |






# ಅಪರಂಜಿ



ತಿಳಿನಗೆಯ ಕಾರಂಜಿ


**ಸಂಪಾದಕ ಮಂಡಳಿ**

**ಸಂಪಾದಕರು**
ಶ್ರೀ ಎಂ. ಶಿವಕುಮಾರ್

**ಉಪ ಸಂಪಾದಕರು**
ಶ್ರೀ ಬೇಲೂರು ರಾಮಮೂರ್ತಿ

ಶ್ರೀ ಎಚ್.ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ

**ಟ್ರಸ್ಟಿಗಳು**
ಶ್ರೀ ಎಂ. ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ಜಿ. ನಾಗೇಶ್
ಶ್ರೀ ವಿ.ಆರ್. ನಾಥ್
ಶ್ರೀ ಎ.ಆರ್. ರಾಜಗೋಪಾಲ್
ಶ್ರೀ ಕೆ. ರವೀಂದ್ರ ರಾವ್

**ವಿಶೇಷ ಆಹ್ವಾನಿತರು**
ಶ್ರೀ ಆರ್. ಶೇಷಗಿರಿರಾವ್
ಶ್ರೀ ಆರ್.ಎಸ್. ಪ್ರಶಾಂತ್

**ಗೌರವ ಸಲಹೆಗಾರರು**
ಶ್ರೀ ಅ.ರಾ.ಸೇ.



**ಚಂದಾ ವಿವರ:**
ಬಿಡಿ ಪ್ರತಿ: ರೂ. 10/-
ವಾರ್ಷಿಕ ಚಂದಾ: ರೂ. 100/-
ಹತ್ತು ವರ್ಷದ ಚಂದಾ: ರೂ. 750/-

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ





**ಸಂಪುಟ 29**
**ಸಂಚಿಕೆ – 5**
**ಫೆಬ್ರವರಿ – 2012**


## *ಈ ಸಂಚಿಕೆಯಲ್ಲಿ.....*


| | | |
|---|---|---|
| ಅಪರಂಜಿ ಕಿಡಿ | **ಪ್ರಕಾಶ್** | 2 |
| ಸಿಂಗಪುರದ ಪರ್ಸೆಂಟ್... | **ವತ್ಸನ** | 3 |
| ಬದುಕಿಗೆ ಬೇಕೆ ಲೆಕ್ಕ? | **ಗಣೇಶ್ ಹೆಗ್ಗಡೆ** | 9 |
| ನಂಬರ್ ಥಿಯರಿ | **ಇ.ಆರ್. ರಾಮಚಂದ್ರನ್** | 13 |
| ಅಗಣಿತ ನೆನಪುಗಳು | **ಭುವನೇಶ್ವರಿ ಹೆಗಡೆ** | 15 |
| ಮುಸುಕು ತೆಗೆಯೇ... | **ನಾಗೇಶ ಹೆಗಡೆ** | 18 |
| ಅತ್ತೆಯಾದರೇನು ಶಿವಾ | **ಸುಕೇಶವ** | 22 |
| ಯಕ್ಷಿಣಿ ಮತ್ತು ನಾನು.. | **ಗೊರೂರು** | 25 |
| ತುಂತುರು | **ದಂನಾಳ** | 29 |
| ಹೀಗೊಂದು....... | **ಕುಮುದಾ ಪುರುಷೋತ್ತಮ್** | 30 |
| ಕುರಿಗಳು ಸಾರ್ | **ಸಿ.ಆರ್. ಸತ್ಯ** | 35 |
| ಹುರುಳಿಕಟ್ಟು | **ಎಚ್. ಗೋಪಾಲಕೃಷ್ಣ** | 39 |



*ಮುದ್ರಣ:* ರವಿ ಗ್ರಾಫಿಕ್ಸ್ – *ಅಕ್ಷರ ಜೋಡಣೆ:* ಒಮೇಗಾ ಲೇಸರ್‌ಟೆಕ್
*ಪ್ರಕಾಶಕರು:* ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು – 560 003. email: aparanji@hotmail.com



ಸಂಪರ್ಕ ವಿಳಾಸ: **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು – 560 068. ದೂರವಾಣಿ: 080-26688488. email: belururamamurthy@gmail.com

# ಅಪರಂಜಿ ಕಿಡಿ

● ಪ್ರಕಾಶ್



ಕ್ರಿಕೆಟ್; ಭಾರತ ಪುಟಿದೆದ್ದು ನಿಲ್ಲಲಿದೆ – ಮೈಕ್ ಹಸ್ಸಿ

**● ಉರಿಯುವ ಬೆಂಕಿಗೆ ತುಪ್ಪ ಹಾಕಿದರಂತೆ !!**

★★★

ಖಾಸಗೀ ಸಂಸ್ಥೆಯಾಗಿ ಅರ್ಥಶಾಸ್ತ್ರ ಶಾಲೆ ವಿರೋಧ – ಪತ್ರಿಕೆ

**● ಇದರಲ್ಲಿ ಏನೋ ಗೂಢಾರ್ಥ ಇರಬಹುದು !!**

★★★

ಧರ್ಮ ಗ್ರಂಥಗಳು ಖಂಡಿತವಾಗಿಯೂ ಹಾನಿಕರವಲ್ಲ – ಹೇಳಿಕೆ

**● ಭಗವಂತ ಬೆಚ್ಚಿದನಂತೆ !!**

★★★

ಆಫರ್‌ಗಳಿಂದ ಜಾಗ್ರತರಾಗಿರಿ – ಜಾಹಿರಾತು

**● ಇದರ ಬಗ್ಗೆಯೂ........ !!**

★★★

ವಯಸ್ಕರ ಚಿತ್ರ ನೋಡಿ ಬಾಲ್ಯ ಕಳೆದುಕೊಳ್ಳಬೇಡಿ – ಹೇಳಿಕೆ

**● ತದ್ವಿರುದ್ಧವೂ ಸತ್ಯ !!**

★★★

ಗಮನ ಬೇರೆಡೆ ಸೆಳೆದು ಎರಡೂವರೆ ಲಕ್ಷ ದರೋಡೆ – ಸುದ್ದಿ

**● ಲಕ್ಷ್ಯವಿಲ್ಲದಿದ್ದರೆ ಹೀಗೆ !!**

★★★

ಬಿಕ್ಕಟ್ಟಿಗೆ ತಾತ್ಕಾಲಿಕ ಕದನವಿರಾಮ – ಶೀರ್ಷಿಕೆ

**● ಯುದ್ಧವಲ್ಲ, ಕರ್ನಾಟಕದ ರಾಜಕೀಯ !!**

★★★

ವಿವಾದಕ್ಕೆ ನಾನು ಜವಾಬ್ದಾರನಲ್ಲ – ಶ್ರೀ ಭೈರಪ್ಪ

**● ಒಪ್ಪಬೇಕಾದ ಮಾತು !!**

★★★



# ಸಿಂಗಪುರದ ಪರ್ಸೆಂಟ್ ಗಣಿತಜ್ಞ

**- ವತ್ಸನ**

**ನಾ**ವಿಬ್ಬರೂ ಛಾಂಗಿ ವಿಮಾನ ನಿಲ್ದಾಣದಲ್ಲಿ ಇಳಿದು ಇಮ್ಮಿಗ್ರೇಷನ್ ಕ್ಯೂ ಬಳಿ ನಡೆದೆವು. ಅಷ್ಟರಲ್ಲೇ ಬಿಳಿಯ ಸಮವಸ್ತ್ರ ಧರಿಸಿದ್ದ ಮೋಹಕ ಮೈಮಾಟದ ಚೀನೀ ಯುವತಿಯೊಬ್ಬಳು ಶರಲೇಖನ ಬಳಿ ಬಂದು ಕೈ ಕುಲುಕಿ ''ನಾನು ರೇಷೆಲ್ ಲಿಮ್. ನಿಮ್ಮಿಬ್ಬರಿಗೂ ಸಿಂಗಪುರಕ್ಕೆ ಸ್ವಾಗತ. ಇನ್ಸ್‌ಪೆಕ್ಟರ್ ಝಿಕ್ವಾನ್ ನಿಮ್ಮನ್ನು ಕಾತರದಿಂದ ಇದಿರು ನೋಡುತ್ತಿದ್ದಾರೆ, ದಯವಿಟ್ಟು ನನ್ನೊಂದಿಗೆ ಬನ್ನಿ'' ಎಂದು ಹೇಳುತ್ತಾ ನಮ್ಮ ಪಾಸ್‌ಪೋರ್ಟ್‌ಗಳನ್ನು ಪಡೆದು ಇಮ್ಮಿಗ್ರೇಷನ್ ಅಧಿಕಾರಿಯ ಹತ್ತಿರ ಹೋಗಿ ಚೀನೀ ಭಾಷೆಯಲ್ಲಿ ಏನೋ ಮಾತನಾಡಿದಳು. ಆ ಅಧಿಕಾರಿ ಬಹು ತ್ವರೆಯಿಂದ ನಮ್ಮ ಪಾಸ್‌ಪೋರ್ಟ್ ಪರಿಶೀಲನೆ ನಡೆಸಿ, ಅದರ ಮೇಲೆ ಸ್ಟಾಂಪ್ ಒತ್ತಿ ಲಿಮ್ ಕೈಯ್ಯಲ್ಲಿ ಕೊಟ್ಟ. ನಾವು ಆಕೆಯನ್ನೇ ಹಿಂಬಾಲಿಸಿದೆವು. ಬ್ಯಾಗೇಜ್ ತಿರುಗಣೆಯ ಹತ್ತಿರ ಹೋಗುವಷ್ಟರಲ್ಲಿ ನಮ್ಮ ಬ್ಯಾಗುಗಳನ್ನು ಯಾರೋ ಪುಣ್ಯಾತ್ಮರು ಇಳಿಸಿ ಒಂದು ಟ್ರಾಲಿಯಲ್ಲಿ ವಾರಣವಾಗಿ ಇಟ್ಟಿದ್ದರು.

''ಅರೆ, ಇವರಿಗೆ ಇವೇ ನಮ್ಮ ಬ್ಯಾಗುಗಳು ಅಂತ ಹೇಗೆ ಗೊತ್ತಾಯ್ತೋ?'' ಅಂತ ಶರಲೇಖನನ್ನು ಕೇಳಿದೆ. ''ಬೆಂಗಳೂರಿನಲ್ಲಿ ನಾವು ಚೆಕ್‌ಇನ್ ಮಾಡುವಾಗ ಒಬ್ಬ ಸಿಂಗಪುರದ ಪೋಲೀಸ್ ಅಧಿಕಾರಿ ನಮ್ಮ ಬೋರ್ಡಿಂಗ್ ಪಾಸ್ ವಿವರಗಳನ್ನ ತನ್ನ ಐ ಫೋನ್‌ಗೆ ವರ್ಗಾಯಿಸಿದ್ದನು ನೋಡಲಿಲ್ಲವೇ?'' ಅಂದ ನನ್ನ ಗೆಳೆಯ. ತರುಣಿಯೇ ನಮ್ಮ ಟ್ರಾಲಿಯನ್ನು ನೂಕಿಕೊಂಡು ನಮ್ಮನ್ನು ನಿಲ್ದಾಣದಿಂದ ಹೊರಗೆ ಕರೆದೊಯ್ದಳು. ಅಲ್ಲಿ ಪೋಲೀಸ್ ಕಾರೊಂದು ನಮಗಾಗಿಯೇ ಕಾದು ನಿಂತಿತ್ತು. ರೇಷೆಲ್, ನಮ್ಮನ್ನು ಕಾರಿಗೆ ಹತ್ತಿಸಿ ತಾನು ಮುಂದೆ ಕುಳಿತು ಚಾಲಕನೊಂದಿಗೆ ಏನೋ ಹೇಳಿದಳು. ಆತ ಶರವೇಗದಲ್ಲಿ ಕಾರನ್ನು ಚಾಲನೆಗೊಳಿಸಿದ.

ವಿಮಾನ ನಿಲ್ದಾಣದಿಂದ ಊರಿಗೆ ಹೋಗುವ ಹೆದ್ದಾರಿ ಸಿಂಗಪುರದ ಆಧುನಿಕತೆಯನ್ನು ಬಹು ಸ್ಪಷ್ಟವಾಗಿ ನಿದರ್ಶಿಸಿತ್ತು. ಮನೆಯ ನೆಲದಂತೆ ಸಮತಟ್ಟಾದ ರಸ್ತೆ, ಒಂದೊಂದು ದಿಕ್ಕಿನಲ್ಲೂ ಆರು ಆರು ಲೇನ್‌ಗಳು, ರಸ್ತೆಗಳನ್ನು ಬೇರ್ಪಡಿಸುವ ಡಿವೈಡರ್ ಜಾಗದಲ್ಲಿ ಅತಿ ದೊಡ್ಡ ಗಾತ್ರದ ಹೂವಿನ ಕುಂಡಗಳು, ದೂರದ ದಿಗಂತದಲ್ಲಿ ದಟ್ಟವಾಗಿ ಹರಡಿದ್ದ

ಗಗನಚುಂಬಿ ಕಟ್ಟಡಗಳು ಬೆಳಗಿನ ಎಳೆಯ ಬಿಸಿಲಿನಲ್ಲಿ ಪಳಪಳನೆ ಹೊಳೆಯುತ್ತಿದ್ದವು. ಒಮ್ಮೆಲೇ ಶರಲೇಖ, ''ಈ ಡಿವೈಡರ್‌ನಲ್ಲಿ ಇಟ್ಟಿರುವ ಹೂವಿನ ಕುಂಡಗಳನ್ನು ನೋಡಿದೆಯಾ?'' ಅಂತ ಕೇಳಿದ. ''ನೋಡಿದೆ ಬಹು ಚೆನ್ನಾಗಿ ಗಿಡಗಳನ್ನು ಬೆಳೆಸಿ ರಸ್ತೆಯ ಸೌಂದರ್ಯವನ್ನು ಹೆಚ್ಚಿಸಿದ್ದಾರೆ'' ಅಂದೆ. ''ಛೇ, ಅಷ್ಟೇನೇ ನಿನ್ನ ಸೂಕ್ಷ್ಮಗಮನ. ಆ ಕುಂಡಗಳನ್ನು ಹೇಗಿಟ್ಟಿದ್ದಾರೆ ಸರಿಯಾಗಿ ನೋಡಿ ಹೇಳು'' ಅಂದ ಶರಲೇಖ. ನಾನು ಗಮನವಿಟ್ಟು ನೋಡಿದೆ. ಒಂದು ದೊಡ್ಡ ಚಚ್ಚೌಕನಾದ ಕಬ್ಬಿಣದ ಬುಟ್ಟಿಯಲ್ಲಿ, ಬುಟ್ಟಿಗೆ ನಾಲ್ಕರಂತೆ ಕುಂಡಗಳನ್ನು ಜೋಡಿಸಿದ್ದರು. ಆ ಕಬ್ಬಿಣದ ಬುಟ್ಟಿಗಳು ರಸ್ತೆಯ ಮೇಲೇ ಕುಳಿತಿದ್ದವು. ವಾಸ್ತವವಾಗಿ ಅಲ್ಲಿ ರಸ್ತೆ ಡಿವೈಡರ್ ಇರಲೇ ಇಲ್ಲ. ಬುಟ್ಟಿಗಳನ್ನ ತೆಗೆದರೆ ಎರಡು ಆರು ಲೇನ್ ರಸ್ತೆಗಳು ಒಂದರಲ್ಲೊಂದು ಸೇರಿ ಒಂದೇ ಹನ್ನೆರಡು ಲೇನ್ ರಸ್ತೆಯಾಗಿ ಬದಲಾಗುವಂತಿತ್ತು ಆ ಛಾಂಗಿ ನಿಲ್ದಾಣಕ್ಕೆ ಹೋಗುವ ರಸ್ತೆ. ''ಏಕಿದು ಹೀಗೆ?'' ಅಂತ ಶರಲೇಖನನ್ನ ಕೇಳಿದೆ. ''ಈ ಚೀನೀ ಜನ ಯಾವ ಕೆಲಸವನ್ನಾದರೂ ಬಹು ದೂರದೃಷ್ಟಿಯಿಂದ, ಮುಂದಾಲೋಚನೆಯಿಂದ ಮಾಡುತ್ತಾರೆ. ಈ ನಿಲ್ದಾಣದ ರಸ್ತೆ ಮೈಲಿಗಳಷ್ಟು ಉದ್ದಕ್ಕೆ ವಿಮಾನಗಳ ರನ್‌ವೇ ಹಾಗೆ ನಿರ್ಮಿಸಿದ್ದಾರೆ. ಯಾವುದಾದರೂ ಆತಂಕವಾದಿಗಳ ಧಾಳಿಯಿಂದ ಛಾಂಗಿ ವಿಮಾನ ನಿಲ್ದಾಣ ಧ್ವಂಸವಾದರೆ ಕೇವಲ ಹದಿನೈದು ನಿಮಿಷಗಳಲ್ಲಿ ಈ ಹೂವಿನ ಕುಂಡಗಳಿರುವ ಬುಟ್ಟಿಗಳನ್ನು ಬುಲ್‌ಡೋಜರುಗಳಲ್ಲಿ ಹೊರಕ್ಕೆ ಸಾಗಿಸಿ ಒಂದು ಜಂಬೋ ಜೆಟ್ಟ್ ಅನ್ನು ಈ ರಸ್ತೆಯಲ್ಲೇ ಬಹು ಸುಲಭವಾಗಿ ಇಳಿಸಬಹುದು. ಹತ್ತು ವಿಮಾನಗಳನು ಒಟ್ಟಿಗೆ ಇಳಿಸುವಷ್ಟು ಉದ್ದಕ್ಕೆ ಈ ರಸ್ತೆಯನ್ನು ಗೆರೆಹೊಡೆದಂತೆ ನೇರವಾಗಿ ನಿರ್ಮಿಸಿದ್ದಾರೆ'' ಅಂದ ಶರಲೇಖ. ''ಇದನ್ನೆಲ್ಲಾ ಯಾವಾಗ ಸಂಗ್ರಹಿಸಿದ್ದೆಯೋ?'' ಅಂತ ಆಶ್ಚರ್ಯದಿಂದ ಕೇಳಿದೆ. ''ಒಂದು ತಿಂಗಳ ಹಿಂದೆ ಝಿಕ್ವಾನ್ ನನ್ನ ಸಹಾಯ ಕೇಳುಕ್ಕೆ ಫೋನ್ ಮಾಡಿದಾಗಿನಿಂದ ಸಿಂಗಪುರದ ಬಗ್ಗೆ ಆದಷ್ಟು ಮಾಹಿತಿ ಸಂಗ್ರಹಿಸುತ್ತಾ ಇದ್ದೀನಿ. ಇದು ನನ್ನ ವೃತ್ತಿಧರ್ಮ'' ಅಂತ ಹೇಳಿದ.

ನಮ್ಮ ಕಾರು ಊರನ್ನು ಸೇರಿ ಚೈನಟೌನ್ ಬಡಾವಣೆಯಲ್ಲಿ ಸಾಗುತ್ತಿತ್ತು. ಚೀನೀ ಹೊಸವರ್ಷವನ್ನು ಸ್ವಾಗತಿಸಲು ರಸ್ತೆ ಸಂಪೂರ್ಣವಾಗಿ ಅಲಂಕೃತವಾಗಿತ್ತು. ಕೆಂಪುಬಣ್ಣದ ಬೆಳಕಿನ ಬುಟ್ಟಿಗಳು ಎಲ್ಲೆಂದರಲ್ಲಿ ತೂಗಾಡುತ್ತಿದ್ದವು. ಕೊನೆಗೆ ಕಾರು ನಿಂತು, ನಮಗಾಗಿ ಕಾದಿರಿಸಿದ್ದ ಹೋಟೆಲ್ ಸೇರಿದೆವು. ನಾವು ಚೆಕ್‌ಇನ್ ಮಾಡುವವರೆಗೆ ರೇಷೆಲ್ ಕಾದಿದ್ದು ಅನಂತರ ನಮ್ಮನ್ನು ಬೀಳ್ಕೊಂಡಳು. ನಾವು ಕೊಠಡಿಯನ್ನು ಸೇರಿದ ತಕ್ಷಣ ಶರಲೇಖನ ಮ್ಯಾಟ್ರಿಕ್ಸ್ ಮೊಬೈಲ್ ರಿಂಗಾಯಿತು. ಮಾತನಾಡಿದ ನಂತರ ಶರಲೇಖ ''ಬೆಳಗಿನ ಉಪಹಾರ ಮುಗಿಸಿದ ನಂತರ ಝಿಕ್ವಾನ್ ನಮ್ಮನು ಭೇಟಿ ಮಾಡುತ್ತಾನಂತೆ. ಒಂಭತ್ತು ಘಂಟೆ ಹೊತ್ತಿಗೆ ಬರಬಹುದು'' ಅಂತ ಹೇಳಿದ. ನಾನು ಪ್ರಾತಃರ್ವಿಧಿಗಳಿಗಾಗಿ ಕಾರ್ಯೋನ್ಮುಖನಾದೆ.

''ಈಗ ಅವನನ್ನು ಹಾ ಪಾರ್ ವಿಲ್ಲಾ ಎಂಬ ಬೌದ್ಧ ಭವನದಲ್ಲಿ ವಿಶ್ರಾಂತಿಗಾಗಿ ಇರಿಸಿದ್ದೇವೆ. ಅಲ್ಲಿನ ಧ್ಯಾನ ಶಾಲೆಯಲ್ಲಿ ಆತ ಪ್ರತಿನಿತ್ಯ ಧ್ಯಾನ ಮಾಡುತ್ತಿರುತ್ತಾನೆ. ನೀವು ಅವನನ್ನು ಒಮ್ಮೆ ನೋಡಿ, ನಿಮ್ಮ ಅಭಿಪ್ರಾಯವನ್ನು ತಿಳಿಸಿದರೆ ಬಹಳ ಅನುಕೂಲ'' ಎಂದ

ಝಿಕ್ವಾನ್. ಆ ಬೆಳಗ್ಗೆ ನಮ್ಮ ಉಪಹಾರವಾದಮೇಲೆ ಅವನು ನಮ್ಮ ಕೊಠಡಿಗೆ ಬಂದು ತನ್ನ ಅಹವಾಲನ್ನು ಮಂಡಿಸಿದ್ದ. ನನಗೆ ಅವನ ಮಾತಿನ ತಲೆಬುಡ ಅರ್ಥ ಆಗಲಿಲ್ಲ. ಶರಲೇಖನತ್ತ ಪ್ರಶ್ನಾರ್ಥಕವಾಗಿ ದೃಷ್ಟಿ ಹರಿಸಿದೆ. ಶರಲೇಖ ಝಿಕ್ವಾನನನ್ನು ಕುರಿತು, ''ಈತ ನನ್ನ ಗೆಳೆಯ ಹಾಗೂ ಸಹಾಯಕ ವತ್ಸನ. ವೃತ್ತಿಯಲ್ಲಿ ವೈದ್ಯ. ನಿಮ್ಮ ಸಮಸ್ಯೆಯ ಹಿನ್ನೆಲೆಯನ್ನು ಅವನೊಂದಿಗೆ ಹಂಚಿಕೊಂಡರೆ ಸಮಸ್ಯೆಯ ಪರಿಹಾರಕ್ಕೆ ಅನುಕೂಲವಾಗಬಹುದು'' ಎಂದು ಸಲಹೆಮಾಡಿದ.

''ಅಗತ್ಯವಾಗಿ ಹೇಳುತ್ತೇನೆ. ಛೂ ಟ್ಸೆ ಹಾಂಗ್ ನಮ್ಮ ನಾಡಿನ ಅತ್ಯಂತ ಪ್ರತಿಭಾವಂತ ಗಣಿತಜ್ಞ. ಆತ ಪಾಠಹೇಳಲು ಪ್ರಾರಂಭಿಸಿದರೆ ವಿದ್ಯಾರ್ಥಿಗಳೆಲ್ಲಾ ತದೇಕಚಿತ್ತರಾಗುತ್ತಾರೆ. ಕಳೆದ ವರ್ಷ ನಿಮ್ಮ ಬೆಂಗಳೂರಿನ ವಿಜ್ಞಾನ ಮಂದಿರದಿಂದ ಆತನಿಗೆ ಒಂದು ವರ್ಷದ ಸಬಾಟಿಕಲ್‌ಗಾಗಿ ಆಹ್ವಾನ ಬಂದಿತ್ತು. ಬೇರೆ ದೇಶಗಳ ವಿಜ್ಞಾನಿಗಳ ಸಂಪರ್ಕ ಬರುವುದು ಅವನ ಬೆಳವಣಿಗೆಗೆ ಅನುಕೂಲವಾಗಬಹುದೆಂದು ಭಾವಿಸಿ ನಮ್ಮ ಸರ್ಕಾರದವರು ಅವನ ಪ್ರಯಾಣಕ್ಕೆ ಅನುಮತಿ ನೀಡಿದರು. ಒಂದು ವರ್ಷದ ನಂತರ ಆತ ಹಿಂತಿರುಗಿದ ಬಳಿಕ ಆತನ ನಡವಳಿಕೆಯೇ ಬೇರೆ ಆಯಿತು. ಏನೋ ಪರ್ಸೆಂಟ್ ಪರ್ಸೆಂಟ್ ಅಂತ ಬಡಬಡಿಕೆ, ಏನೋ ಗುಟ್ಟು ಗುಟ್ಟು ವ್ಯವಹಾರ. ಮನೆಯವರಿಗೆ ಗಾಭರಿಯಾಗಿ ಅವನ ಮ್ಯಾನೇಜರಿಗೆ ತಿಳಿಸಿದರು. ಸರ್ಕಾರದ ವತಿಯಿಂದ ಆತನಿಗೆ ಖ್ಯಾತ ಮನಶ್ಯಾಸ್ತ್ರಜ್ಞರ ಚಿಕಿತ್ಸೆ ಕೊಡಿಸಿದರೂ ಏನೂ ಫಲಕಾರಿಯಾಗಲಿಲ್ಲ. ಕಲರ್ ಶಾಕ್ ಅಥವಾ ಸಂಸ್ಕೃತಿ ಆಘಾತ ಇರಬಹುದೆಂದು ಮನಶ್ಯಾಸ್ತ್ರಜ್ಞರು ಅಭಿಪ್ರಾಯಪಟ್ಟರು. ಇದರ ಪರಿಹಾರಕ್ಕೆ ವಿವಿಧ ಸಂಸ್ಕೃತಿಗಳ ಆಳವಾದ ಪರಿಚಯವುಳ್ಳ ಅನುಭವಸ್ಥರ ತಲಾಷೆಯ ಜವಾಬ್ದಾರಿ ನನ್ನ ಮೇಲೆ ಬಿತ್ತು. ಸ್ಕಾಟ್ಲೆಂಡ್ ಯಾರ್ಡಿನ ಜಿಮ್ ಹತ್ತಿರ ನನ್ನ ಸಮಸ್ಯೆಯನ್ನು ಪ್ರಸ್ತಾಪಿಸಿದಾಗ ಆತ ನಿಮ್ಮ ಹೆಸರನ್ನು ಹೇಳಿದ. ಆಗಲೇ ನಿಮ್ಮನ್ನು ನಾನು ಸಂಪರ್ಕಿಸಿದ್ದು. ಈಗ ಹಾ ಪಾರ್ ವಿಲ್ಲಾದಲ್ಲಿ ಛೂ ವಿಶ್ರಾಂತಿಯಲ್ಲಿದ್ದಾನೆ. ನೀವು ಸಿದ್ಧರಾಗಿದ್ದರೆ ಅವನನ್ನು ನೋಡಲು ಈಗಲೇ ಹೊರಡಬಹುದು.'' ಅಂದ ಝಿಕ್ವಾನ್.

ಚೈನಟೌನ್‌ನಿಂದ ಧೋಬಿಘಾಟ್‌ಗೆ ಹೋಗಿ ಅಲ್ಲಿಂದ ಬಿಶಾನ್ ಸೇರಿ, ಟ್ರೇನ್ ಬದಲಿಸಿ ಹಾ ಪಾರ್ ವಿಲ್ಲಾ ಸೇರಿದಾಗ ಘಂಟೆ ಹನ್ನೊಂದಾಗಿತ್ತು. ಇದೊಂದು ಅತ್ಯಂತ ಅಪೂರ್ವ ಭವನ. ಚೀನೀ ಸಂಸ್ಕೃತಿಯ ಅನೇಕ ಪೌರಾಣಿಕ ಪಾತ್ರಗಳ ಪ್ರತಿಮೆಗಳನ್ನು ಅತಿ ಕಲಾತ್ಮಕವಾಗಿ ಮೂಡಿಸಿ ಇಲ್ಲಿ ಸ್ಥಾಪಿಸಿದ್ದಾರೆ. ಹತ್ತೊಂಭತ್ತನೆಯ ಶತಮಾನದ ಕೊನೆಯಲ್ಲಿ ಜೀವಿಸಿದ್ದ ಇಬ್ಬರು ಅಣ್ಣತಮ್ಮಂದಿರ ಸಾಹಸದಿಂದ ಆ ಭವ್ಯ ಭವನ ನಿರ್ಮಿತವಾದದ್ದಂತೆ. ಬೂನ್ ಹಾ ಮತ್ತು ಬೂನ್ ಪಾರ್ ಎಂಬ ಈ ಸಹೋದರರ ವಾಣಿಜ್ಯ ವ್ಯವಹಾರ ಟೈಗರ್ ಬಾಮ್ ಎಂಬ ಮುಲಾಮು. ಅದರಲ್ಲಿ ಗಳಿಸಿದ ಹೇರಳವಾದ ಹಣವನ್ನು ಸದ್ವಿನಿಯೋಗ ಮಾಡಿ ಕಟ್ಟಿದ ಭವನವಿದು. ಒಳಗೆ ಹೋದಮೇಲೆ ನೇರವಾಗಿ ನಾವು ಧ್ಯಾನ ಶಾಲೆಗೆ ಹೋದೆವು. ಅಲ್ಲಿ ಛೂ ಟ್ಸೆ ಹಾಂಗ್ ಯಾವುದೋ ಪೇಪರ್ ಓದುತ್ತಾ ಕುಳಿತಿದ್ದ. ಝಿಕ್ವಾನ್ ನಮ್ಮಿಬ್ಬರನ್ನು ಬೆಂಗಳೂರಿನಿಂದ ಬಂದಿರುವ ಅತಿಥಿಗಳೆಂದು ಪರಿಚಯಮಾಡಿಸಿ ಹೊರಟುಹೋದ.

ಅವನು ಹೋದ ತಕ್ಷಣ, ಭೂ, ಶರಲೇಖನನ್ನು ಕುರಿತು ''ಯಡ್ಡಿ ಹೇಗಿದ್ದಾರೆ?'' ಅಂತ ಕೇಳಿದ. ನಾನು ಮೂಕವಿಸ್ಮಿತನಾದೆ. ಶರಲೇಖ ಒಂದಿಷ್ಟೂ ವಿಚಲಿತನಾಗದೆ ''ಚೆನ್ನಾಗಿದ್ದಾರೆ. ನಿಮಗೆ ಅವರ ಪರಿಚಯ ಹೇಗೆ?'' ಅಂತ ಕೇಳಿದ. ಭೂ ತನ್ನ ವೃತ್ತಾಂತ ಪ್ರಾರಂಭಿಸಿದ. ''ನಾನು ಬೆಂಗಳೂರು ಸೇರಿದ ಹೊಸದರಲ್ಲಿ ಎಲ್ಲಾ ಚೆನ್ನಾಗಿತ್ತು. ವಿಜ್ಞಾನ ಮಂದಿರದ ಪರಿಸರ, ವಿಜ್ಞಾನಿಗಳ ಒಡನಾಟ, ನಿಮ್ಮ ಟಿ.ವಿ.ಯಲ್ಲಿ ಬಿತ್ತರವಾಗುತ್ತಿದ್ದ ಅತಿ ವರ್ಣರಂಜಿತ ಕಾರ್ಯಕ್ರಮಗಳು ಇವೆಲ್ಲಾ ನನಗೆ ಒಂದು ಹೊಸ ಲೋಕವನ್ನೇ ಪರಿಚಯಿಸಿದವು. ಆದರೆ ಒಂದು ದಿನ ಯಾವುದೋ ಒಂದು ಸಮಾರಂಭಕ್ಕೆ ರೆಡ್ಡಿ ಎಂಬ ಸಂಭಾವಿತರೊಬ್ಬರು ಮುಖ್ಯ ಅತಿಥಿಯಾಗಿ ಆಗಮಿಸಿದ್ದರು. ನಮ್ಮ ನಾಡಿನಲ್ಲಿ ಜನನಾಯಕರೆಂದರೆ ಇನ್ನಿಲ್ಲದ ಗೌರವ. ಸಮಾರಂಭ ಮುಗಿದ ನಂತರ ಅವರಿಗೆ ನನ್ನನ್ನು ಸಿಂಗಪುರದ ಪ್ರತಿಭಾಶಾಲಿಯೆಂದು ಯಾರೋ ಪರಿಚಯಿಸಿದರು. ನನ್ನ ಆನಂದಕ್ಕೆ ಪಾರವೇ ಇರಲಿಲ್ಲ. ನನ್ನನ್ನು ನೋಡಿದ ತಕ್ಷಣ ''ಸಿಂಗಪುರದಲ್ಲಿ ಭೂಮಿ ಬೆಲೆ ಹೇಗೆ?'' ಅಂತ ನನ್ನ ಕೇಳಿದರು. ''ನನಗೆ ಈ ವ್ಯವಹಾರಗಳೆಲ್ಲಾ ಏನೂ ತಿಳೀದು. ಗೊತ್ತಿಲ್ಲ'' ಅಂದೆ. ''ಅಯ್ಯೋ ಕೈಯ್ಯಲ್ಲಿ ಐ ಫೋನ್ ಇದೆಯಲ್ಲಾ ನೋಡಿ ಹೇಳಿ'' ಅಂತ ಬಲವಂತ ಮಾಡಿದರು. ನೋಡಿ ಹೇಳಿದೆ. ''ನಾನು ಅಲ್ಲಿ ಭೂಮಿ ಕೊಳ್ಳಬೇಕು ಅಂತ ಇದೀನಿ ಸಹಾಯ ಮಾಡ್ತೀರಾ'' ಅಂತ ಕೇಳಿದರು. ''ಹತ್ತು ಪರ್ಸೆಂಟ್ ಕೊಡ್ತೀನಿ'' ಅಂತ ಬೇರೇ ಆಶೆ ತೋರಿಸಿದರು. ನಮ್ಮ ದೇಶದಲ್ಲಿ ಈ ತರಹ ಮಾತನಾಡಿದರೆ ಜೈಲು ವಾಸ ಖಂಡಿತ. ಇಲ್ಲಿ ಇವರು ಗೌರವಾನ್ವಿತ ಮಂತ್ರಿಗಳು. ವಿಚಿತ್ರ ದೇಶ ಅಂದುಕೊಂಡೆ. ಅನಂತರ ರೆಡ್ಡಿ ನನ್ನನ್ನು ಮೇಲಿಂದ ಮೇಲೆ ಸಂಪರ್ಕಿಸೋದಕ್ಕೆ ಪ್ರಾರಂಭಿಸಿದರು. ತಮ್ಮ ಮುಖ್ಯ ಮಂತ್ರಿಗಳ ಹತ್ತಿರ ಕರೆದೊಯ್ದರು. ನಾನೊಬ್ಬ ಸಾಮಾನ್ಯ ಪ್ರಜೆ. ಇಂತಹ ಪ್ರಭಾವಶಾಲಿ ವ್ಯಕ್ತಿಗಳ ಒಡನಾಟ. ಪ್ರತಿ ರಾತ್ರಿ ಸಂತೋಷಕೂಟ, ಇವೆಲ್ಲಾ ನನ್ನ ಸಮಾಜದ ಬಗ್ಗೆ ನನಗಿದ್ದ ನಂಬಿಕೆಗಳನ್ನೆಲ್ಲಾ ಬೇರುಸಹಿತ ಅಲ್ಲಾಡಿಸಿದವು. ಒಂದು ದಿನ ಅವರ ಪಾರ್ಟಿಯ ಸಮಾಲೋಚನಾ ಸಭೆಗೆ ರೆಡ್ಡಿ ನನ್ನನ್ನು ಕರೆದುಕೊಂಡು ಹೋದರು. ಅಲ್ಲಿ ಹಲವರು ಮುಖ್ಯಸ್ಥರು ನನ್ನೊಡನೆ ಸಿಂಗಪುರವನ್ನೇ ಡಿನೋಟಿಫೈ ಮಾಡಿ ಖರೀದಿಸುವ ಬಗ್ಗೆ ಪ್ರಸ್ತಾಪ ಮಾಡಿದರು. ನನಗೆ ತಲೆ ತಿರುಗಿದಂತಾಯಿತು. ನೇರವಾಗಿ ಮನೆಗೆ ಹಿಂತಿರುಗಿ ಅನಂತರ ಊರಿಗೆ ಹಿಂತಿರುಗಿದೆ. ಆದರೂ ನಾನು ಚಿಕ್ಕಂದಿನಿಂದ ಕಲಿತ ಶ್ರದ್ಧೆ ಪ್ರಾಮಾಣಿಕತೆ ಪಾಠಗಳೆಲ್ಲಾ ತಿರುಗುಮುರುಗಾಗಿ ಕಾಣಿಸತೊಡಗಿದವು. ಸಿಂಗಪುರದ ಬೆಲೆಗೆ ಹತ್ತು ಪರ್ಸೆಂಟ್ ಎಷ್ಟು ಎಂಬ ಅಂಶವನ್ನು ನನ್ನ ಗಣಿತಜ್ಞ ಮಿದಿಳು ಸದಾ ಜಪಮಾಡತೊಡಗಿತು. ಡಾಕ್ಟರುಗಳು ನನ್ನನ್ನು ಇಲ್ಲಿ ಕೂಡಿಹಾಕಿ ಧ್ಯಾನ ಮಾಡಲು ಹೇಳಿದ್ದಾರೆ. ನನ್ನ ಭವಿಷ್ಯದ ಗತಿ ಏನು?'' ಭೂ ನಿಜವಾಗಿ ಗಾಬರಿಯಾಗಿದ್ದ. ಶರಲೇಖ ಎಲ್ಲವನ್ನು ಸಮಾಧಾನದಿಂದ ಸಾವಧಾನವಾಗಿ ಕೇಳಿಸಿಕೊಂಡ. ಆಮೇಲೆ ಅವನನ್ನು ಧ್ಯಾನಶಾಲೆಯ ಆಚೆ ಇದ್ದ ಉದ್ಯಾನವನಕ್ಕೆ ಕರೆದುಕೊಂಡು ಹೋದ. ನಾನು ಧ್ಯಾನಶಾಲೆಯಲ್ಲೇ ಕಾಯುತ್ತಾ ಕುಳಿತೆ. ಶರಲೇಖ ಪುನಃ ಹಿಂತಿರುಗಿ ಬಂದಾಗ ಊಟದ ಸಮಯವಾಗಿತ್ತು. ನಾವಿಬ್ಬರೂ ಎಸ್‌ಎಮ್‌ಆರ್‌ಟಿ ಹತ್ತಿ ಲಿಟಲ್ ಇಂಡಿಯಾ ತಲುಪಿದೆವು. ''ಇಲ್ಲೊಂದು ಒಳ್ಳೇ ಇಡ್ಲಿ ಹೋಟೆಲ್ ಇದೆ'' ಎನ್ನುತ್ತಾ

ಶರಲೇಖ ನನ್ನನ್ನು ಮುರುಗನ್ ಇಡ್ಲಿ ಷಾಪಿಗೆ ಕರೆದೊಯ್ದ. ನಾವು ಪುನಃ ನಮ್ಮ ಹೋಟೆಲ್ ಸೇರಿದಾಗ ಸಂಜೆಯಾಗುತ್ತಾ ಬಂದಿತ್ತು. ಛೂ ಹತ್ತಿರ ಮಾತಾಡಿದ್ದ ವಿವರಗಳ ಬಗ್ಗೆ ಶರಲೇಖ ನನಗೆ ಬಿಟ್ಟುಕೊಡಲಿಲ್ಲ. ಬದಲಿಗೆ ''ಊರನ್ನು ನೋಡುವ'' ಎಂದು ಹೇಳಿ ಊರು ಸುತ್ತಿಸಿದ.

ಮಾರನೆಯ ಬೆಳಗ್ಗೆ ಝಿಕ್ವಾನ್ ಬಂದು ನಮ್ಮನ್ನು ಭೇಟಿ ಮಾಡಿದ. ಅವನ ಮುಖ ಮಂದಹಾಸದಿಂದ ತುಂಬಿತ್ತು. ''ಛೂ ಅನುಭವಿಸುತ್ತಿದ್ದ ಮನಸ್ಸಿನ ಕ್ಲೇಶ ಬಿಟ್ಟಿರುವ ಹಾಗೆ ಕಾಣುತ್ತೆ. ನಿಮ್ಮ ಚಿಕಿತ್ಸೆಗೆ ಧನ್ಯವಾದಗಳು. ನೀವು ಬೆಂಗಳೂರಿಗೆ ಹಿಂತಿರುಗುವ ಮುಂಚೆ ನಮ್ಮ ಹ್ಯೂಮನ್ ರಿಸೋರ್ಸ್ ಮಂತ್ರಿಗಳು ನಿಮ್ಮನ್ನು ಕಾಣುವ ಅಭಿಲಾಷೆ ವ್ಯಕ್ತಪಡಿಸಿದ್ದಾರೆ. ಅವರನ್ನು ಭೇಟಿಮಾಡಲು ಸಾಧ್ಯವೇ?'' ಅಂತ ಬಹು ವಿನಯದಿಂದ ಕೇಳಿದ. ಶರಲೇಖ ಒಡನೆಯೇ ಒಪ್ಪಿದನಂತರ ನಾವೆಲ್ಲರೂ ಮಂತ್ರಿಗಳ ಕಛೇರಿಗೆ ಹೋದೆವು.

ಮಂತ್ರಿಗಳು ನಮ್ಮನ್ನ ಬಹು ಸೌಜನ್ಯದಿಂದ ಬರಮಾಡಿಕೊಂಡರು. ''ಛೂ ಟ್ಸೆ ಹಾಂಗ್‌ನನ್ನ ಗುಣಮುಖನನ್ನಾಗಿ ಮಾಡಿದ್ದಕ್ಕೆ ನಾನು ನಿಮಗೆ ಅತ್ಯಂತ ಆಭಾರಿ. ಮುಂದೆ ಭವಿಷ್ಯದಲ್ಲಿ ನಮ್ಮ ತಜ್ಞರು ವೃತ್ತಿ ನಿಮಿತ್ತ ಹೊರದೇಶಗಳಿಗೆ ಹೋಗಬೇಕಾದರೆ ಇಂತಹ ಆಘಾತಗಳು ಆಗದಂತೆ ಏನು ಎಚ್ಚರಿಕೆ ವಹಿಸಬೇಕು, ದಯವಿಟ್ಟು ತಿಳಿಸುವಿರಾ?'' ಎಂದು ಬಹು ವಿನಯದಿಂದ ಕೇಳಿದರು. ಶರಲೇಖ, ''ನಿಮ್ಮದು ಅತ್ಯಂತ ಮುಂದುವರಿದ ದೇಶ. ಭ್ರಷ್ಟಾಚಾರ, ಲಂಚ, ಕಳ್ಳತನ, ಮೋಸ ಇವುಗಳನ್ನು ಬೇರುಸಹಿತ ಕಿತ್ತುಹಾಕುವುದರಲ್ಲಿ ನೀವು ಅಸಮಾನ್ಯ ಯಶಸ್ಸನ್ನು ಗಳಿಸಿರುವುದು ಎಲ್ಲರಿಗೂ ತಿಳಿದಿರುವ ವಿಷಯವೇ. ಇಂತಹ ಶುಭ್ರವಾತಾವರಣದಲ್ಲಿ ಬೆಳೆದಿರುವ ಜನಾಂಗಕ್ಕೆ ಒಮ್ಮೆಲೇ ಹೊರಗಿನ ಭ್ರಷ್ಟ ಪ್ರಪಂಚದ ಸಂಪರ್ಕವಾದರೆ ಈಗಾಗಿರುವ ಅನಾಹುತಗಳು ಮುಂದೆಯೂ ಆಗುವುದು ಖಂಡಿತ. ಇದಕ್ಕೆ ನನ್ನದೊಂದು ಸಲಹೆ. ಇನ್‌ಸ್ಟಿಟ್ಯೂಟ್ ಆಫ್ ಕರಪ್ಷನ್ ಸ್ಟಡೀಸ್ ಅಂತ ಒಂದು ಸಂಸ್ಥೆಯನ್ನು ಹುಟ್ಟಿಹಾಕಿ ಬೆಳೆಸಿ. ಅದಕ್ಕೆ ವಿಸಿಟಿಂಗ್ ಫಾಕಲ್ಟಿ ಬಹು ಸುಲಭವಾಗಿ ಭಾರತದಿಂದ ಬರುತ್ತಾರೆ. ವಿದೇಶಗಳಿಗೆ ಕಳಿಸುವ ಮುಂಚೆ ನಿಮ್ಮ ಅಧಿಕಾರಿಗಳನ್ನು ಒಂದು ಓರಿಯೆಂಟೇಷನ್ ಶಿಬಿರಕ್ಕೆ ಈ ಇನ್‌ಸ್ಟಿಟ್ಯೂಟಿಗೆ ಕಳಿಸಿ. ಎಲ್ಲ ಸರಿಹೋಗುತ್ತೆ'' ಅಂತ ಹೇಳಿದ. ಮಂತ್ರಿಗಳಿಗೆ ವಿದಾಯ ಹೇಳಿ ನಾವು ಛಾಂಗಿ ಹಾದಿ ಹಿಡಿದೆವು. ಝಿಕ್ವಾನ್ ಸ್ವತಃ ನಮ್ಮನ್ನು ಬೀಳ್ಕೊಡಲು ನಿಲ್ದಾಣಕ್ಕೆ ಬಂದ.

ಬೆಂಗಳೂರಿನತ್ತ ಹಾರುತ್ತಿರುವಾಗ ''ಛೂ ಟ್ಸೆ ಹಾಂಗ್‌ಗೆ ಏನು ಮಾಡಿದೆ? ಅಷ್ಟು ಬೇಗ ಅವನು ಸರಿ ಹೋದನಲ್ಲಾ'' ಅಂತ ಸಹಜ ಕುತೂಹಲದಿಂದ ಕೇಳಿದೆ. ''ಅವನ ಐ ಫೋನ್‌ನಲ್ಲಿ ಡೆಕ್ಕನ್ ಹೆರಾಲ್ಡ್ ಆರ್ಕೈವ್ಸ್ ತೆಗೆದು ರೆಡ್ಡಿ ಸಹೋದರರು, ಯಡ್ಡಿ ಮೊದಲುಗೊಂಡು ಅನೇಕ ಪುಡಾರಿಗಳು ಜೈಲುವಾಸ ಮಾಡುತ್ತಿರುವ ಸುದ್ದಿ ತೋರಿಸಿದೆ. ಅನಂತರ ವಿಕಿಪೀಡಿಯಾದಲ್ಲಿ ಸರ್ ಎಮ್. ವಿಶ್ವೇಶ್ವರಯ್ಯನವರ ಜೀವನ ಚರಿತ್ರೆ ತೋರಿಸಿ ನಮ್ಮ ದೇಶದಲ್ಲಿ ಸಹಾ ಸಿಂಗಪುರದವರನ್ನು ಮೀರಿಸುವಂತಹ ಪ್ರಾಮಾಣಿಕ ಅಧಿ ಕಾರಿಗಳಿದ್ದರು. ಅವರ ಸಂತತಿ ನಶಿಸಿದರೆ ಆಗುವ ಪರಿಣಾಮ ಇದೇ. ನಿಮ್ಮ ದೇಶ ಸರಿಯಾದ ಹಾದಿಯಲ್ಲಿ ನಡೆಯುತ್ತಿದೆ. ಅದು ಮುಂದೆಯೂ ಹೀಗೆ ಮುಂದುವರಿಯಬೇಕಾದರೆ

ನಿಮ್ಮಂತಹ ವಿದ್ಯಾವಂತರು ವಿಚಲಿತರಾಗಬಾರದು ಅಂತ ಬುದ್ಧಿ ಹೇಳಿದೆ. ಅಲ್ಲೇ ಇದ್ದ ಅವಲೋಕಿತೇಶ್ವರ ಬುದ್ಧನ ಮುಂದೆ ಅವನನ್ನು ನಿಲ್ಲಿಸಿ, ಈ ಮಹಾತ್ಮನೂ ಸಹಾ ಭಾರತದಿಂದ ಬಂದವನೆಂಬುದನ್ನು ಎಂದಿಗೂ ಮರೆಯಬೇಡ'' ಅಂತ ಸೇರಿಸಿದೆ. ''ನನ್ನ ಮಾತು ಅವನಿಗೆ ನಾಟಿತು. ಬೆವರಲು ಶುರು ಮಾಡಿದ. ಎಂತಹ ಪ್ರಪಾತದ ಅಂಚಿನಲ್ಲಿದ್ದೆ ನಾನು ಅಂತ ಹಲುಬಿದ. ಆ ಮೇಲೆ ನಾನು ಹಿಂತಿರುಗಿದೆ'' ಅಂದ ಶರಲೇಖ.

''ಅವರು ಸ್ಥಾಪಿಸುವ ಹೊಸ ಸಂಸ್ಥೆಗೆ ಫಾಕಲ್ಟಿ ಅಷ್ಟು ಸುಲಭವಾಗಿ ಸಿಕ್ಕಾರೆಯೇ?'' ಅಂತ ನನ್ನ ಸಂಶಯವನ್ನು ಹೇಳಿದೆ. ''ಯಾಕೆ ಸಿಗುಲ್ಲ, ಹಿಂದೆ ನಮ್ಮ ನಾಡಿನ ಖದೀಮರನ್ನು ಅಂಡಮಾನಿಗೆ ಕಳಿಸುತ್ತಿದ್ದರು. ಈಗ ನಾವು ಅವರೆಲ್ಲರನ್ನು ಸಿಂಗಪುರಕ್ಕೆ ಕಳಿಸುವ ಸುವರ್ಣ ಅವಕಾಶ ಇದು!'' ಎಂದು ಶರಲೇಖ ನಸುನಕ್ಕ. ಬಹಳ ಅಪರೂಪ ಶರಲೇಖನ ನಸುನಗೆ.

❖

---

## ಮಗಳು

ಸುಂದರವಾಗಿ ಬೆಳೆಯುತ
ಅಮ್ಮನಂತೆ ವಿಶ್ವಸುಂದರಿಯಾಗುತ್ತಾಳೋ
ಅಜ್ಜಿಯಂತೆ ಅಪೂರ್ವ ನಟಿಯಾಗಿ
ಕೋಟಿ ಕೋಟಿ ಗಳಿಸುತ್ತಾ
ಎಂ.ಪಿ.ಯೂ ಆಗುತ್ತಾಳೋ
ಅಥವಾ ಕಾರಣ ಕೇಳಿದೊಡೆ ಅಪ್ಪನಂತೆ
ನೋ ಐಡಿಯಾ ಗೆಟ್ ಐಡಿಯಾ
ಎಂದುಬಿಡುತ್ತಾಳೋ

## ಆರೈಕೆ

ಮಗ ಹೇಳಿದ ಅಮ್ಮ
ಈಗ ಸಾಕು ನಿನ್ನ ಹನಿಗವನ ಜಾಮ್ ಗವನ
ಊಟ ಬಡಿಸು ಬಾ ಬೇಗ ಅದಕ್ಕೂ ಮುನ್ನ
ಅಮ್ಮ ಅಂದಳು ಚಿನ್ನ ಕಾಡಬೇಡ ನನ್ನ
ಬರೆಯಲು ಬಂದಿದೆ ಮೂಡ್ ಎಂದು
ಈಗ ಹಿಡಿದಿದ್ದೇನೆ ಪೆನ್ನ
ತಿನ್ನು ಹೋಗು ಬ್ರೆಡ್ಡು ಬನ್ನ

**- ಆರತಿ ಘಟಿಕಾರ, ದುಬೈ**

2012 ಗಣಿತ ವರ್ಷ ವಿಶೇಷ

# ಬದುಕಿಗೆ ಬೇಕೆ ಲೆಕ್ಕ?

- ಗಣೇಶ ಹೆಗ್ಗಡೆ

**ಜ**ನವರಿ 1ರಂದು ಕೊಂಚ ಬೇಗನೆ ಎದ್ದ ನಾನು ಮಡದಿ ವಿಶಾಲು ಮುಸುಕು ತೆಗೆಯುತ್ತಿದ್ದುದನ್ನೇ ಕಾಯುತ್ತಿದ್ದು,

''ಹೊಸ ವರ್ಷದ ಶುಭಾಶಯಗಳು, ವಿಶಾಲು'' ಅಂದೆ.

''ಯಾರಿಗ್ಬೇಕ್ರೀ ನಿಮ್ಮ ಶುಭಾಶಯ. ಈ ಹೊಸ ವರ್ಷವನ್ನು ಬೇಜಾರಿನಿಂದಲೇ ಸ್ವಾಗತಿಸಬೇಕಾಗಿದೆ'' ಎಂದು ಗೊಣಗಿದಳು.

''ಯಾಕೆ ಅಸಮಾಧಾನ? ಮುಖ ತೊಳ್ಕೊ ಕಾಫಿ ತಂದ್ಕೊಡ್ತೀನಿ.''

''ಅಯ್ಯೋ ನಿಮ್ಮ ದಮ್ಮಯ್ಯ, ಇನ್ಮೇಲೆ ನಾನು ಕಾಫಿ, ಟೀ, ಹಾಲು ಯಾವುದನ್ನೂ ಮುಟ್ಟಲ್ಲ, ನೀವೂ ದಿನಕ್ಕೆ ಎರ್‍ಡು ಕಪ್ ಮೇಲೆ ಕಾಫಿ ಕುಡೀ ಬ್ಯಾಡಿ. ಮಂಜುನಾಥನ ಮೇಲೆ ಆಣೆ.''

''ಎಲಾ ಇವಳ .......ಏನಾಯ್ತೇ? ಬೆಳ್ಳಂಬೆಳಗ್ಗೇ......''

''ಹಾಲಿನ ಬೆಲೆ ಲೀಟರ್‌ಗೆ ನಾಡಿದ್ದಿನಿಂದ 3 ರೂ. ಏರಿಸ್ತಾರಂತೆ. ರಾಯರು ದಿನಕ್ಕೆ ಹತ್ತು ಕಪ್ಪು ಕಾಫಿಹೀರೋದರ ಜೊತೆಗೆ ಫ್ರೆಂಡ್ಸು.... ಪಟಾಲಮ್ಮು ಅಂತ ನಮ್ಮನೇಲಿ ನಿತ್ಯ ಕಾಫಿ ಸಮಾರಾಧನೆ ಬ್ಯಾರೆ. ರಾತ್ರೆ ಹಾಗೆಯೆ ಲೆಕ್ಕ ಹಾಕ್ದೆ. ಹಾಲಿನ ಲೆಕ್ಕವೇ ತಿಂಗಳಿಗೆ 1200 ರೂ. ಬಂತು.''

ಖ್ಯಾತ ಗಣಿತ ಶಾಸ್ತ್ರಜ್ಞ ರಾಮಾನುಜನ್ನರ 125ನೇ ವರ್ಷದ ಜನ್ಮ ಶತಾಬ್ಧಿಯ ನೆನಪಾಗಿ 2012ನ್ನು ''ಗಣಿತ ವರ್ಷ'' ಎಂದು ಪ್ರಧಾನಿ ಮನಮೋಹನ ಸಿಂಗರು ಘೋಷಿಸಿದ್ದರು. ಆದರೆ ವಿಶಾಲುವಿನ ದೃಷ್ಟಿಯಲ್ಲಿ ನಮ್ಮಂತಹ ಬಡ ಸಾಮಾನ್ಯರ ದೈನಂದಿನ ಸರಳ ಬದುಕು ಆರಂಭವಾಗುವುದೇ ನಿತ್ಯ ಕಾಡುವ ಇಂತಹ ಲೆಕ್ಕಗಳಲ್ಲಿ, ನಮಗೆ ಪ್ರತಿದಿನವೂ ಗಣಿತದ ದಿನವೆ.

''ರ್ರೀ.... ಆವಾಗ್ಲಿಂದ ಏನು ಯೋಚ್ನೆ ಮಾಡ್ತಿದ್ದೀರಿ? ವಾಕಿಂಗ್‌ಗೆ ಹೋಗೊಲ್ವೆ? ಪಕ್ಕದ್ಮನೆ ರಾಧಮ್ಮನ ಗಂಡ ಬೆಳಿಗ್ಗೆ ಎದ್ದ ತಕ್ಷಣ ಒಂದು ತಂಬಿಗೆ ನೀರು ಕುಡ್ದು ವಾಕಿಂಗಿಗೆ ಹೊರಡ್ತಾರಂತೆ. ಆರೋಗ್ಯಕ್ಕೆ ತುಂಬಾ ಒಳ್ಳೆಯದಂತೆ. ನೀವೂ......''

**'ಗಣಿ ವರ್ಷ'ಕ್ಕೆ ಗುಡ್ ಬೈ ಹೇಳೋಣ. 'ಗಣಿತ ವರ್ಷ'ವನ್ನು ತುಂಬು ಹೃದಯದಿಂದ ಸ್ವಾಗತಿಸೋಣ**

''ಇಲ್ಲೇ ನೀವು ಹೆಂಗಸರು ಲೆಕ್ಕ ತಪ್ಪುವುದು. ನಿಮ್ಮ ರಾಧಮ್ಮನ ಗಂಡ ಹಾಗ್ ಹೊರಟ ಹತ್ತು ನಿಮಿಷಕ್ಕೇ 'ಸತ್ಯಪ್ಪ'ನ ಹೋಟೇಲಿನಲ್ಲಿ ಕುಕ್ಕರ್‌ಬಡ್ಡಿರೋದನ್ನ ನಾನು ನಿತ್ಯ ನೋಡ್ತಿರ್ತೀನಿ. ನೀನು ಆ ಮುಠ್ಠಾಳನ್ನ ಫಾಲೋ ಮಾಡು ಅಂತಿ.....''

''ಹೋಗ್ಲಿ ಬಿಡಿ. ಯಾಕೋ ಬೆಳಿಗ್ಗೆ ಎದ್ದಾಗ್ನಿಂದ ನಿಮ್ಮ ಜ್ಞಾನ ನೆಟ್ಟಗಿಲ್ಲ. ಅರ್ಧ ಕಪ್ ಕಾಫಿ ಮಾಡ್ಕೊಡ್ತೀನಿ ನಿಶ್ಚಿಂತೆಯಾಗಿ ಹೋಗಿ ಬನ್ನಿ.''

ನನ್ನ ಮನಸ್ಸು ಪ್ರಫುಲ್ಲವಾಯಿತು. ನನ್ನ ಹಾಗೆ ಪ್ರಧಾನಿಗಳು ಒಮ್ಮೆಯಾದರೂ ಹೀಗೆ ಗುಡುಗಿದ್ದರೆ ದೇಶದಲ್ಲಿ ಯಾವ ಹಗರಣಗಳೂ ಇರುತ್ತಿರಲಿಲ್ಲ. ತಿಹಾರ್ ಜೈಲಿನ ಯಾವ ಕೊಠಡಿಗಳೂ ತುಂಬುತ್ತಿರಲಿಲ್ಲ. ಪಾಪ ಅವರೂ ಎಲ್ಲೋ ಲೆಕ್ಕ ತಪ್ಪಿರಬೇಕು.

ವಿಶಾಲುವಿಗೆ ಹೊಸವರ್ಷದ ವಿಶ್ ಮಾಡಿ ಮನಸ್ಸು ವಿಷ ಮಾಡಿಕೊಂಡಿದ್ದ ನಾನು ವಾಕಿಂಗ್ ಮೊಟಕುಗೊಳಿಸಿ, ಪ್ರೊ|| ತೋಲಾಂಡರಾಯರ ಮನೆಯ ಕಡೆ ದಾಪುಗಾಲು ಹಾಕಿದೆ. ವರಾಂಡದಲ್ಲಿ ಪತ್ರಿಕೆಯನ್ನು ಹರಡಿಕೊಂಡು ಕುಳಿತಿದ್ದ ಅವರಿಗೆ ನಾನು ಎದುರು ನಿಂತಿದ್ದೇ ಅರಿವಾಗಲಿಲ್ಲ.

''ಹ್ಯಾಪಿ ನ್ಯೂ ಇಯರ್ ಸರ್'' ಅಂದೆ.

ಬೆಚ್ಚಿಬಿದ್ದ ಅವರು, ''ಬಾರಯ್ಯ ಆಪದ್ಬಾಂಧವ. ಹ್ಯಾಪಿ ನ್ಯೂ ಇಯರ್ ಅಂದ್ಯಲ್ಲಾ, ನಾನು ಕಿವಿಗೆ ಹೊಸ ಹಿಯರಿಂಗ್ ಏಡ್ ಹಾಕಿಕೊಂಡಿರುವುದು ನಿನಗೆ ಹ್ಯಾಗೆ ಗೊತ್ತಾಯ್ತು?'' ಎಂದು ಕೇಳಿದರು.

''ಕ್ಷಮಿಸಿ ಸರ್. ನ್ಯೂ ಇಯರ್ ಅಂದ್ರೆ ಹೊಸ ಕಿವಿಗಳು ಅಂತಲ್ಲ, ಹೊಸ ವರ್ಷಕ್ಕೆ ತಮಗೆ ವಿಶ್ ಮಾಡಿದೆ'' ಎಂದು ವಿವರಣೆ ಕೊಟ್ಟೆ.

''ನಮ್ಮ ಹೊಸ ವರ್ಷ ಎರಡು ಕಪ್ ಕಾಫಿಯಿಂದ ಪ್ರಾರಂಭವಾಗಲಿ....'' ಅಡುಗೆ ಮನೆಗೆ ಒಂದು ಮಿಸ್‌ಕಾಲ್ ಕೊಟ್ಟರು.

ನಮ್ಮ ವಿಶಾಲುವಿಗಿಂತ ವಿಶಾಲ ಹೃದಯವುಳ್ಳವರು ಪ್ರೊ|| ತೋಲಾಂಡರಾಯರು. ನನ್ನ ಗುರುಗಳು, ದಾರ್ಶನಿಕರು ಮತ್ತು ನನ್ನ ಗೈಡ್. ನನಗೆ ಯಾಕೋ ನಾಚಿಕೆಯಾಗಿ ''ಸರ್ ದಯವಿಟ್ಟು ಕಾಫಿ ಬ್ಯಾಡಿ, ಹಾಲಿನ ಬೆಲೆ ಗಗನಕ್ಕೇರಿದೆ. ಇನ್ಮೇಲೆ ತಾವೂ ಈ ಹಾಳು ಅಭ್ಯಾಸವನ್ನು ಕಡಿಮೆ ಮಾಡಿಕೊಳ್ಳಿ'' ಅಂದೆ ಸಂಕೋಚದಿಂದ.

''ಅಯ್ಯೊ ಗೌತಮ ಬುದ್ಧ, ಹೀಗೆ ಲೆಕ್ಕದ ಬದುಕು ನಮ್ಮದಾಗಬಾರದಯ್ಯ. ಈ ಜೀವನವೆಂಬ ಲೆಕ್ಕಾಚಾರದಲ್ಲಿ ಕೂಡಿಸಿದಷ್ಟೂ ನಾಮ ಕಳೆದುಕೊಳ್ಳುತ್ತೇವೆ. ಕಳೆದುಕೊಂಡಷ್ಟೂ ನಾವು ಕೂಡಿಸಿಕೊಳ್ಳುತ್ತೇವೆ. ಕೊನೆಗೆ ನಾಮ ಹೋಗುವಾಗ 'ಬ್ಯಾಲೆನ್ಸ್' ನಿಲ್ ಮಾಡಿಕೊಂಡಿರುತ್ತೇವೆ! ಅಬ್ಸರ್ವ್ ಮಾಡಿದ್ಯೇನಯ್ಯಾ? ಬಿರುಗಾಳಿ ಬೀಸಿದಾಗ ಉರುಳುವುದೇ ದೊಡ್ಡ ದೊಡ್ಡ ಮರಗಳು. ಆದರೆ ಬಡಪಾಯಿ ಹುಲ್ಲು ಬಿರುಗಾಳಿಗೆ ಗೌರವ ತೋರಿ, ತಲೆಬಾಗಿ ತನ್ನ ಜೀವ ಉಳಿಸಿಕೊಳ್ಳುತ್ತದೆ. ನಮ್ಮಂಥ ಕಾಮನ್ ಜನರ ಬದುಕು ಹೀಗೆಯೆ. ಡೋಂಟ್ ಗೆಟ್ ಸ್ಕೇರ್ಡ್. ಕಾಫಿಕ್ಷಿ ಕುಡಿ.''

''ಥ್ಯಾಂಕ್ಸ್ ಸರ್'' ಅಂದೆ.

''ಅಂದಹಾಗೆ ಇವತ್ತು ನಮ್ಮ ಶಾಮಿ ಮಗನ ಮುಂಜಿ. ಬರ್‍ತೀ ತಾನೆ?''

''ಮಧ್ಯಾಹ್ನ 12 ಘಂಟೆಗೆ ರೆಡಿಯಾಗಿರಿ. ಮನೆ ದೂರ, ಸ್ಕೂಟರ್ ತರ್‍ತೀನಿ'' ಅಂದೆ.

★★★

ಶಾಮಿಯ ಮನೆ ಮುಂದೆ ಸ್ಕೂಟರ್ ನಿಲ್ಲಿಸಿದಾಗ ಜನರ ಒಂದು ದೊಡ್ಡ ಗುಂಪೇ ಹೊರಗೆ ನೆರೆದಿರುವುದು ಕಾಣಿಸಿತು..... ಅಲ್ಲಲ್ಲಿ ಗುಸುಗುಸು ಮಾತು.... ಯಾಕೋ ಗೊಂದಲದ ವಾತಾವರಣ, ಒಳಗೆ ಗಂಡಸರ ಗದ್ದಲ.

''ಇದು ಮುಂಜಿ ಮನೆ ತಾನೇ? ಏನು ಒಳಗೆ ಗಲಾಟೆ ನಡೀತಿದ್ದ ಹಾಗೆ ಇದೆಯಲ್ಲಾ'' ಎಂದು ಶಾಮಿಯ ನೆಂಟರೊಬ್ಬರನ್ನು ಕೇಳಿದೆವು.

''ಈಗ ತಾನೆ ಬ್ರಹ್ಮ ಭೋಜನ ಮುಗಿದಿತ್ತು. ನಮ್ಮ ಶಾಮರಾಯರು ದಢಾರನೆ ಎಂಜಲು ಎಲೆಯ ಮೇಲೆ ಬಿದ್ದು, ಐದುರುಳು ಹಾಕಿದ್ದಾರೆ. ಅವರನ್ನು ಯಾರೋ ಪುಣ್ಯಾತ್ಮರು ಎಬ್ಬಿಸಿ, ಬಚ್ಚಲು ಮನೆಗೆ ಕರೆದೊಯ್ದಿದ್ದಾರೆ, ಒಟ್ಟಿನಲ್ಲಿ ನಮ್ಮ ಶಾಮರಾಯರಿಗೂ ಮಡೆ ಸ್ನಾನದ ಪುಣ್ಯ ಸಿಕ್ತು.''

ಈ ವಿವರಣೆ ಕೇಳಿ ವಿಚಾರವಾದಿಗಳಾದ ಪ್ರೊ॥ ತೋಲಾಂಡರಾಯರ ಮೈ ನಖಶಿಖಾಂತ ಉರಿದುಹೋಯಿತು. ಅಷ್ಟು ಹೊತ್ತಿಗೆ ಶಾಮಿಯೆ ನಮ್ಮ ಮುಂದೆ ಪ್ರತ್ಯಕ್ಷನಾಗಿ ಕೈ ಜೋಡಿಸಿ ನಿಂತಿದ್ದ.

''ಆರ್ ಯು ಆಲ್ ರೈಟ್ ಶಾಮಿ?'' ಎಂದು ಕೇಳಿದರು ಪ್ರೊ॥ ತೋಲಾಂಡರಾಯರು.

''ಸರ್, ಒಂದು ಪ್ರಮಾದವಾಗಿ ಹೋಯ್ತು. ಮೊದಲನೇ ಪಂಕ್ತಿ ಊಟ ಮುಗಿದಿತ್ತು. ಎಂಜಲು ಎಲೆ ಇನ್ನೂ ತೆಗೆದಿರಲಿಲ್ಲ, ಮೊಸಾಯಿಕ್ ಫ್ಲೋರ್ ಕಾಣಲಿಲ್ಲ, ಸ್ಪೀಡಾಗಿ ನಡೆದು ಬರುತಿದ್ದ ನಾನು ಸಡನ್ನಾಗಿ ಜಾರಿ, ಬ್ಯಾಲೆನ್ಸ್ ತಪ್ಪಿ ಎಂಜಲು ಎಲೆಗಳ ಮೇಲೆ ಉರುಳಿ ಬಿದ್ದೆ. ನಮ್ಮ ನೆಂಟರು ಇದನ್ನೇ ತಪ್ಪಾಗಿ ಅರ್ಥೈಸಿ ವ್ಯಾಖ್ಯಾನ ಮಾಡುತ್ತಿದ್ದಾರೆ. ನೀವೇ ನನ್ನ ಮರ್ಯಾದೆ ಕಾಪಾಡಬೇಕು,'' ಶಾಮಿ ಅವಮಾನದಿಂದ ಅವಲತ್ತುಕೊಂಡ.

ಶಾಮಿ ನೆಂಟರನ್ನೆಲ್ಲಾ ಕರೆದು ಹಾಲಿನ ಜಮಖಾನದ ಮೇಲೆ ಕೂರಿಸಿ ಪ್ರೊ॥ ತೋಲಾಂಡರಾಯರ ಕಿರುಪರಿಚಯ ಮಾಡಿಕೊಟ್ಟು, ವೇದಿಕೆಯನ್ನು ಅವರಿಗೆ ಬಿಟ್ಟುಕೊಟ್ಟ.

''ಮಹಾಜನಗಳೇ, ಮಧ್ಯಾಹ್ನದ ಈ ಪ್ರಸಂಗವನ್ನು ತಾವುಗಳು ತಪ್ಪಾಗಿ ಅರ್ಥೈಸಿದಂತಿದೆ. ವಟುವಿನ ತಂದೆ ಶ್ರೀ॥ ಶಾಮರಾಯರು ಎಂಜಲು ಎಲೆಗಳ ಮೇಲೆ ಉರುಳಿ ಬಿದ್ದದ್ದು ಆಕಸ್ಮಿಕವಾಗಿ ಕಾಲುಜಾರಿ. ಉದ್ದೇಶಪೂರ್ವಕದಿಂದಲ್ಲ, ನಮ್ಮ ಪೂರ್ವಿಕರು ಮಹಾ ಜ್ಞಾನಿಗಳು. ಅವರು ಅಪ್ಪಣೆ ಕೊಡಿಸಿದ್ದು 'ಮಂಡೆ' ಸ್ನಾನ ಮನುಜರಿಗೆ ಒಳ್ಳೆಯದು ಅಂತ. ಹುಲುಮಾನವನ 'ಮಂಡೆ' ಕೆಟ್ಟ ಯೋಚನೆಗಳ ಎಂಜಲುಗಳಿಂದ ತುಂಬಿ ಹೋಗಿದ್ದು, ಇಂಥ 'ಮಂಡೆ'ಗಳಿಗೆ ಪ್ರತಿದಿನವೂ ಸ್ನಾನದ ಔಚಿತ್ಯವಿದೆ ಎಂದರು ಹಿರಿವರೇಣ್ಯರು. ಆದರೆ

ಕಾಲಾನುಕಾಲಕ್ಕೆ ಇದು ಕಿಡಿಗೇಡಿಗಳ ಕುಹುಕದಿಂದ 'ಮಡೆ ಸ್ನಾನ' ಎಂದು ಅಪಭ್ರಂಶವಾಯ್ತು. ಕೆಲ ವರ್ಗದ ಜನರು ಇನ್ನೂ ಬುದ್ಧಿವಂತರಾಗಿದ್ದರು. 'ಮಂಡೆ' ಎಂಬ ಪದವನ್ನು ಇಂಗ್ಲೀಷಿನಲ್ಲಿ ಅರ್ಥೈಸಿಕೊಂಡು ಪ್ರತಿ ಸೋಮವಾರ ಮಾತ್ರ 'ಸ್ನಾನ'ದ ಆಚರಣೆಯನ್ನು ಜೀವನದಲ್ಲಿ ಅಳವಡಿಸಿಕೊಂಡರು. ಈ ಹೊಸ ವರ್ಷ 'ಗಣಿತವರ್ಷ' ಎಂದು ಪ್ರಧಾನಿಗಳು ಘೋಷಿಸಿದ್ದಾರೆ. ನಾವು ಹಳೆಯ ಕಂದಾಚಾರಗಳನ್ನು ಕಳೆದುಕೊಳ್ಳೋಣ. ಸಾಮಾಜಿಕ ಶಾಂತಿಗೆ ನೆರವಾಗುವ ಹೊಸ-ಹೊಸ ಆಚಾರ-ವಿಚಾರಗಳನ್ನು ಕೂಡಿಸಿಕೊಳ್ಳೋಣ. 'ಗಣಿ ವರ್ಷ'ಕ್ಕೆ ಗುಡ್ ಬೈ ಹೇಳೋಣ 'ಗಣಿತ ವರ್ಷ'ವನ್ನು ತುಂಬು ಹೃದಯದಿಂದ ಸ್ವಾಗತಿಸೋಣ.

ಪ್ರೊ॥ ತೋಲಾಂಡರಾಯರ ಮಾತು ಮುಗಿಯುವ ಮುನ್ನ ಸಭೆಯಲ್ಲಿ ಕಿವಿಗಡಚಿಕ್ಕುವ ಕರತಾಡನವಾಯಿತು. ಮತ್ತೆ ದಢಾರನೆ ಕೆಳಗೆ ಬಿದ್ದ ಶಾಮಿ ಪ್ರೊ॥ ತೋಲಾಂಡರಯರ ಪಾದಗಳನ್ನು ಆ ಗದ್ದಲದಲ್ಲಿ ಹುಡುಕುತ್ತಿರುವುದು ಕಾಣಿಸಿತು.

❖

---

## ಆಲೋಚನೆ

ಭಕ್ತಿಯಿಂದ ಮುಂಜಾನೆ
ಗುಡಿಯಲ್ಲಿ ತೀರ್ಥ
ಕತ್ತಲೆಯಾದೊಡನೇ
ಬಾರಿನೊಳಗೆ ಹೋಗುತ್ತಾ ಕೂಗುತ್ತಾನೆ
ಬೀರ್ ತಾ

## ಕಾಲಮಹಿಮೆ

ಚಳಿಗಾಲದಲ್ಲಿ
ಪ್ರೀತಿ, ಚಿನ್ನ, ರನ್ನ, ಎಂಬ
ಪ್ರೀತಿಯ ಉದ್ಗಾರದ ಸಾಕಾರ
ಬೇಸಿಗೆಯ ಕಾಲದಲ್ಲಿ
ಪ್ರೀತಿ ಪ್ರೇಮಕ್ಕೆಲ್ಲ
ನಖರದ ನಕಾರ

**- ಆರತಿ ಘಟಿಕಾರ, ದುಬೈ**

2012 ಗಣಿತ ವರ್ಷ ವಿಶೇಷ

# ನಂಬರ್ ಥಿಯರಿ

**- ಇ.ಆರ್. ರಾಮಚಂದ್ರನ್**

'ಅಜ್ಜಿ ನಿನಗೆ ಗೊತ್ತಾ ಶ್ರೀನಿವಾಸ ರಾಮಾನುಜನ್ ಅವರ 125ನೇ ಜನ್ಮ ದಿನವನ್ನು ಪ್ರತಿವರ್ಷ ಡಿಸೆಂಬರ್ 22ನೇತಾರೀಖು ದಿವಸ 'ರಾಷ್ಟ್ರೀಯ ಮ್ಯಾಥಮ್ಯಾಟಿಕ್ಸ್ ಡೇ' ಅಂತ ನಮ್ಮ ಪ್ರಧಾನಿ ಮನ್ಮೋಹನ ಸಿಂಗ್ ಘೋಷಿಸಿದ್ದಾರೆ.

'ಸಣ್ಣ ವಯಸ್ಸಿನಲ್ಲೇ ದೊಡ್ಡ ಪ್ರತಿಭೆ ತೋರಿಸಿದ್ದಾ ಅಲ್ಲವಾ ರಾಮಾನುಜನ್?'

'ಹೌದಜ್ಜಿ! ಅವರು ಕಾಲೇಜಿಗೆ ಹೋಗಿ ಓದದೇನೇ ಗಣಿತದಲ್ಲಿ ದಿಗ್ಗಜ ಅಂತ ಅನ್ನಿಸಿಕೊಂಡ ಮಹಾನುಭಾವ.'

**'ರಾಮಾನುಜನ್ ಈಗ ಇದ್ದಿದ್ರೆ ಕರ್ನಾಟಕದಲ್ಲಿ ಮಿನಿಸ್ಟರಗಳಿಗೆಲ್ಲಾ ಬಹಳ ಉಪಯೋಗವಾಗಿರೋದು!'**

'ಅದು ಸರಿ! ಈ ವರ್ಷವೇ ಮ್ಯಾಥ್ಸ್ ಡೇ ಎಂದು ಘೋಷಿಸಬೇಕೆಂಬ ಉದ್ದೇಶವೇನಿರಬಹುದು? ಈ ವರ್ಷ ಅವರ ನಂಬರ್ ಥಿಯರಿ ಕೆಲಸಕ್ಕೆ ಬಂದೇ ಬರುತ್ತೇಂತ ಅನ್ನುತ್ತೆ.'

'ಏನು ಹೇಳ್ತಿದ್ದೀಯ ಅಜ್ಜಿ? ಸ್ವಲ್ಪ ಬಿಡಿಸಿ ಹೇಳು.'

'ಅಯ್ಯೋ ಮಂಕೆ! ಮಮ್ತಾ ದೀದಿಗೂ ಕಾಂಗ್ರೆಸ್ಸೂಗೂ ದಿನ ಬೆಳಗಾದ್ರೆ ಲೆಕ್ಕವಿಲ್ಲದಷ್ಟು ಜಗಳಾ ನಡೀತಾ ಇದೆ. ಯಾವ ಸಮಯದಲ್ಲಿ ಮಮ್ತಾ ಕೈಕೊಡಕ್ಕೂ ಸಾಧ್ಯ. ಅದಕ್ಕೆ ನಂಬರ್ ಥಿಯರಿಗೆ ಮೊರೆ ಹೋಗಿದಾರೆ ಮನ್ಮೋಹನ್ರು! ಲಾಲು, ಮುಲಾಯಂ, ಮಾಯ ಅವರುಗಳನ್ನು ಹೇಗೋ ಪುಸಲಾಯಿಸಿ ಅವರ ಎಂ.ಪಿ.ಗಳ ನಂಬರ್‌ನಿಂದ ಸರ್ಕಾರ ಉಳಿಸ್ಕೊಳೊಕ್ಕೆ ಪ್ರಯತ್ನ ನಡೀತಾ ಇದೆ.'

'ಅದಕ್ಕೇ ಮ್ಯಾಥ್ಸ್ ಡೇ ಘೋಷಿಸಿದ್ದಾರೇ ಅಂತಿಯಾ?'

'ಕಣೆ ಕೇಳು! ಅದಿಲ್ದಿದ್ರೆ 2ಜಿ ಘೊಟಾಲಾದಿಂದ ಬರಬೇಕಾಗಿದ್ದ ಒಂದು ಲಕ್ಷ ಎಪ್ಪತ್ತೈದು ಸಾವಿರ ಕೋಟಿ ಎಲ್ಲಿದೆ ಅಂತ ಮೇಡಮ್ ಗಾಂಧಿ ಸಡನ್ನಾಗಿ ಕೇಳಿದ್ರೆ ತತಪಪ ಮಾಡ್ದೆ ಅದಕ್ಕೆ ಈಗಲಿಂದಲೇ ಉತ್ತರ ರೆಡಿ ಮಾಡ್ಕೋಬೇಕಲ್ಲ! ಅದಕ್ಕೆ ರಾಮಾನುಜಂ ಥಿಯರಿ ಏನಾದ್ರೂ ಕೆಲಸಕ್ಕೆ ಬರುತ್ತಾ ಅಂತ ನೋಡ್ತಿದಾರೆ. ಅವರೇ ಇದ್ದಿದ್ರೆ ಅವರನ್ನು ಮಿನಿಸ್ಟರ್ ಫಾರ್ ನಂಬರ್ಸ್ ಅಂತ ಮಾಡಿರೋವ್ರು!'

'ಅದರಲ್ಲಿ ರಾಮನ ಲೆಕ್ಕ, ಕೃಷ್ಣನ ಲೆಕ್ಕ ತೋರಿಸಿ ಅಂದ್ರೆ ಅವ್ರಿಗೂ ಕಷ್ಟವಾಗಿರೋದು ಅಲ್ವಾ ಅಜ್ಜಿ.'

'ಅದು ನಮ್ಮ ಮಾಸ್ಟರ್ ಹಿರಣ್ಣಯ್ಯನವರಿಗೆ ವಿಧಾನ ಸೌಧ ಕಟ್ಟಿದಾಗಿನಿಂದಲೇ ಗೊತ್ತಿದೆ! ಅವರು ಅದರ ವಿಷಯ ಎತ್ತಿದಾಗಲೆಲ್ಲಾ ಅವರನ್ನು ಹೆದರಿಸಲು ಪ್ರಯತ್ನ ಮಾಡಿದ್ರು! ಅವರು ಜಗ್ಗಿಲ್ಲ!'

'ಅದೆಲ್ಲಾ ಜುಜುಬಿ ಅಜ್ಜಿ!'

'ಅದು ನಿಜ. ಈಗಿನ ಕಾಲದಲ್ಲಿ ನಡೆಯೋದು ನೋಡಿದ್ರೆ ಅದು ಡೆಸಿಮಲ್ ಲೆಕ್ಕ. ಅದು ಸರಿ, ರಾಮಾನುಜಂ ಅವರಿಗೆ ಮ್ಯಾಪ್ ಓದಲು ಬರ್ತಿತ್ತಾ?'

'ಯಾಕೆ ಅಜ್ಜಿ?'

'ಅವರಿಗೇನೋ 100 ಬೈ 100, 50 ಎಕರೆ, 20 ಗುಂಟ ನೆಲ ಇರುವ ಮ್ಯಾಪ್ ಅದೆಲ್ಲಾ ಓದಲು ಬಂದಿದ್ರೆ ನಮ್ಮ ಸಂತೋಷ್ ಹೆಗ್ಡೆ ಅವರಿಗೆ ಬಹಳ ಸಹಾಯ ಮಾಡಿರೋವ್ರು. ಬಾಯಲ್ಲೇ ಒಂದು ಚದರಕ್ಕೆ ಎಷ್ಟಾಗುತ್ತೆ, ಮಾರಿದರೆ ಹತ್ತು ಪಟ್ಟು ಲಾಭಾಂತ ಇಟ್ಟುಕೊಂಡ್ರೆ ಎಷ್ಟು ಬರುತ್ತೆ; ಹೆಂಡತಿ, ಮಕ್ಕಳ ಹೆಸರಲ್ಲಿ ಮಾಡ್ಬಿಟ್ರೆ ಟ್ಯಾಕ್ಸ್ನಲ್ಲಿ ಎಷ್ಟು ಸೇವ್ ಮಾಡ್ಬೋದು, ಟ್ರಸ್ಟ್ನಲ್ಲಿ ಹಾಕ್ಬಿಟ್ರೆ ಅದರಿಂದ ಎಷ್ಟು ಬೇರೆ ಅಕೌಂಟ್ಗೆ ಟ್ರಾನ್ಸ್ಫರ್ ಮಾಡ್ಬೋದು... ಇದೆಲ್ಲಾ ರಾಮಾನುಜನ್ ಬೆರಳಿನ ತುದಿಯಲ್ಲೇ ಇಟ್ಟಿರೋವ್ರು. ಅವರು ಈಗ ಇದ್ದಿದ್ರೆ ಕರ್ನಾಟಕದಲ್ಲಿ ನಮ್ಮ ಮಿನಿಸ್ಟರ್‌ಗಳಿಗೆಲ್ಲಾ ಬಹಳ ಉಪಯೋಗವಾಗಿರೋದು!'

'ಅವರಿಗೆ ಓವರ್ ಟೈಮ್ ಸಂಬಳ ಕೊಟ್ಟು ಇಟ್ಕೊಂಡಿರೋವ್ರು! ಅದು ಖಂಡಿತ.'

'ಈಗ ನಂಬರ್ ಥಿಯರಿ ಮಾಡೋವ್ರು ಗವರ್ನಮೆಂಟ್ನಲ್ಲಿ ನಮ್ಮ ನಂದನ್ ನೀಲಕೇಣಿ ಅಲ್ವಾ?'

'ಅದು ಯೂ.ಐ.ಡಿ. ಅಜ್ಜಿ. ಅದು ಬಂದ್ರೆ ಇನ್ನೇನು ಗ್ರಹಚಾರ ಕಾದಿದೆಯೋ ಅಂತ ಪ್ರಧಾನಿಗೆ ಪುಸಲಾಯಿಸಿ ಕ್ಯಾನ್ಸಲ್ ಮಾಡಿಸೋದಿಕ್ಕೆ ಟ್ರೈ ಮಾಡ್ತಾ ಇದಾರೆ ಅಂತ ಸುದ್ದಿ.'

ಹಾಗಾದ್ರೆ ''ಯೂ.ಐ.ಡಿ. ಕೊಲವೇರಿ ಕೊಲವೇರಿ ಡೀ ಆಗುತ್ತೇ ಅನ್ನು!'' ಎಂದು ಹೇಳ್ತಾ ಅಜ್ಜಿ ಎದ್ರು.

❖

---

**ಟೆಲಿವಿಷನ್ನನ್ನು ಕೇವಲ ದಡ್ಡರು ಮಾತ್ರ ನೋಡ್ತಾರೆ ಅಂತ ಅದನ್ನು ಮೂರ್ಖರ ಪೆಟ್ಟಿಗೆ ಅಂತ ಯಾಕೆ ಕರಿತಾರೋ, ಯಾಕೇಂದ್ರೆ ನಾನಂತೂ ಟೆಲಿವಿಷನ್ನನ್ನು ಬಹಳ ಎಂಜಾಯ್ ಮಾಡ್ಕೊಂಡು ನೋಡ್ತೀನಿ ಅಂದನಂತೆ ಒಬ್ಬ ದಡ್ಡ.**

2012 ಗಣಿತ ವರ್ಷ ವಿಶೇಷ

# ಅಗಣಿತ ನೆನಪುಗಳು

- ಭುವನೇಶ್ವರಿ ಹೆಗಡೆ

**ಎ**ಲ್ಲಿಯವರೆಗೆ ಶಾಲೆಗಳಲ್ಲಿ ಗಣಿತವಿರುತ್ತದೆಯೋ ಅಲ್ಲಿಯವರೆಗೂ ಶಾಲೆಯಲ್ಲಿ ಪ್ರಾರ್ಥನೆಯಿರಬೇಕಾಗುತ್ತದೆ ಎಂದು ಹೇಳಿದ್ದು ಒಂದು ಗಣಿತ ಪೀಡಿತ ಮಗುವೇ ಇರಬೇಕು. ಹುಟ್ಟಿಸಿದ ಶಿವ ಹುಲ್ಲು ಮೇಯಿಸುವಷ್ಟೇ ಸತ್ಯ ಹುಟ್ಟಿದ ಮಗು ಗಣಿತ ಕಲಿಯದಿರುತ್ತದೆಯೇ? ಎಂಬ ಮಾತು.

**ಚಿಕ್ಕ ಮಕ್ಕಳು ಹೆದರುವುದು ಗಣಿತಕ್ಕೋ, ಇಲ್ಲಾ ಗಣಿತ ಕಲಿಸುವವರ ಅಗಣಿತ ಸ್ಟ್ರಿಕ್ಟ್ ಮುಖಕ್ಕೋ**

ಚಿಕ್ಕ ಮಕ್ಕಳಿಗೆ ಗಣಿತ ಕಲಿಸುವ ಮಿಸ್ಸುಗಳಿಗೆ, ಮಾಷ್ಟ್ರುಗಳಿಗೆ ದೇವರು ಇನ್ನೇನಲ್ಲದಿದ್ದರೂ ಒಂದು ಸಾಧಾರಣದ ನಗು ಮುಖವನ್ನಾದರೂ ಕರುಣಿಸಬೇಕೆಂದು ಆ ಪ್ರಾರ್ಥನೆಗೆ ಒಂದು ಸಾಲು ಸೇರಿಸುವುದೊಳ್ಳೆಯದು. ಚಿಕ್ಕ ಮಕ್ಕಳು ಹೆದರುವುದು ಗಣಿತಕ್ಕೋ, ಇಲ್ಲಾ ಗಣಿತ ಕಲಿಸುವವರ ಅಗಣಿತ ಸ್ಟ್ರಿಕ್ಟ್ ಮುಖಕ್ಕೋ ಎಂಬುದು ಇವತ್ತಿಗೂ ರಹಸ್ಯವಾಗಿಯೇ ಉಳಿದಿದೆ.

ನನ್ನ ಪುಣ್ಯಕ್ಕೆ ನನ್ನ ಪ್ರೈಮರಿ ಸ್ಕೂಲಿನ ಮಾಸ್ತ್ರು ಎಷ್ಟು ಒಳ್ಳೆಯವರಿದ್ದರೆಂದರೆ ಅವರು ಗಣಿತವನ್ನೇ ಏಕೆ, ಏನನ್ನಾದರೂ ಕಲಿಸುವ ಗೋಜಿಗೇ ಹೋಗುತ್ತಿರಲಿಲ್ಲ. ನಾವೇ ಸ್ಕೂಲಿನ ಸುತ್ತ ಇರುವ ಮರ ಏರಿ ಗಲಗಲ ಅಲುಗಾಡಿಸಿ ತೋಚಿದ್ದನ್ನು ಕಲಿತುಕೊಂಡು ಸುಖವಾಗಿದ್ದೆವು. ನಿಮ್ಮ ತಂಟೆಗೆ ನಾವಿಲ್ಲ ನಮ್ಮ ತಂಟೆಗೆ ನೀವು ಬರಬ್ಯಾಡ್ರಿ ಎಂಬಂಥ ಒಂದು ಅಲಿಖಿತ ಒಪ್ಪಂದ ನಮ್ಮ ನಡುವೆ ಆದಂತಿತ್ತು. ಆಗಾಗ ಎದುರಿನ ಬೆಟ್ಟದಲ್ಲಿ ಕಾಡಾನೆಗಳ ಹಿಂಡು ಬಂದಾಗ ಒಳಗೆ ಶಾಲಾ ಕೊಠಡಿಯಲ್ಲಿ ಕೂತ ಮಾಷ್ಟ್ರನ್ನು ಹೊರಗೆ ಬನ್ನಿ ಸಾರ್ ಆನೆ ಬಂದಿದೆ ಎಂದು ಕೂಗಿ ಕರೆಯುತ್ತಿದ್ದೆವು. ಹೊರಬಂದು ಬಿಸಿಲಿಗೆ ಚಳಿ ಕಾಯಿಸುತ್ತಾ ಆನೆಯ ದೊಡ್ಡ ಗುಣದ ಬಗ್ಗೆ ರೋಚಕವಾಗಿ ಕತೆ ಹೇಳುತ್ತಿದ್ದರೇ ಹೊರತು ಆನೆಯ ತೂಕ, ಆಯಸ್ಸು ಇತ್ಯಾದಿ ಗಣಿತ ಸಂಬಂಧೀ ಸುದ್ದಿಯ ಉಸಾಬರಿಗೇ ಹೋಗುತ್ತಿರಲಿಲ್ಲ ದೇವರಂಥ ಮಾಷ್ಟ್ರು. ಹಾಗಾಗಿ ನಮಗೆ ಜಗತ್ತಿನಲ್ಲಿ ಗಣಿತ ಎಂಬೊಂದು ಹಿಂಸಾ ವಿಧಾನವಿರುವ ಸಂಗತಿಯೇ ಗೊತ್ತಿರಲಿಲ್ಲ ಎನಿಸುತ್ತದೆ.

ಆದರೆ ದೇವರಂಥ ಮಾಷ್ಟ್ರುಗಳನ್ನು ಕಾಡಲೆಂದೇ ಇನ್ಸ್‌ಪೆಕ್ಟ್ರುಗಳೆಂಬ ಹೃದಯ ಹೀನ ಕಿರಾತಕರನ್ನು ಮೇಲಧಿಕಾರಿಗಳೆಂದು ನೇಮಕ ಮಾಡುತ್ತಿದ್ದರೆನಿಸುತ್ತದೆ. ಅವರ ಕೆಲಸವೇ ಶಾಲೆಗಳಿಗೆ ನುಗ್ಗುವುದು, ಬಾಯಿಗೆ ಬಂದ ಪ್ರಶ್ನೆ ಕೇಳುವುದು, ಮಾಷ್ಟ್ರುಗಳ ಜೀವ ತಿನ್ನುವುದು, ಕೆಂಪು ಇಂಕಿನಲ್ಲಿ ಇಲ್ಲದ್ದು ಸಲ್ಲದ್ದು ಬರೆಯುವುದು ಆಗಿತ್ತೆನಿಸುತ್ತದೆ.

ಸುಖವಾಗಿ ಆಡಿಕೊಂಡಿದ್ದ ನಮ್ಮನ್ನು ಪರೀಕ್ಷಿಸಲು ಒಂದು ದಿನ ಇನ್‌ಸ್ಪೆಕ್ಟ್ರು ಬಂದು ನುಗ್ಗಿದರು. ಚೈತ್ರ ವೈಶಾಖಕ್ಕೆ ಯಾವ ಋತು ಇತ್ಯಾದಿ ಪ್ರಶ್ನೆಗಳಿಗೆ ಪಟಪಟನೆ ವಸಂತ ಋತು ಎಂದು ಉತ್ತರಿಸುತ್ತಿದ್ದ ನಮ್ಮನ್ನೆ ಗಣಿತಾಸ್ತ್ರದಿಂದ ಹತಗಣಿತರನ್ನಾಗಿಸಿಬಿಟ್ಟರು. ನಾವು ಕೊಡುತ್ತಿದ್ದ ಉತ್ತರಗಳು ಹಾಗಿದ್ದವು.

''ನೋಡು ವಸಂತಾ ನಿನ್ನ ಹತ್ರ ಐದು ಬಾಳೆಹಣ್ಣು ಇವೆ. ನೀನದ್ರಲ್ಲಿ ಎರಡು ಹಣ್ಣನ್ನು ನಿನ್ನ ತಂಗಿಗೆ ಕೊಡ್ತೀಯ ಆಗ ನಿನ್ನ ಹತ್ತಿರ ಎಷ್ಟು ಹಣ್ಣು ಉಳೀತು'' ಎಂದು ಕೇಳಲಾಗಿ ನಮ್ಮ ಕ್ಲಾಸಿನ ವಸಂತನು ಅಂಜದೇ ಅಳುಕದೇ ''ನನ್ನ ತಂಗಿಗಾ ಸಾರ್, ಜಗಳ ಗಂಟಿ ಸಾರ್ ಅವಳು, ಒಂದು ಹಣ್ಣನ್ನೂ ಕೊಡಲಾರೆ ಎಲ್ಲಾ ನಾನೇ ತಿನ್ನೋದು'' ಎಂದುತ್ತರಿಸಿ ಕುಳಿತುಬಿಟ್ಟ, ಕನಲಿದ ಇನ್‌ಸ್ಪೆಕ್ಟ್ರು ಒಂದು ಕೆಂಪಿಂಕಿನ ನೋಟವನ್ನು ಮಾಷ್ಟ್ರ ಕಡೆ ಬೀರಿ ಇನ್ನೊಂದು ಪ್ರಶ್ನೆ ತೆಗೆದರು.

''ನೋಡು, ನಿನ್ನ ಹೆಸರೇನು, ಆ, ತಿಪ್ಪೇಶ, ತಿಪ್ಪೇಶ ನಿಮ್ಮ ತಂದೆಗೆ ನಾನು ಐದು ನೂರು ರೂಪಾಯಿ ಸಾಲ ಅಂತ ಕೊಟ್ಟಿದೀನಿ. ಪ್ರತಿ ತಿಂಗಳೂ ಆತ ನನಗೆ ಒಂದು ನೂರು ರೂಪಾಯಿ ವಾಪಸ್ ಕೊಡಬೇಕು. ಹಾಗಾದರೆ ನಾಲ್ಕು ತಿಂಗಳು ಕಳೆದ ಬಳಿಕ ನಿಮ್ಮಪ್ಪನ ಬಳಿ ನನ್ನ ಎಷ್ಟು ಹಣ ಉಳಿದಿರುತ್ತದೆ'' ಅಂತ ಕೇಳಿದರು. ತಿಪ್ಪೇಶಿಯೂ ಅಂಜದೇ ಅಳುಕದೇ (ನಮ್ಮ ಶಾಲೆಯ ಯಾರಿಗೂ ಈ ಅಂಜದೇ ಅಳುಕದೇ ವಿಶೇಷಣ ಸಲ್ಲುತ್ತಿತ್ತು) ಎದ್ದು ನಿಂತು ''ಐದು ನೂರು ರೂಪಾಯಿ ಸಾರ್'' ಎಂದುಬಿಟ್ಟ, ಪುನಃ ಕೆಂಪಿಂಕಿನ ಮಾರ್ಕನ್ನು ಮಾಷ್ಟ್ರ ಕಡೆ ಎಸೆದು ಸಿಟ್ಟಿಗೆದ್ದ ಇನ್‌ಸ್ಪೆಕ್ಟ್ರು ಇಷ್ಟು ಸರಳ ಲೆಕ್ಕವನ್ನು ಮಾಡದ ತಿಪ್ಪೇಶಿಗೆ ''ಮೂರ್ಖ ಕೂತ್ಕೊ ನಿನಗೆ ಗಣಿತದ ಬಗ್ಗೆ ಏನೂ ಗೊತ್ತಿಲ್ಲ'' ಎಂದು ಗುಡುಗಿದರು. ತಿಪ್ಪೇಶಿಯೂ ಅಂಜದೇ ಅಳುಕದೇ ''ಇರಬಹುದು ಸಾರ್, ಆದರೆ ನಿಮಗೆ ನಮ್ಮ ಅಪ್ಪನ ಬಗ್ಗೆ ಏನೂ ಗೊತ್ತಿಲ್ಲ'' ಎಂದು ಹೇಳಿ ಕೂತುಬಿಟ್ಟ, ಇಡೀ ಹಳ್ಳಿಯ ಜನ ತಿಪ್ಪೇಶಿಯ ಅಪ್ಪನಿಗೆ ಸಾಲ ಕೊಟ್ಟು ಕೈ ಸುಟ್ಟುಕೊಂಡ ವಿಚಾರ ಇಡೀ ಕ್ಲಾಸಿಗೆ ಗೊತ್ತಿದ್ದ ಸಂಗತಿಯಾದ್ದರಿಂದ ಇಡೀ ಕ್ಲಾಸು ಗೊಳ್ಳೆಂದು ನಕ್ಕರೂ ಮಾಷ್ಟ್ರು ಹಾಗೂ ಇನ್‌ಸ್ಪೆಕ್ಟ್ರು ಮಾತ್ರ ನಗುವುದಿರಲಿ, ಜಗತ್ತಿನಲ್ಲಿ ನಗು ಎಂಬ ಒಂದು ವಸ್ತು ಇದೆ ಎಂಬುದೂ ಗೊತ್ತಿಲ್ಲದವರಂತೆ ಗಂಭೀರ ಸ್ಥಿತಿಯಲ್ಲಿದ್ದರು.

ಕೆಂಪಿಂಕಿನ ರಿಪೋರ್ಟ್ ಪರಿಣಾಮವೋ ಏನೋ ನಮ್ಮನ್ನು ಮರದ ಮೇಲೇ ಇರಲು ಬಿಟ್ಟಿದ್ದ ಮಾಷ್ಟ್ರಿಗೆ ನಮ್ಮೂರಿಂದ ಎತ್ತಂಗಡಿ ಆಗಿ ಪಟ್ಟಣದಲ್ಲಿ ಪಳಗಿದ್ದ ಮೇಷ್ಟ್ರೊಬ್ಬರು ಬಂದಿಳಿದರು. ಆ ಹೊಸ ಮಾಷ್ಟ್ರು ಬರುವ ಬಸ್ಸಿನ ಟಯರು ಪಂಕ್ಚರ್ ಆಗಲಿ, ಅವರಿಗೆ ಜೀವನ ಬೇಸರವೆನ್ನಿಸಿ ಹಿಮಾಲಯಕ್ಕೆ ಹೋಗಿಬಿಡಲಿ ಅಂತ ನಾವು ಅನೇಕಾನೇಕ ಹರಕೆಗಳನ್ನು ಹೊತ್ತೆವು. ಆದರೆ ಒಂದು ಹರಕೆಯೂ ಫಲಿಸದೇ ಹೊಸ ಮಾಷ್ಟ್ರು ಬೆತ್ತದೊಂದಿಗೆ ಬಂದು ಕೂತರು. ಮೊದಲು ಮಾಡಿದ ಕೆಲಸ ಮರದ ಮೇಲಿದ್ದ ನಮ್ಮನ್ನು ಕ್ಲಾಸಿನೊಳಗೆ ಕೂಡಿಸಿ ಸ್ಕೂಲ್ ಮಕ್ಕಳನ್ನಾಗಿಸಿದ್ದು.

ಮರದಿಂದ ಬಂದಿಳಿದ ಮಂಗಗಳಿಗೆ ಮಾನವರಂತೆ ಕೂಡಲು ಗೊತ್ತಿದ್ದರೆ ತಾನೇ? ಗಲ ಗಲ ಕಿಲ ಕಿಲ ನಡೆಸಿಯೇ ಇದ್ದೆವು. ಸೈಲೆನ್ಸ್ ಎಂದರು ಮಾಷ್ಟ್ರು. ಸೈಲೆನ್ಸ್ ಏರ್ಪಡಲಿಲ್ಲ ಕಾರಣ ಆ ಪದ ನಮಗೆ ಗೊತ್ತಿರಲಿಲ್ಲ, ಕೀಪ್ ಕ್ವೈಟ್ ಕೊನೆಗೆ ಷಟಪ್ ಸಹ ವರ್ಕ್ ಔಟ್

ಆಗಲಿಲ್ಲ. ಕಚ ಕಚ ಸಪ್ಪಳ ಮಿತಿ ಮೀರಿತ್ತು. ಆಗ ಮಾಷ್ಟ್ರು ತಮ್ಮ ಬೆತ್ತದಿಂದ ಟೇಬಲ್ಲಿಗೆ ಬಾರಿಸಿ ನೀವು ಹೀಗೇ ಮಾತಾಡ್ತಿದ್ರೆ ನನ್ನ ಬಿ.ಪಿ. ಮೇಲಕ್ಕೇರುತ್ತೆ ನೋಡಿ. ಆಮೇಲೆ ನಾನೇನು ಮಾಡ್ತೀನೋ ನನಗೇ ಗೊತ್ತಿಲ್ಲ ಎಂದರು. ಆಗ ಮಾತ್ರ ಇಡೀ ಕ್ಲಾಸು ತಣ್ಣಗಾಯಿತು. ಯಾಕೆಂದ್ರೆ ಬಿ.ಪಿ. ಮೇಲಕ್ಕೇರುವುದೆಂದರೆ ಹಳ್ಳಿ ಮಂಗಗಳಿಗ್ಯಾರಿಗೂ ಗೊತ್ತಿಲ್ಲ. ರಾಷ್ಟ್ರ ಧ್ವಜದ ಹಾಗೆ ಏನೋ ಮೇಲಕ್ಕೇರಲಿದೆ ಎಂದುಕೊಂಡು ಕಾದೆವು. ಮೇಲಕ್ಕೇರದೇ ನಿರಾಶರಾದೆವು. ಮೌನವಂತೂ ಏರ್ಪಟ್ಟಿತು.

ಅನಂತರದ ಪರ್ವವೇನಿದ್ದರೂ ಚಾಟಿ ಏಟಿನ ಪರ್ವ. ತೆಳ್ಳನೆಯ ಹುಣಿಸೇ ಬರಲು ಹಿಡಿದ ಮಾಷ್ಟ್ರು ಗಣಿತ ಕಲಿಸಿದ ರೀತಿಗೆ ಅನೇಕರು ಮೂರ್ಛೆ ಹೋಗುತ್ತಿದ್ದರು. ಕೆಲವರು ಮೂರ್ಛೆ ಬಿದ್ದಂತೆ ನಟಿಸುತ್ತಿದ್ದರು. ಅವರಿಗೆ ತಣ್ಣೀರು ಚಿಮುಕಿಸಿ ಪಾಠ ಮುಂದುವರಿಸುತ್ತಿದ್ದರು. ಒಂದು ವರ್ಷ ಈ ಬೆತ್ತ ನೀರು ಪ್ರೋಕ್ಷಣೆ ಕಾರ್ಯ ಮುಂದುವರಿಯುತ್ತಿದ್ದಂತೆ ನಮಗೆ ಮನದಟ್ಟಾದ ಒಂದು ವಿಷಯ ಎಂದರೆ – ಗಣಿತವಿಲ್ಲದೇ ಶಾಲೆಯಿಲ್ಲ – ಶಾಲೆಯಿಲ್ಲದೇ ಮನೆಯಲ್ಲಿ ಬಿಡುಗಡೆಯಿಲ್ಲ, ಮಾಷ್ಟ್ರಿಲ್ಲದೇ ಮೋಕ್ಷವಿಲ್ಲ.

ಅಂದ ಬಳಿಕ ಕಲಿಯಲೇ ಬೇಕು. ಅವಡುಗಚ್ಚಿ ಕಲಿತೆವು, ಕಲಿತೆವು. ಅಗಣಿತ ಪರಿಶ್ರಮದಿಂದ ಗಣಿತವನ್ನು ಕಲಿತೆವು. ನೌಕರಿ ಹಿಡಿದವರು ಟಿ.ಎ. ಡಿ.ಎ. ಲೆಕ್ಕ ಹಾಕಲು ಕೃಷಿ ಉದ್ದಿಮೆ ಹಿಡಿದವರು ಲಾಭ, ಸಬ್ಸಿಡಿ ಲೆಕ್ಕ ಹಾಕಲು ಮಾಷ್ಟ್ರು ಕಲಿಸಿದ ಗಣಿತದ ಬಾಳದಾರಿಯ ಲೆಕ್ಕಾಚಾರಕ್ಕೆ ನಮ್ಮನ್ನು ತರಬೇತಿಗೊಳಿಸಿದ್ದನ್ನು ಮಾತ್ರ ಮೂರ್ಛೆ ಬಿದ್ದವರೂ ಸಹ ಒಪ್ಪಿಕೊಳ್ಳುತ್ತಾರೆ, ಸಿಕ್ಕಾಗೆಲ್ಲ ನೆನಪಿಸುತ್ತಾರೆ.

❖

---

ಒಬ್ಬ ಪೋಲೀಸಿನವನು ಒಬ್ಬ ಸರದಾರಜಿಗೆ ಕಳ್ಳನ ಚಿತ್ರವೊಂದನ್ನು ತೋರಿಸಿ ಇವನನ್ನು ನೀನು ಹೇಗೆ ಗುರುತು ಹಿಡೀತೀಯ ಅಂತ ಕೇಳಿದ. ಕಳ್ಳನ ಚಿತ್ರ ನೋಡಿ ಸರದಾರಜಿ ಹೇಳಿದ. ತುಂಬಾ ಸಿಂಪಲ್. ಇವನಿಗೆ ಒಂದೇ ಕಣ್ಣಿದೆ. ಪೋಲೀಸು ಸಿಟ್ಟಿನಿಂದ ಅದು ಒಂದು ಪಕ್ಕದಿಂದ ತೆಗೆದಿರೋ ಚಿತ್ರ ಅಂದು ರೇಗಿ ಇನ್ನೊಬ್ಬ ಸರದಾರಜಿಗೆ ಕೇಳಿದ. ಅವನು ಇವನಿಗೆ ಒಂದೇ ಕಿವಿ ಇದೆ ಅಂದ. ಅದು ಪೋಲೀಸಿನವನಿಗೆ ಸಿಟ್ಟು ತರಿಸಿತು. ಮೂರನೇ ಸರದಾರಜಿನ ಕೇಳಿದ. ಅದಕ್ಕೆ ಅವನು ಈ ಕಳ್ಳ ಕಾಂಟಾಕ್ಟ್ ಲೆನ್ಸ್ ಹಾಕ್ಕೊಂಡಿದ್ದಾನೆ ಅಂದ. ಪೋಲೀಸಿಗೆ ಅಚ್ಚರಿ. ರೆಕಾರ್ಡ್ ತೆಗೆದು ನೋಡಿದರೆ ಹೌದು ಕಳ್ಳ ಕಾಂಟಾಕ್ಟ್ ಲೆನ್ಸ್ ಹಾಕ್ಕೊಂಡಿದ್ದಾನೆ. ಖುಷಿಯಿಂದ ಪೋಲೀಸಿನವನು ನಿನಗೆ ಹೇಗೆ ಗೊತ್ತಾಯ್ತು ಅಂತ ಕೇಳಿದರೆ ಮೂರನೇ ಸರದಾರಜಿ ಹೇಳಿದ ತುಂಬಾ ಸಿಂಪಲ್ ಅವನಿಗೆ ಒಂದೇ ಕಣ್ಣಿದೆ ಕನ್ನಡಕ ಹೇಗೆ ಹಾಕ್ಕೊತಾನೆ ಅಂದಾಗ ಪೋಲೀಸು ಮೂರ್ಛೆಹೋದ.

### ಉತ್ತರ ಪ್ರದೇಶದ ಬಸಪಾ ಆನೆಗಳಿಗೆ ಹೊದಿಕೆ ಒಗ್ಗದಿಕೆ
### ಒಂದು ವೈಜ್ಞಾನಿಕ ಒಳನೋಟವು

# ಮುಸುಕು ತೆಗೆಯೇ ಮಾಯಾ...ಂಗನೇ!

**- ನಾಗೇಶ ಹೆಗಡೆ**

**ಉ**ಪಗ್ರಹಗಳನ್ನು ರಾಕೆಟ್ ಒಳಗೆ ಕೂರಿಸಿ ಕಕ್ಷೆಗೆ ಹಾರಿಸುವ ಮೊದಲು ಅವನ್ನು ಚಿನ್ನದ ಬಣ್ಣದ ಬ್ಯಾಗಡೆಯಂಥ ರ್ಯಾಪರ್ ಹೊದೆಸಿ ಮುಚ್ಚುತ್ತಾರೆ. ಸೂರ್ಯನ ಕ್ರೂರ ದೃಷ್ಟಿ ಅವುಗಳ ಮೇಲೆ ಬೀಳಕೂಡದು. ಒಳಗಿನ ಸೂಕ್ಷ್ಮ ಉಪಕರಣಗಳು ನಾಶವಾಗಕೂಡದು ಎಂದು. ಮುಸುಕು ಹೊದೆದುಕೊಂಡೇ ಅವು ಸದಾ ಕಕ್ಷೆಯಲ್ಲಿ ಸುತ್ತುತ್ತಿರುತ್ತವೆ.

ಉತ್ತರ ಪ್ರದೇಶದಲ್ಲಿ ಮತದಾರರ ದೃಷ್ಟಿ ಮಾಯಾವತಿಯ ಪುತ್ಥಳಿಗಳ ಮೇಲೆ ಅಥವಾ ಬಹುಜನ ಸಮಾಜ ಪಕ್ಷದ ಚಿಹ್ನೆಯಾದ ಆನೆಯ ಪುತ್ಥಳಿಗಳ ಮೇಲೆ ಬೀಳಕೂಡದು ಎಂದು ಚುನಾವಣಾ ಆಯೋಗವೂ (ಸಂಕ್ಷಿಪ್ತವಾಗಿ 'ಚು.ಯೋಗ') ತುಂಬ ಸೈಂಟಿಫಿಕ್ ಯೋಜನೆ ಹಾಕಿ ಅಲ್ಲಿನ ಎಲ್ಲ ವಿಗ್ರಹಗಳಿಗೆ ಹೊದಿಕೆ ಹೊದೆಸುತ್ತಿದೆ.

ಮಾಯಾವತಿಗೆ ಸಂತಸ ಆಗಬೇಕಿತ್ತು. ಕಾಂಗ್ರೆಸ್ ಪಕ್ಷದವರ ಕ್ರೂರದೃಷ್ಟಿ ತನ್ನ ಅಥವಾ ತನ್ನ ಪಕ್ಷದ ಲಾಂಛನಗಳ ಮೇಲೆ ಬೀಳದಂತೆ ಎಚ್ಚರ ವಹಿಸಿದ ಚುಯೋಗಕ್ಕೆ ಧನ್ಯವಾದ ಹೇಳಬೇಕಿತ್ತು. ಬದಲಿಗೆ ಮಾಯಾವತಿಗೆ ಸಿಟ್ಟು ಬಂದಿದೆ. ಗುಡುಗಿದ್ದಾರೆ: ''ಕಾಂಗ್ರೆಸ್‌ನ 'ಹಸ್ತ'ಗಳನ್ನೂ ಮುಚ್ಚಬೇಕಿತ್ತು; ಆರ್.ಎಲ್.ಡಿ.ಯ 'ಹ್ಯಾಂಡ್‌ಪಂಪ್'ಗಳ ಮೇಲೂ ಹೊದಿಕೆ ಹೊದೆಸಬೇಕಿತ್ತು'' ಎಂದು ಎತ್ತರದ ದನಿಯಲ್ಲಿ ಹೇಳಿದ್ದಾರೆ. ಅವರ ಲಾಜಿಕ್ ಪ್ರಕಾರ ಹ್ಯಾಂಡ್‌ಪಂಪ್ ಅಷ್ಟೇ ಅಲ್ಲ, ಸೈಕಲ್, ಕಮಲ, ಹಣತೆ, ಗಾಳಿಪಟ, ಗುದ್ದಲಿ, ನವಿಲು ಇತ್ಯಾದಿ ನೂರೊಂದು ಚಿಹ್ನೆಗಳನ್ನು ಪ್ರತಿನಿಧಿಸುವ ಪಕ್ಷೇತರರ ಲಾಂಛನಗಳ ಮೇಲೂ ಮುಸುಕು ಹಾಕಿಡಬೇಕಿತ್ತು.

ವಿಜ್ಞಾನದ ಒರೆಗಲ್ಲಿಗೆ ಹಚ್ಚಿ ನೋಡಿದಾಗ ಮಾಯಾವತಿಯವರ ಬೇಡಿಕೆ ಸಾಧುವಲ್ಲ ಎನ್ನಿಸುತ್ತದೆ. ಕಾಂಗ್ರೆಸ್‌ನ ಹಸ್ತ ಅಲ್ಲಿ ಎಂದೋ ಮುದುಡಿಹೋಗಿದೆ. ಈಗಂತೂ ಉತ್ತರ ಪ್ರದೇಶದ ಮತದಾರರು ಚಳಿಯಿಂದ ಗಡಗಡ ನಡುಗುತ್ತ ಮುಷ್ಟಿ ಕಟ್ಟಿಕೊಂಡು, ಇಡೀ ಹಸ್ತವನ್ನೇ ಕಂಕುಳಲ್ಲಿ ಬಚ್ಚಿಟ್ಟುಕೊಂಡು ಇಲ್ಲವೇ ಪ್ಯಾಂಟಿನ ಜೇಬಿನಲ್ಲಿ ಮುಚ್ಚಿಟ್ಟುಕೊಂಡು ಓಡಾಡುತ್ತಿದ್ದಾರೆ. ಚಳಿ ಕಾಯಿಸಲೆಂದು ರಸ್ತೆ ಬದಿಯ ಅಗ್ಗಿಷ್ಟಿಕೆಯ ಮುಂದೆ ಕೂತವರು ಮಾತ್ರ ಹಸ್ತ ಬಿಚ್ಚಬಹುದು; ಪರಸ್ಪರ ಹಸ್ತಗಳನ್ನು ನೋಡಬಹುದು. ಆದರೆ ಅವರೆಲ್ಲ ಬಹುತೇಕ ದುರ್ಬಲ ವರ್ಗದವರೇ ಹೆಚ್ಚಾಗಿರುವುದರಿಂದ ಹಾಗೂ ಅವರೆಲ್ಲ ಮಾಯಾವತಿಯ ಪಕ್ಷಕ್ಕೇ ವೋಟ್ ಹಾಕುತ್ತಾರಾದ್ದರಿಂದ ಹಸ್ತ ಕಂಡರೆ ಅವರೇನೂ ವಿಚಲಿತರಾಗುವುದಿಲ್ಲ.

ಇನ್ನು ಹ್ಯಾಂಡ್ ಪಂಪ್ ವಿಷಯ. ಅವುಗಳ ಮೇಲೆ ಮುಸುಕು ಹಾಕಿದರೆ ಜನರು ನೀರಿಗಾಗಿ ಪರದಾಡಬೇಕಾಗಿ ಬರಬಹುದು. ಬದಲೀ ನೀರು ಪೂರೈಕೆ ಮಾಡಬೇಕಾಗುತ್ತದೆ. ಬಾಟಲಿಯಲ್ಲಿ ಅಥವಾ ಸ್ಯಾಷೆಯಲ್ಲಿ ನೀರನ್ನು ತುಂಬಿ ಉಚಿತ ವಿತರಿಸಲು ಹೊರಟರೆ ಅದು ನೀರೆಂದು ಯಾರು ನಂಬುತ್ತಾರೆ? ಮತ್ತೆ ಚು.ಯೋಗದ ಪರವಾಗಿ ಪೊಲೀಸರು ನೀರನ್ನೆಲ್ಲ ಜಪ್ತಿ ಮಾಡಿಕೊಂಡು ಹೋಗಬಹುದು. ಜಪ್ತಿಗೆ ಬಂದವರಲ್ಲಿ ಕೆಲವರು ಕುತೂಹಲಕ್ಕೆಂದು ಸ್ಯಾಷೆಯನ್ನು ಬಿರಿದು, ರುಚಿ ನೋಡಿ ''ಥುತ್ ಇದು ಬರೀ ನೀರು'' ಎಂದು ಕ್ಯಾಕರಿಸಿ ಉಗುಳಿ ಚುಯೋಗಕ್ಕೆ ವರದಿ ನೀಡಿದರೆ, ಅದು ಮಾಯಾವತಿಗೇ ತಿರುಮಂತ್ರವಾಗುವ ಸಾಧ್ಯತೆ ಇದೆ. ಮತದಾರರನ್ನು ಓಲೈಸಲೆಂದೇ ಸರಕಾರಿ ವೆಚ್ಚದಲ್ಲಿ ಚುನಾವಣಾ ವೇಳೆ ನೀರು ಪೂರೈಕೆ ಮಾಡುವಂಥ ಹೊಸ ಯೋಜನೆಯನ್ನು ಜಾರಿಗೆ ತುರುವುದು ಚುನಾವಣಾ ನೀತಿಯ ಉಲ್ಲಂಘನೆ ತಾನೆ?

ಮಾಯಾವತಿಯ ಆಶಯದಂತೆ ಒಂದು ವೇಳೆ ಹ್ಯಾಂಡ್ ಪಂಪ್‌ಗಳಿಗೂ ಮುಸುಕು ಹಾಕಲು ಅದು ನಿರ್ಧರಿಸಿದ್ದರೆ ಅಲ್ಲೂ ಜೀವಂತ ಹ್ಯಾಂಡ್‌ಪಂಪ್‌ಗಳಿಗೆ (ಅಂದರೆ ನೀರುಕ್ಕಿಸಬಲ್ಲ ಪಂಪ್‌ಗಳಿಗೆ) ಬಟ್ಟೆ ಹೊದೆಸುವ ಕೃತ್ಯದಿಂದ ವಿನಾಯಿತಿ ಸಿಗುತ್ತಿತ್ತು ಖರೆ. ಬತ್ತಿ ಹೋದ, ಕೇವಲ ವಿಗ್ರಹದಂತೆ ನಿಂತ ನಿರುಪಯುಕ್ತ ಪಂಪ್‌ಗಳಿಗೆ ಮಾತ್ರ ಮುಸುಕು ಹೊದೆಸಲಾಗುತ್ತಿತ್ತು. ಅಂಥ ಕೆಲಸಕ್ಕೆ ಬಾರದ ಪಂಪ್‌ಗಳು ಎಷ್ಟಿವೆ, ಎಲ್ಲೆಲ್ಲಿವೆ ಎಂಬುದನ್ನು ಪತ್ತೆ ಮಾಡಲು ಹೋಗಿ ಚುಯೋಗ ದೊಡ್ಡದೊಂದು ಹಗರಣವನ್ನೇ ಅನಾವರಣ ಮಾಡುವ ಸಂಭವವಿತ್ತು. ನೀರು ಬಾರದಿದ್ದ ಸ್ಥಳದಲ್ಲೂ ಸುಳ್ಳೇಪಳ್ಳೇ ಬೋರ್‌ವೆಲ್ ಕೊರೆದಿದ್ದೇವೆಂದು ನಕಲಿ ಕಾಗದಪತ್ರ ಸೃಷ್ಟಿಸಿ, ಅವುಗಳ ಮೇಲೆ ಬೆರ್ಚಪ್ಪಗಳಂತೆ ನಿಲ್ಲಿಸಲಾದ ಲಕ್ಷಾಂತರ ಒಣ ಹ್ಯಾಂಡ್‌ಪಂಪ್‌ಗಳ ಒಟ್ಟಾರೆ ಲೆಕ್ಕಾಚಾರ ಬಹಿರಂಗವಾಗುವ ಸಂಭವವಿತ್ತು. ಆಗಲೂ ಮಾಯಾವತಿ ಸರಕಾರ ಇಕ್ಕಟ್ಟಿನಲ್ಲಿ ಸಿಕ್ಕಿಹಾಕಿಕೊಳ್ಳುವ ಸಂಭವವಿತ್ತು.

ಹ್ಯಾಂಡ್‌ಪಂಪ್‌ಗೆ ಮುಸುಕು ಹಾಕುವ ಯೋಜನೆ ಜಾರಿಗೆ ಬಂದಿಲ್ಲವಾದ್ದರಿಂದ ಮಾಯಾವತಿ ಹಾಯಾಗಿರಬಹುದು.

ಆನೆಯ ಪ್ರತಿಮೆಗಳಿಗೆ ಮುಸುಕು ಹಾಕಲು ನಿರ್ಧರಿಸಿದಾಗ ಚುಯೋಗ ಜೀವಂತ ಆನೆಗಳಿಗೆ ಸುತರಾಂ ಮುಸುಕು ಕೂಡದು ಎಂದಿದೆ ತಾನೆ. ಈ ಕಲಂ ಇಲ್ಲದಿದ್ದರೆ ಜೀವಂತ ಆನೆಗಳಿಗೆ ಹಾಗೂ ಜೀವಂತ ಮಾಯಾವತಿಯ ಮೇಲೂ ಬಟ್ಟೆ ಮುಚ್ಚಲು ದರ್ಜಿಗಳು ಮುಂದಾಗುತ್ತಿದ್ದರು. ಮಾಯಾವತಿ ಸಾಕಷ್ಟು ವ್ಯಾಪಕವಾಗಿ ತಮ್ಮನ್ನು ಮುಚ್ಚಿಕೊಂಡೇ ಓಡಾಡುವ ಗೌರವಸ್ಥ ಮಹಿಳೆಯಾದುದರಿಂದ ಅವರಿಗೆ ಮುಸುಕು ಹಾಕಲು ಪುಟ್ಟ ಕರವಸ್ತ್ರವೂ ಸಾಕಾಗಿತ್ತಾದರೂ ಅಂಥ ಕೃತ್ಯಗಳಿಗೆ ಚುಯೋಗ ಅವಕಾಶ ನೀಡಿಲ್ಲ.

ಆದರೂ ಇಡೀ ರಾಜ್ಯದಲ್ಲಿ ಪ್ರತಿಷ್ಠಾಪಿಸಲಾದ ಲಕ್ಷಾಂತರ ಆನೆಗಳಿಗೆ ಮುಚ್ಚಲೆಂದು ಥಾನು ಥಾನು ಬಟ್ಟೆ, ಪ್ಲಾಸ್ಟಿಕ್ ಅಗತ್ಯವಿದ್ದು ತೆರಿಗೆದಾರರ ಮೇಲೆ ಭಾರೀ ಹೊರೆಯೇ ಬೀಳುತ್ತದೆ. ತುಸು ಮೊದಲೇ ಗೊತ್ತಿದ್ದಿದ್ದರೆ ನಮ್ಮಲ್ಲೆ ಅನೇಕ ಜಾದೂಗಾರರು ಆನೆಗಳನ್ನು

ಮಾಯ ಮಾಡುವ ಕೈಚಳಕದಲ್ಲಿ ನಿಷ್ಣಾತರಾಗಿದ್ದಾರೆ. (ತಾಜಮಹಲನ್ನೂ ಮಾಯ ಮಾಡಿದ ಜಾದೂಗಾರರು ಇದ್ದಾರಾದರೂ ಸದ್ಯ ಅದು ಯಾರ ಚುನಾವಣಾ ಚಿಹ್ನೆಯೂ ಆಗಿಲ್ಲವಾದ್ದರಿಂದ ಅದನ್ನು ಅದರ ಪಾಡಿಗೆ ಬಿಟ್ಟುಬಿಡೋಣ. ಅವರಿಗೆ ಎಲ್ಲ ಆನೆ ವಿಗ್ರಹಗಳನ್ನೂ (ದೇವಾಲಯಗಳ ಪ್ರಾಂಗಣಗಳಲ್ಲಿರುವ ಆನೆಗಳನ್ನು ಬಿಟ್ಟು ಉಳಿದೆಲ್ಲವನ್ನೂ) ಮಾಯ ಮಾಡುವ ಗುತ್ತಿಗೆ ಕೊಟ್ಟಿದ್ದಿದ್ದರೆ ಸುಮಾರು ಕೋಟಿ ಹಣ ಉಳಿತಾಯವಾಗುತ್ತಿತ್ತು.

ಮನುಷ್ಯನಿಗೆ ಹೋಮೋ ಸೇಪಿಯನ್ ಸೇಪಿಯನ್ (ಬುದ್ಧಿವಂತ ಪ್ರಾಣಿ) ಎಂದು ವಿಜ್ಞಾನಿಗಳು ತುಂಬ ಹಿಂದೆಯೇ ಗುರುತಿಸಿದ್ದಾರೆ. ಅದು ಚುಯೋಗಕ್ಕೆ ಗೊತ್ತಿಲ್ಲದಿರುವುದು ದುರದೃಷ್ಟಕರ, ಆ ಮಾತು ಬೇರೆ. ಇಂಥ ಬುದ್ಧಿವಂತ ಮನುಷ್ಯನಿಗೆ ರಸ್ತೆ ಬದಿಯಲ್ಲಿ ಮುಸುಕು ಹೊದೆದು ನಿಂತಿರುವುದು ಆನೆಯದೇ ಪ್ರತಿಮೆ ಎಂದು ಗೊತ್ತಾಗಿಯೇ ಆಗುತ್ತದೆ. ಅಲ್ಲಿಗೆ ಚುಯೋಗದ ಆಶಯಗಳೆಲ್ಲ ಗಾಳಿಗೋಪುರವಾದಂತೆಯೇ ಸರಿ. ವಿಜ್ಞಾನದಲ್ಲಿ ತುಸು ಆಸಕ್ತಿ ಇದ್ದಿದ್ದರೆ ಚುಯೋಗ ಇದಕ್ಕಿಂತ ಉತ್ತಮ ವ್ಯವಸ್ಥೆ ಮಾಡಬಹುದಿತ್ತು. ಈಗೀಗ ಯಾರನ್ನಾದರೂ ಮಾಯಮಾಡಬಲ್ಲ 'ಅಗೋಚರ ಹೊದಿಕೆ' ಅರ್ಥಾತ್ **'invisible cloak'**ಗಳು ಅನೇಕ ದೇಶಗಳಲ್ಲಿ ಬಳಕೆಗೆ ಬಂದಿವೆ. ತುಸು ಗೂಗಲಿಸಿ ನೋಡಿದ್ದರೆ ಸಾಕಿತ್ತು. ಅಂಥ ಸುಮಾರು ಹೊದಿಕೆಗಳ ಮಾಡೆಲ್‌ಗಳು, ಕಂಪನಿಗಳು ಸಿಗುತ್ತಿದ್ದವು. ಅಂಥ ಹೊದಿಕೆ ಹೊದೆಸಿದರೆ ಒಳಗಿರುವ ವಸ್ತುವಿನ/ಜೀವಿಯ ದಪ್ಪ, ಅಗಲ, ಎತ್ತರ ಯಾವುದೂ ಗೊತ್ತಾಗುವುದಿಲ್ಲ. ಇಡೀ ಹೊದಿಕೆಯೇ ಸಿನೆಮಾ ಪರದೆಯಂತಾಗಿ ಅದರ ಮೇಲೆ ಚುನಾವಣಾ ಸಂಹಿತೆಗಳನ್ನು ಬಿಂಬಿಸಬಹುದಿತ್ತು. ನಿಜವಾದ ಆನೆಗಳನ್ನು ಸರ್ಕಸ್ಸುಗಳಲ್ಲಿ ಹೇಗೆ ಹಿಂಸಿಸಲಾಗುತ್ತಿದೆ ಎಂಬುದನ್ನು ಕುರಿತು ತಾನು ಈ ಹೊದಿಕೆಗಳ ಮೇಲೆ ಸ್ಲೋಗನ್ ಬರೆಯಬಹುದೇ ಎಂದು ಈಗಾಗಲೇ ಪೆಟಾ (ಪಿ.ಇ.ಟಿ.ಎ.) ಸಂಸ್ಥೆ ಕೇಳಿಕೊಂಡಿದೆ. ಅಂಥ ಪ್ರಾಣಿದಯಾ ಹೇಳಿಕೆಗಳನ್ನು ಡಿಜಿಟಲ್ ತಂತ್ರಜ್ಞಾನದ ಮೂಲಕವೇ ಪ್ರಕ್ಷೇಪಣೆ ಮಾಡಲು ಸಾಧ್ಯವಿತ್ತು.

ಈಗಿನ ವ್ಯವಸ್ಥೆಯಲ್ಲಿ ಒಂದು ಸಮಸ್ಯೆ ಇದೆ. ಉತ್ತರ ಪ್ರದೇಶದಲ್ಲಿ ಸಾಕಷ್ಟು ಮಂಜು ಮುಸುಕಿರುವುದರಿಂದ ಮುಸುಕಿನೊಳಗೆ ಇರುವುದು ಆನೆಯ ವಿಗ್ರಹವೇ ಅಥವಾ ಮಾಯಾವತಿ ವಿಗ್ರಹವೇ ಅಥವಾ ನಿದ್ರಿಸುತ್ತಿರುವ ನಿಜವಾದ ಆನೆಯೇ ಎಂಬುದನ್ನು ಪರೀಕ್ಷಿಸಲೆಂದು ಚುಯೋಗದ ಸದಸ್ಯರು ಮತ್ತು ಪ್ರಾಣಿದಯಾ ಸಂಘದವರು ತವಕಿಸುವುದು ಸಹಜ. ಅಂಥವರು ವಿಗ್ರಹದ ಮೇಲಿನ ಬಟ್ಟೆಯನ್ನು ಅಲ್ಲಲ್ಲಿ ಮುಟ್ಟಿ ನೋಡಿ 'ಇದು ಕಂಬದಂತಿದೆ', 'ಇದು ಪೀಪಾಯಿಯಂತಿದೆ', 'ಇದು ಹಾವಿನಂತಿದೆ', 'ಇದು ಗಡ್ಕರಿಯಂತಿದೆ' ಎಂದೆಲ್ಲ ಟೀಕಿಸುತ್ತಿದ್ದರೆ, ಇವರೆಲ್ಲರೂ ನತದೃಷ್ಟ ದೃಷ್ಟಿವಿಹೀನರೆಂದು ಪರಿಗಣಿಸಿ ಅಂಗವಿಕಲ ಕ್ಷೇಮಾಭಿವೃದ್ಧಿ ಸಂಘದವರು ಅವರನ್ನೆಲ್ಲ ಪುನರ್ವಸತಿ ವ್ಯವಸ್ಥೆಗೆಂದು ಎತ್ತೊಯ್ಯುವ ಸಂಭವವಿದೆ.

ವಿಜ್ಞಾನ ಅಂಥ ತಪಾಸಣೆಗೂ ಸಾಕಷ್ಟು ಸಲಕರಣೆಗಳನ್ನು ನೀಡಿದೆ. ಈಗ ಯಾರೂ ಹೊದಿಕೆಯನ್ನು ಮುಟ್ಟಿ ತಡವಿ ಅದರೊಳಗಿನ ಆಕೃತಿಯನ್ನು ಪತ್ತೆಹಚ್ಚಬೇಕಿಲ್ಲ.

ದೂರದಿಂದಲೇ ರಿಮೋಟ್‌ನಂಥ ಸಾಧನದ ಮೂಲಕ ಇನ್‌ಫ್ರಾ ರೆಡ್ (ಅವಗೆಂಪು) ಕಿರಣಗಳನ್ನು ಹೊದಿಕೆಯ ಮೇಲೆ ಹಾಯಿಸಿ ಅದರೊಳಗಿರುವ ಆಕೃತಿಯ ಥ್ರೀಡೀ ಚಿತ್ರವನ್ನು ತೆಗೆಯಲು ಸಾಧ್ಯವಿದೆ. ಚುಯೋಗದ ವಿಚಕ್ಷಕರಿಗೂ ಅದೊಂದು ಉತ್ತಮ ಸಾಧನವಾಗುತ್ತದೆ.

ಹಿಂದೊಬ್ಬ ರಾಜನಿದ್ದನಂತೆ. ಆತ ಎಲ್ಲೋ ವಿಹಾರಕ್ಕೆ ಹೋದಾಗ ಕಾಲಿಗೆ ಮುಳ್ಳು ಚುಚ್ಚಿತಂತೆ. ಕುಪಿತಗೊಂಡ ಆತ ತನ್ನ ಇಡೀ ರಾಜ್ಯದ ಎಲ್ಲ ರಸ್ತೆಗಳಿಗೆ ಚರ್ಮದ ನೆಲಹಾಸು ಹೊದೆಸುವಂತೆ ಆಜ್ಞಾಪಿಸಿದನಂತೆ. ಬುದ್ಧಿವಂತ ಸಚಿವನೊಬ್ಬ ತಕ್ಷಣ ಮುಂದೆ ಬಂದು 'ಹಾಗೆ ಮಾಡುವ ಬದಲು ಮಹಾಪ್ರಭೂ, ಎಲ್ಲರ ಕಾಲಿಗೆ ಒಂದೊಂದು ಜೋಡಿ ಜೋಡುಗಳನ್ನು ಮಾಡಿಸುವುದು ಕಡಿಮೆ ಖರ್ಚಿನ ಬಾಬತ್ತಲ್ಲವೇ?' ಎಂದಾಗ ರಾಜ ಭೇಷ್ ಎಂದನಂತೆ.

ಅಂಥ ಬುದ್ಧಿವಂತರು ಈ ಬಾರಿ ಅಲ್ಲದಿದ್ದರೂ ಮುಂದಿನ ಚುಯೋಗಕ್ಕಾದರೂ ಸದಸ್ಯರಾಗಬಹುದು. ಆವಾಗ ಇಡೀ ರಾಜ್ಯದ ಎಲ್ಲ ಪ್ರತಿಮೆಗಳಿಗೆ ಹೊದಿಕೆ ಹೊದೆಸುವ ಬದಲು ಎಲ್ಲ ಪ್ರಜೆಗಳ ಕಣ್ಣುಗಳಿಗೆ ಬಟ್ಟೆ ಕಟ್ಟುವುದೇ ಕಡಿಮೆ ವೆಚ್ಚದ ಬಾಬತ್ತೆಂದು ಸಲಹೆ ಕೊಡಬಹುದು. ಅಷ್ಟರಲ್ಲಿ ವಿಜ್ಞಾನ ಇನ್ನಷ್ಟು ಮುಂದುವರೆದಿರುತ್ತದೆ. ಆನೆಗಳ ಅಥವಾ ರಾಜನೇತಾಗಳ ವಿಗ್ರಹಗಳೇ ಕಾಣದಂಥ ವಿಶೇಷ ಕನ್ನಡಕಗಳು ತಯಾರಾಗಿರುತ್ತವೆ. ಎಲ್ಲ ಮತದಾರರೂ ಕಡ್ಡಾಯ ಆ ಬಗೆಯ ಚಶ್ಮಾಗಳನ್ನು ಧರಿಸಿ ಓಡಾಡಬೇಕೆಂದು ಕಾನೂನು ಮಾಡಿದರೆ ಕೋಟ್ಯಂತರ ಮೀಟರ್ ಬಟ್ಟೆ ಮತ್ತು ಪ್ಲಾಸ್ಟಿಕ್ ಉಳಿಸಬಹುದು.

ಅಂಥ ಚತುರಮತಿಗಳ ಚುಯೋಗ ನಮ್ಮದಾಗಲೆಂದು ಹಾರೈಸೋಣ.

❖

---

ಒಬ್ಬ ಗಿಣಿ ಅಂಗಡಿಗೆ ಹೋಗಿ ಒಂದು ಒಳ್ಳೆ ಗಿಣಿ ತೋರಿಸಿ ಅಂದ. ಅಂಗಡಿಯವನು ಒಂದು ಗಿಣಿ ತೋರಿಸಿ ನೋಡಿ ಸರ್ ಇದು ತರಪೇತಾದ ಗಿಣಿ, ಇದು ಮಾತೂ ಆಡುತ್ತದೆ ಅಂದ. ಗಿರಾಕಿ ಅದು ಸರಿ ಆದರೆ ಅದರ ಕಾಲುಗಳಿಗೆ ಹಗ್ಗ ಕಟ್ಟಿದೀರಲ್ಲ ಯಾಕೆ ಅಂತ ಕೇಳಿದ. ಓ ಅದಾ, ನೋಡಿ ಸರ್ ಗಿಣಿ ಮಾತಾಡಬೇಕಾದರೆ ಅದರ ಬಲಗಾಲಿನ ದಾರ ಎಳೆದರೆ ಗಿಣಿ ನಮಸ್ಕಾರ ಬನ್ನಿ ಅನ್ನುತ್ತದೆ. ಎಡಗಾಲಿನದನ್ನು ಎಳೆದರೆ ಹೋಗಿ ಬನ್ನಿ ಮತ್ತೆ ಸಿಗೋಣ ಎನ್ನುತ್ತದೆ ಅಂದ. ಖುಷಿಯಾದ ಗಿರಾಕಿ ಒಂದು ವೇಳೆ ಎರಡೂ ದಾರಗಳನ್ನು ಒಟ್ಟಿಗೇ ಎಳೆದರೆ ಅಂತ ಕೇಳಿದಾಗ ಗಿಣಿ ಏ ದಡ್ಡಾ ಆಗ ನಾನು ಬಿದ್ದುಹೋಗಲ್ವಾ ಅಂತ ಗಿಣಿ ಕೇಳಿತು.

# ಅತ್ತೆಯಾದರೇನು ಶಿವಾ

**- ಸುಕೇಶವ**

**ಅ**ವಳು ಆ ಮನೆಗೆ ಸೊಸೆಯಾಗಿ ಕಾಲಿಟ್ಟಾಗ ತುಂಬಾ ಆಸೆ ಇಟ್ಟುಕೊಂಡಿದ್ದಳು. ನನ್ನ ಮನೆ, ನನ್ನ ಗಂಡ, ಮುಂದೆ ನನ್ನ ಮಕ್ಕಳು, ನಮ್ಮದೇ ಒಂದು ಪುಟ್ಟ ಮನೆ, ಒಂದು ಕಾರು, ಕೈ ತುಂಬಾ ಹಣ, ಹೀಗೆ. ಇದು ಸಾಮಾನ್ಯ ಸಂಗತಿ ಬಿಡಿ. ಅವಳ ಗಂಡ ಅವಳನ್ನು ಚೆನ್ನಾಗಿಯೇ ನೋಡಿಕೊಳ್ಳುತ್ತಿದ್ದ.

ಆದರೆ ಸಾಮಾನ್ಯ ಮಧ್ಯಮ ವರ್ಗದ ಕುಟುಂಬದಂತೆ ಅವಳಿಗೂ ಅತ್ತೆಯದೇ ಕಾಟ. ನಿಂತರೆ ತಪ್ಪು, ಕೂತರೆ ತಪ್ಪು, ಹಾಗೆ ಮಾಡಿದರೆ ತಪ್ಪು, ಹೀಗೆ ಮಾಡಿದರೆ ತಪ್ಪು. ಅವರೇ ಹೊಂದಿಕೊಳ್ಳುತ್ತಾರೆ ಇಲ್ಲ ನಾನೇ ಹೊಂದಿಕೊಳ್ಳುತ್ತೇನೆ ಅಂತ ಅವಳು ಅಂದುಕೊಂಡಿದ್ದು ಸುಳ್ಳಾಯಿತು. ಇನ್ನೂ ಕೆಲವು ದಿನಗಳು ಕಳೆದ ನಂತರ ನನಗೆ ಅತ್ತೆಯೊಂದಿಗೆ ಬದುಕೋದೇ ಕಷ್ಟ ಅನಿಸಿತು. ಅವಳು ಮತ್ತು ಅತ್ತೆ ಚೆನ್ನಾಗಿ ಜಗಳ ಆಡಿ ಪರಸ್ಪರ ಬೈದಾಡಿಕೊಳ್ಳುತ್ತಿದ್ದರು. ಗಂಡ ಇವರ ಜಗಳಕ್ಕೆ ತಲೆಹಾಕದೇ ನೆಮ್ಮದಿಯಾಗಿದ್ದ. ಅವಳು ಗಂಡನೊಡನೆ ದೂರು ಕೊಟ್ಟರೂ ಅವನು ನೀನು ಅಮ್ಮನೊಂದಿಗೆ ಹೊಂದಿಕೊಂಡು ಹೋಗು ಅನ್ನುತ್ತಿದ್ದ. ಇನ್ನು ಮುಂದೆ ಅತ್ತೆಯೊಂದಿಗೆ ಇರೋದು ಸಾಧ್ಯವೇ ಇಲ್ಲ ಅನಿಸಿದ ದಿನ ಅವಳು ಅತ್ತೆಯನ್ನು ಹೇಗಾದರೂ ಮಾಡಿ ಮುಗಿಸಿಬಿಡಬೇಕು ಅಂತ ತೀರ್ಮಾನಿಸಿದಳು.

ಆದರೆ ಅತ್ತೆ ಸಾವು ದಿಢೀರ್ ಅಂತ ಆಗಬಾರದು, ಅವಳು ದಿನೇ ದಿನೇ ಅಷ್ಟಿಷ್ಟು ಅಂತ ಸಾಯಬೇಕು. ತನ್ನ ಮೇಲೆ ಅನುಮಾನ ಬರಬಾರದು. ತಾನು ಕೊಲೆಗಾರ್ತಿ ಅಂತ ಅನಿಸಿಕೊಳ್ಳಬಾರದು. ಸದ್ದಿಲ್ಲದೇ ಅತ್ತೆಯ ಸಾವು ಸಂಭವಿಸಿ ಇದು ಸಹಜ ಸಾವು ಅನಿಸಿಬಿಡಬೇಕು ಅಂತ ಮನಸ್ಸಿನಲ್ಲಿಯೇ ಲೆಕ್ಕ ಹಾಕಿದಳು. ಈ ವಿಷಯ ಯಾರೊಂದಿಗೂ ಚರ್ಚಿತವಾಗುವಂಥದಲ್ಲವಾದರೂ, ಬೇರೆಯವರ ಸಹಾಯ ಇಲ್ಲದೇ ಈ ಕೆಲಸ ಸಾಗುವಂತಿಲ್ಲ ಅನಿಸಿತು. ತುಂಬಾ ದಿನಗಳು ಯೋಚಿಸಿದ ಅವಳಿಗೆ ಹೊಳೆದಿದ್ದು ಒಂದು ಉಪಾಯ.

ಆಗ ಅವಳು ಒಬ್ಬ ಸನ್ಯಾಸಿಯ ಬಳಿ ಹೋಗಿ ತನ್ನ ಸ್ಥಿತಿಯನ್ನು ಹೇಳಿಕೊಂಡು ನನಗೆ ನೀವು ಸಹಾಯ ಮಾಡಬೇಕು ಅಂತ ಬೇಡಿಕೊಂಡಳು. ಸನ್ಯಾಸಿ ಅವಳ ಕಥೆಯನ್ನೆಲ್ಲ ಕೇಳಿಕೊಂಡ ನಂತರ ಬದುಕಿನ ಕೆಲವು ಸೂಕ್ಷ್ಮಗಳನ್ನು ತಿಳಿಸಿದ, ಹೊಂದಿಕೊಂಡು ಹೋಗುವ ವಿಧಾನಗಳನ್ನು ತಿಳಿಸಿದ. ಆದರೂ ಸೊಸೆ ಯಾವುದಕ್ಕೂ ಜಗ್ಗದೇ ಅತ್ತೆಯ ಸಾವೇ ತನ್ನ ಅಂತಿಮ ಗುರಿ ಎಂದಾಗ ಸನ್ಯಾಸಿ ಅವಳಿಗೆ ಒಂದು ಚೂರ್ಣದ ಪುಡಿಯನ್ನು ಕೊಟ್ಟು ಇದನ್ನು ನಿನ್ನ ಅತ್ತೆಗೆ ಹೇಗಾದರೂ ಮಾಡಿ ಆಹಾರದಲ್ಲಿ ಮಿಶ್ರ ಮಾಡಿ ಕೊಡುತ್ತಿರು. ಆರು ತಿಂಗಳಲ್ಲಿ ಅವರು ಸಾಯುತ್ತಾರೆ ಅಂತ ಹೇಳಿದ. ಅವಳಿಗೆ ತುಂಬಾ ಸಂತೋಷವಾಯಿತು.

ಆಗ ಸನ್ಯಾಸಿ ಹೇಳಿದ, ನೀನು ಇನ್ನೊಂದು ಬಹುಮುಖ್ಯವಾದ ಕೆಲಸ ಮಾಡಬೇಕು, ಹಾಗೆ ಮಾಡಿದರೆ ಮಾತ್ರ ಚೂರ್ಣದ ಪುಡಿಯ ಶಕ್ತಿ ಗೊತ್ತಾಗುತ್ತೆ ಅಂದ. ಅವಳು ಹೇಳಿ

ನಾನು ಏನು ಮಾಡಬೇಕು, ಈ ಅತ್ತೆಯಿಂದ ಪಾರಾಗಲು ನಾನು ಏನು ಮಾಡೋಕೂ ಸಿದ್ದ ಅಂದಳು. ಆಗ ಆ ಸನ್ಯಾಸಿ ಹೇಳಿದ. ಇಂದಿನಿಂದ ನೀನು ಅತ್ತೆಗೆ ಎದುರು ಮಾತಾಡಬಾರದು. ಮಾತಾಡಿದರೂ ಧ್ವನಿ ಎತ್ತರಿಸಬಾರದು, ಅವರನ್ನು ಬೈಯ್ಯಬಾರದು, ಅವರಿಗೆ ಬೇಜಾರಾಗುವ ಹಾಗೆ ನಡೆದುಕೊಳ್ಳಬಾರದು. ಅವರ ಕೆಲಸದಲ್ಲಿ ತಪ್ಪು ಹುಡುಕಬಾರದು, ಅವರು ಮಾಡಿದ್ದು ಒಳ್ಳೆಯದಕ್ಕೇ ಅಂತ ಅಂದುಕೊಳ್ಳಬೇಕು, ಅವರು ಒಂದು ಮಾತು ಅಂದರೂ ನೀನು ಸುಮ್ಮನಿರಬೇಕು. ನೀನು ಹೇಳಬೇಕಾಗಿರುವುದನ್ನು ತಾಳ್ಮೆಯಿಂದ, ನಿಧಾನವಾಗಿ ಹೇಳಬೇಕು, ನಿನ್ನ ಮಾತೇ ನಡೆಯಲಿ ಅಂತ ಹಠ ಮಾಡಬಾರದು. ಹೀಗೆ ಮಾಡಿದರೆ ಈ ಪುಡಿ ತನ್ನ ಶಕ್ತಿಯನ್ನು ಆದಷ್ಟು ಬೇಗನೇ ತೋರಿಸುತ್ತದೆ, ಅಂದರೆ ನಿನ್ನ ಅತ್ತೆಯ ಸಾವಿಗೆ ನೀನು ಆರು ತಿಂಗಳವರೆವಿಗೂ ಕಾಯಬೇಕಾಗಿಲ್ಲ ಅಂದ.

ಸೊಸೆ ತುಂಬಾ ಸಂತೋಷದಿಂದ ಸನ್ಯಾಸಿ ಹೇಳಿದ್ದನ್ನೆಲ್ಲ ಮನದಟ್ಟು ಮಾಡಿಕೊಂಡು ಮನೆಗೆ ಬಂದು ಅವತ್ತಿನಿಂದಲೇ ಸನ್ಯಾಸಿ ಕೊಟ್ಟ ಪುಡಿಯನ್ನು ಅತ್ತೆಗೆ ಕೊಡಲಾರಂಭಿಸಿದಳು. ಸನ್ಯಾಸಿ ಹೇಳಿದಂತೆ ಅತ್ತೆಗೆ ಎದುರುವಾದಿಸದೇ, ಬೈಯದೇ, ಕುಟುಕದೇ, ಅತ್ತೆಯ ಎಲ್ಲ ಕೆಲಸಗಳನ್ನೂ ಒಪ್ಪಿಕೊಂಡು ಇದ್ದಳು. ದಿನಾ ಪುಡಿಯನ್ನು ಆಹಾರದಲ್ಲಿ ಮಿಶ್ರ ಮಾಡಿ ಕೊಡುವುದನ್ನು ಮಾತ್ರ ಮರೆಯಲಿಲ್ಲ. ಕೆಲವು ದಿನ ಕಳೆದ ಮೇಲೆ ಅತ್ತೆಯ ಸ್ವಭಾವ ಬದಲಾಗುತ್ತಾ ಬಂದದ್ದನ್ನು ಗಮನಿಸಿದಳು.

ಅತ್ತೆ ಸೊಸೆಯ ತಪ್ಪು ಹುಡುಕುವುದನ್ನು ಬಿಟ್ಟಳು. ಸೊಸೆಯ ಮೇಲೆ ರೇಗುವುದನ್ನು ಕಡಿಮೆ ಮಾಡಿದಳು. ಸೊಸೆಯನ್ನು ಮಗಳಂತೆಯೇ ನೋಡಿಕೊಳ್ಳಲಾರಂಭಿಸಿದಳು. ಇದರಿಂದಾಗಿ ಮನೆಯಲ್ಲಿ ನೆಮ್ಮದಿ ನೆಲೆಸಿತು. ಅತ್ತೆ ಸೊಸೆ ಪರಸ್ಪರ ಪ್ರೀತಿಯಿಂದ ಇರೋಕೆ ಷುರು ಮಾಡಿದರು. ಇದರಿಂದಾಗಿ ಮಗನಿಗೂ ಸಖತ್ ಆಶ್ಚರ್ಯ ಉಂಟಾಯಿತು. ಹೀಗಿದ್ದರೂ ಅವಳು ಅತ್ತೆಗೆ ಪುಡಿ ಕೊಡುವುದನ್ನು ನಿಲ್ಲಿಸಲಿಲ್ಲ. ಹೀಗೇ ಐದು ತಿಂಗಳು ಕಳೆಯಿತು. ಅತ್ತೆ ಸಂಪೂರ್ಣವಾಗಿ ಬದಲಾಗಿದ್ದರು.

ಆಗ ಒಂದು ದಿನ ಇದ್ದಕ್ಕಿದ್ದಂತೆ ಸೊಸೆಗೆ ಅತ್ತೆ ಇರೋದು ಇನ್ನು ಒಂದೇ ತಿಂಗಳು ಅನ್ನೋದು ನೆನಪಿಗೆ ಬಂದು ನೋವು, ಸಂಕಟ ಕಾಡಲಾರಂಭಿಸಿತು. ನಾನು ತಪ್ಪು ಮಾಡುತ್ತಿದ್ದೇನೆ ಅನಿಸಿತು. ಅನ್ಯಾಯವಾಗಿ ಅತ್ತೆಯ ಪ್ರಾಣವನ್ನು ತೆಗೆದುಬಿಡುತ್ತಿದ್ದೀನಲ್ಲ ಅಂತ ಅನಿಸಿತು. ಆದರೆ ಈಗ ಏನು ಮಾಡೋದು, ಕಾಲ ಮಿಂಚಿದೆ. ಇನ್ನೊಂದು ತಿಂಗಳಲ್ಲಿ ಅತ್ತೆ ಸತ್ತೇ ಹೋಗುತ್ತಾರೆ. ಅದಕ್ಕೆ ನಾನು ಕಾರಣ ಅಂತ ಯಾರಿಗೂ ಗೊತ್ತಾಗೋಲ್ಲ. ಆದರೆ ಈ ಕೊರಗು ನನ್ನ ಇಡೀ ಜೀವನವನ್ನೇ ತಿಂದುಬಿಡುತ್ತದೆ ಅನಿಸಿ ಭಯವಾಯಿತು. ಅತ್ತೆಯನ್ನು ಕಂಡರೆ ಅಯ್ಯೋ ಅನಿಸೋದು. ಮರುಕ ಉಂಟಾಯಿತು.

ಆಗ ಮತ್ತೆ ಅವಳಿಗೆ ಸನ್ಯಾಸಿಯ ನೆನಪಾಗಿ ಅಲ್ಲಿಗೆ ಓಡಿದಳು. ಅವರ ಪಾದಕ್ಕೆ ಬಿದ್ದು ನಾನು ಮಾಡಿದ್ದು ತಪ್ಪಾಯಿತು. ನನ್ನ ಅತ್ತೆ ನನಗೆ ಬೇಕು, ಅವರು ಸಾಯೋದು ಬೇಡ. ಹೇಗಾದರೂ ಮಾಡಿ ಅವರನ್ನು ಬದುಕಿಸಿಕೊಡಿ. ಅದಕ್ಕೆ ಬೇರೆ ಏನಾದರೂ ಚೂರ್ಣ ಇದ್ದರೆ ಕೊಡಿ ಅಂತ ದುಂಬಾಲು ಬಿದ್ದಳು.

ಆಗ ಸನ್ಯಾಸಿ ನಗುತ್ತಾ, ಹೆದರಬೇಡ, ನಿನ್ನ ಅತ್ತೆಗೆ ಏನೂ ಆಗೋದಿಲ್ಲ. ನಾನು ಕೊಟ್ಟಿದ್ದು ವಿಷದ ಚೂರ್ಣ ಅಲ್ಲ, ಸಾಧಾರಣ ಶಕ್ತಿ ಬರೋ ಚೂರ್ಣ, ಆದರಿಂದ ಜೀವಕ್ಕೆ ಏನೇನೂ ಅಪಾಯವಿಲ್ಲ. ನೀನು ಐದು ತಿಂಗಳ ಹಿಂದೆ ನನ್ನ ಬಳಿ ಬಂದಾಗ ನೀನು ಎಷ್ಟು ವ್ಯಘ್ರವಾಗಿದ್ದೆ. ಅತ್ತೆಯನ್ನು ನಿರ್ನಾಮ ಮಾಡೋ ಸಂಕಲ್ಪ ಮಾಡಿದ್ದೆ. ನೀನಿದ್ದ ಪರಿಸ್ಥಿತಿಯನ್ನು ಗಮನಿಸಿದಾಗ ನೀನು ಕೆಲವು ದಿವಸಗಳ ಕಾಲ ತಾಳ್ಮೆಯಿಂದಿರೋದು ತುಂಬಾ ಅವಶ್ಯಕ ಅಂತ ನನಗೆ ಅನಿಸಿತು. ಅದಕ್ಕೆ ಚೂರ್ಣ ಕೊಟ್ಟೆ. ನನ್ನ ಸಲಹೆಯಂತೆ ನೀನು ಈ ಐದು ತಿಂಗಳಲ್ಲಿ ನಿನ್ನ ಅತ್ತೆಯನ್ನು ಗೌರವದಿಂದ ನಡೆಸಿಕೊಂಡಿದ್ದೀಯ, ಅವರಿಗೆ ಎದುರಾಡಿಲ್ಲ, ಅವರಿಗೆ ನೋಯಿಸಿಲ್ಲ, ಅವರ ಇಷ್ಟದಂತೆಯೇ ನಡೆದುಕೊಂಡಿದೀಯ. ಇದರಿಂದ ನೀನು ಹೇಗೆ ನಡೆದುಕೊಂಡೆಯೋ ನಿನ್ನ ಅತ್ತೆಯೂ ಹಾಗೆಯೇ ನಡೆದುಕೊಂಡರು. ಅವರಿಗೂ ತಮ್ಮ ತಪ್ಪಿನ ಅರಿವಾಗಿ ನಿನ್ನನ್ನು ಪ್ರೀತಿಯಿಂದ ನೋಡಿಕೊಳ್ಳಲಾರಂಭಿಸಿದರು. ನಿಮ್ಮಬ್ಬರಲ್ಲಿ ಪ್ರೀತಿಯ ಅರಿವು ಮತ್ತು ಅರಿವಿನ ಹರಿವು ಉಂಟಾಯಿತು. ಆಗ ನಿನಗೆ ನಿನ್ನ ತಪ್ಪು ಎಂಥದೆಂಬುದು ಗೊತ್ತಾಯಿತು. ಹಾಗೆಯೇ ನಿನ್ನ ಅತ್ತೆಗೂ ಅವರ ತಪ್ಪಿನ ಅರಿವಾಯಿತು. ಹೀಗಾಗಿ ಅವರು ಬದಲಾದರು. ಅವರು ಬದಲಾದ್ದರಿಂದ ನೀನೂ ಬದಲಾದೆ. ಮತ್ತೆ ಅತ್ತೆಯ ಮೇಲೆ ಪ್ರೀತಿ ಉಕ್ಕಲಾರಂಭಿಸಿತು. ಇನ್ನು ಮುಂದೆ ಯಾವುದೇ ಆತಂಕ ಇಲ್ಲದೇ, ತಾಳ್ಮೆ ಎನ್ನುವ ಗುಣವನ್ನು ಇಡೀ ಜೀವನದುದ್ದಕ್ಕೂ ಅಳವಡಿಸಿಕೊಂಡು ನೆಮ್ಮದಿಯಿಂದ ಬಾಳಿ ಎಂದು ಹೇಳಿ ಕಳಿಸಿದರು. ಚೂರ್ಣದ ವಿಷಯ ಯಾರಿಗೂ ಗೊತ್ತಾಗಲಿಲ್ಲವಲ್ಲ ಎಂದು ನೆಮ್ಮದಿಯಿಂದ ಸೊಸೆ ಮನೆಗೆ ಬಂದಳು.

ಬದುಕಿನಲ್ಲೂ ಅಷ್ಟೇ ಮೊದಲು ನಾವು ಬದಲಾಗಬೇಕು, ಆಗ ಇತರರು ಖಂಡಿತ ಬದಲಾಗುತ್ತಾರೆ. ಕೋಪ ಬರೋದು ಸಹಜ. ಆದರೆ ಕೋಪ ಬಂದಾಗ ಮನಸ್ಸಿಗೆ ಬಂದಂತೆ ನಡೆದುಕೊಳ್ಳದೆ, ತಾಳ್ಮೆಯ ಜೊತೆಜೊತೆಗೆ ಸಂವೇದನಾಶೀಲತೆಯನ್ನು ಬೆಳೆಸಿಕೊಂಡು ನಡೆದರೆ ಜೀವನ ಸುಖಮಯವಾಗಿರುತ್ತದೆ ಅಂತ ಹೇಳಿ ಕಳಿಸಿದರು.

ನಮ್ಮ ಜೀವನದಲ್ಲೂ ಅಷ್ಟೆ, ತಾಳ್ಮೆಗೆ ಮಹತ್ವ ಕೊಟ್ಟರೆ ಬಹಳಷ್ಟು ಸಮಸ್ಯೆಗಳು ತಾನೇ ತಾನಾಗಿ ಪರಿಹಾರವಾಗಿಬಿಡುತ್ತವೆ.

*(ಇಂಟರ್ ನೆಟ್ ನಿಂದ ನೆಟ್ಟಗೆ ಹಾರಿಸಿದವರು – ಸುಕೇಶವ )*

---

ಪ್ರೊಫೆಸರು ತಮ್ಮ ಸಹಾಯಕನಿಗೆ ಯಾರು ಬಂದು ಕೇಳಿದರೂ ನಾನು ಮನೆಯಲ್ಲಿ ಇಲ್ಲ ಅಂತ ಹೇಳು ಅಂದು ಒಳಗೆ ಹೋಗಿ ಬಹಳ ತುರ್ತಿನ ಕೆಲಸದಲ್ಲಿ ತೊಡಗಿದ್ದರು. ಅವರ ಆಳು ಬಂದು ಸರ್, ಯಾರೋ ನಿಮ್ಮನ್ನು ಹುಡುಕಿಕೊಂಡು ಬಂದಿದಾರೆ ನೀವು ಮನೆಯಲ್ಲಿಲ್ಲ ಅಂತ ಎಷ್ಟು ಹೇಳಿದರೂ ಕೇಳ್ತಿಲ್ಲ ಅಂದ. ಅದಕ್ಕೆ ಪ್ರೊಫೆಸರು ಅವಲಿಗೆ ನಾನೇ ಹೋಗಿ ಹೇಳಬೇಕೂಂತ ಕಾಣುತ್ತೆ ಅಂತ ಎದ್ದುಹೋದರು.

# ಯಕ್ಷಿಣಿ ಮತ್ತು ನಾನು......

## - ಗೊರೂರು ರಾಮಸ್ವಾಮಿ ಅಯ್ಯಂಗಾರ್

**ನ**ಮಗೆ ಆ ಕಾಲದಲ್ಲಿ ದೊರೆತ ಮತ್ತೊಂದು ವಿನೋದವೆಂದರೆ ಪ್ರೊಫೆಸರ್ ಷಾರ ಎಂಬುವವರ ಮ್ಯಾಜಿಕ್ ಪ್ರದರ್ಶನ-ಯಕ್ಷಿಣಿ ಪ್ರದರ್ಶನ. ಷಾರ ಯಕ್ಷಿಣಿ ಪ್ರದರ್ಶನವೆಂದರೆ ಅಖಿಲ ಭಾರತ ಖ್ಯಾತಿಯ ಪ್ರದರ್ಶನ. ಅವರು ಅದನ್ನು ಬಹಳ ಠೀವಿಯಿಂದ ನಡೆಸುತ್ತಿದ್ದರು. ಉತ್ತಮವಾದ ಚಿತ್ರಿತ ಪರದೆಗಳು. ರಂಗಸ್ಥಳದ ಅಲಂಕಾರ; ಪ್ರತಿಯೊಂದು ದೃಶ್ಯಕ್ಕೂ ಬೇರೆ ಬೇರೆ ಸಂಗೀತ. ಸ್ವತಃ ಷಾರವರೇ ಮಾಯಾಲೋಕದ ಚಕ್ರವರ್ತಿಯಂತೆ ನಿಜವಾಗಿ ಜಾರ್ಜ್ ಚಕ್ರವರ್ತಿಯಂತೆ ಕೆಂಪು ಮಖಮಲ್ಲಿನ ನಿಲುವಂಗಿ; ಅದಕ್ಕೆ ತೋಳಿನಲ್ಲಿ ಎದೆಯಲ್ಲಿ ತುದಿಗಳಲ್ಲೆಲ್ಲ ಸುವರ್ಣದಲ್ಲಿಯಂತೆ ರೇಖಾಕೆಲಸ ಮಾಡಿದ್ದ ಜರತಾರಿ; ವಜ್ರದಂತೆ ಫಳ ಫಳನೆ ಹೊಳೆಯುತ್ತಿದ್ದ ಗುಂಡಿಗಳು; ಶರಾಯಿಯಲ್ಲಿ ಮಂಡಿಯಿಂದ ಕೆಳಕ್ಕೆ ಬಿಗಿಯಾಗಿ ತೊಟ್ಟಿದ್ದ ರೇಸಿಮೆಯ ಕಪ್ಪಿನಂತೆ ಕಣ್ಣು ಕೋರೈಸುವ ಹದಮಾಡಿದ ಚರ್ಮದ ಕಾಲುಚೀಲ, ಅಷ್ಟೇ ಹೊಳಪಿನಿಂದ ಥಳಥಳಿಸುತ್ತಿದ್ದ ಬೂಟ್ಸುಗಳು. ಬಿಳುಪು ನೀಲಿ ಕೆಂಪುಗಳ ಖಚಿತವಾಗಿ ಬೆಳಕಿನಲ್ಲಿ ಸುತ್ತೆಲ್ಲ ನಾನಾ ಬಣ್ಣದ ಚಿತ್ರವಿಚಿತ್ರ ಥಾಳನ್ನು ಬೀರುತ್ತಿದ್ದ ಮಾಂತ್ರಿಕನ ಮಂತ್ರದಂಡ ಇವೆಲ್ಲ ಪ್ರೇಕ್ಷಕನ ಮೇಲೆ ಅದ್ಭುತ ಪರಿಣಾಮವನ್ನುಂಟು ಮಾಡುತ್ತಿದ್ದವು. ಸುಸಜ್ಜಿತವಾದ ರಂಗಸ್ಥಳ ಅದರಲ್ಲಿ ಮಾಂತ್ರಿಕ ಪ್ರದರ್ಶನಕ್ಕೆ ಸಿದ್ಧವಾಗಿ ಇಟ್ಟಿದ್ದ ವಿವಿಧ ವಸ್ತುಗಳು ಇವುಗಳಿಂದೆಲ್ಲ ಪ್ರೇಕ್ಷಕರಿಗೆ ತಾವು ಒಂದು ಪ್ರದರ್ಶನ ಕೈಚಳಕ ಕಣ್ಣುಕಟ್ಟು ಇವುಗಳನ್ನು ನೋಡುತ್ತಿದ್ದೇವೆ ಎಂಬ ವಿಷಯವೇ ಮರೆತು, ತಾವು ನಿಜವಾಗಿಯೇ ಮಾಯಾಲೋಕದ ಒಂದು ಕೊಠಡಿಯಲ್ಲಿ ನಿಜವಾದ ದೈವೀಮಾಂತ್ರಿಕನ ಅಲೌಕಿಕ ಪ್ರದರ್ಶನವನ್ನು ನೋಡುತ್ತಿದ್ದೇವೆ ಎಂಬ ಭ್ರಮೆಯುಂಟಾಗಿತ್ತು. ಇಸ್ಪೀಟು ಎಲೆ ಸಿಕ್ಕಿಕೊಳ್ಳುವುದು, ಬಿರುಕಿಲ್ಲದ ಖಡಾಖೋಟಾದ ಲೋಹದ ಬಳೆಗಳು ಒಂದನ್ನೊಂದು ಭೇದಿಸಿಕೊಂಡು ದೊಡ್ಡ ಸರವಾಗುವುದು; ಅಷ್ಟೇ ಸುಲಭವಾಗಿ ಒಂದನ್ನೊಂದು ಭೇದಿಸಿಕೊಂಡು ಬೇರೆ ಬೇರೆಯಾಗುವುದು. ಪೆಟ್ಟಿಗೆಯಲ್ಲಿಟ್ಟಿರುವ ಚೆಂಡು ಮಾಂತ್ರಿಕನು ದಂಡದಿಂದ ಸನ್ನೆ ಮಾಡಿದ ಕೂಡಲೆ ಹೋಗಿ ಮುಚ್ಚಿರುವ ಗಾಜಿನ ಡಬ್ಬಿಯಲ್ಲಿ ಕೂರುವುದು; ಪೆಟ್ಟಿಗೆಯಲ್ಲಿ ಒಂದು ಹೆಣ್ಣನ್ನು ಕೂರಿಸಿ ಎಲ್ಲ ಕಡೆಯಿಂದಲೂ ಅದನ್ನು ಭರ್ಜಿ ಈಟಿಗಳಿಂದ ತಿವಿದು, ಅನಂತರ ಹೆಸರು ಹಿಡಿದು ಕೂಗಿದರೆ ಆ ಹೆಣ್ಣು ಬೇರೆ ಕಡೆಯಿಂದ ಬರುವುದು; ಪ್ರೇರಣೆಯಿಂದ ಮಾಂತ್ರಿಕನ ವಶಳಾದ ಹುಡುಗಿ ನೆಲದಿಂದ ಮೇಲಕ್ಕೆ ಏರಿ ನಡು ಅಂತರಿಕ್ಷದಲ್ಲಿ ತೂಗಾಡುವುದು, ಕಬ್ಬಿಣದ ಸಲಾಕಿಯ ಮೇಲೆ ನಿಂತಿರುವ ಚೆಂಡು ಸನ್ನೆಯಿಂದ ಮೇಲಕ್ಕೂ ಕೆಳಕ್ಕೂ ಜಾರುವುದು ಇವುಗಳನ್ನೆಲ್ಲ ರಂಗದಲ್ಲಿ ಮಾಂತ್ರಿಕನ ಪ್ರಯೋಗಶಾಲೆಯಲ್ಲಿ ಎಂಬಂತೆ ಪ್ರದರ್ಶಿಸಿರುವ ಹೊಳೆಹೊಳೆವ ಠೀವಿ ಇನ್ನೂ ವಿಧವಿಧಗಳಾದ ಸಣ್ಣ ದೊಡ್ಡ ಚಾಕಚಕ್ಯಗಳು ಇವುಗಳೆಲ್ಲ ಪ್ರೇಕ್ಷಕರನ್ನು ಡಂಗುಬಡಿಸುತ್ತಿದ್ದವು.

ಪ್ರೊಫೆಸರ್ ಷಾರ ಯಕ್ಷಿಣಿ ಪ್ರದರ್ಶನಕ್ಕೆ ಯಾವಾಗಲೂ ಪ್ರೇಕ್ಷಕರು ಕಿಕ್ಕಿರಿದು ತುಂಬುತ್ತಿದ್ದರು. ಸುತ್ತಲ ಹಳ್ಳಿಗಳವರೂ ಗಾಡಿ ಕಟ್ಟಿಸಿಕೊಂಡು ಬರುತ್ತಿದ್ದರು.

ನಾನು ಸ್ವಲ್ಪ ಭಾವನಾಪರವಶ, ಉತ್ಸಾಹದ ಮನುಷ್ಯ. ಆ ಕಾಲದಲ್ಲಿ ಯಕ್ಷಿಣಿ, ಹಾವಾಟಗಾರನ ಮಂತ್ರತಂತ್ರ. ಇದರಲ್ಲಿ ಕೈಚಳಕದ ಜೊತೆ ದೈವತ್ವದ ಅಸ್ತಿತ್ವವೂ ಇರಬಹುದೆಂಬ ನಂಬಿಕೆ – ಇವುಗಳಿಂದ ನಾನೂ ಪ್ರಭಾವಿತನಾಗಿ ನಾನು ಯಕ್ಷಿಣಿಗಾರ ಯಾಕೆ ಆಗಬಾರದೆಂದು ಚಿಂತಿಸಿದೆ? ಮರುದಿನ ಬೆಳಿಗ್ಗೆ ಷಾನನ್ನೇ ಹುಡುಕಿಕೊಂಡು ಅವನು ಮುಸಾಫಿರ್‌ಖಾನದಲ್ಲಿ ಉಳಿದಿರುವುದು ತಿಳಿದು ಅಲ್ಲಿಗೇ ಹೋದೆ. ಷಾ ಒಂದು ಕುರ್ಚಿಯ ಮೇಲೆ ಅರ್ಧತೋಳಿನ ಒಂದು ಕವಚ ಹಾಕಿಕೊಂಡು ಕುಳಿತಿದ್ದ. ಅವನೇ ರಂಗಸ್ಥಳದಲ್ಲಿ ಚಕ್ರವರ್ತಿ ಐದನೇ ಜಾರ್ಜ್ ಅಥವಾ ಪ್ರಪಂಚ ವಿಜೇತ ನೆಪೋಲಿಯನ್‌ನಂತೆ ಹೊಳೆಯುವ ಪೋಷಾಕು ಧರಿಸಿದ್ದ ಮೊದಲ ರಾತ್ರಿಯ ಯಕ್ಷಣಿಗಾರ ಎಂದು ನಂಬುವುದೇ ನನಗೆ ಕಷ್ಟವಾಗಿ ಹೋಯಿತು. ಇವನೊಬ್ಬ ನಿವೃತ್ತನಾದ ಮಧ್ಯಮ ವರ್ಗದವನೋ ಅಥವಾ ಉಪಾಧ್ಯಾಯನೋ ಎಂಬಂತೆ ನನಗೆ ಭಾಸವಾಯಿತು. ನಾನು ಅವನಿಗೆ ನಾನೂ ಒಬ್ಬ ಯಕ್ಷಿಣಿ ಆಟಗಾರರು ಬಯಸಿರುವುದಾಗಿಯೂ ಅವನ ಸಲಹೆ ಕೇಳಲು ಬಂದಿರುವುದಾಗಿಯೂ ತಿಳಿಸಿದೆ. ನನ್ನ ವಿಚಾರವನ್ನೆಲ್ಲ ಕೇಳಿ ಅವನು ''ಈಗಲೇ ಬೇಡ. ನಿನ್ನ ವ್ಯಾಸಂಗ ಮುಗಿಸು. ಇದು ಕಷ್ಟದ ಕೆಲಸ. ಇದರಲ್ಲಿ ನೀನು ತಿಳಿದಿರುವಂತೆ ದೇವರ ಮಹಿಮೆಯೂ ದೇವರ ಕೈವಾಡವೂ ಇಲ್ಲ. ಇದೆಲ್ಲ ಬರಿಯ ಕೈ ಚಳಕ. ಕೆಲವು ಉಪಕರಣಗಳು ಬೇಕಾದ ವಸ್ತುಗಳು ಇವುಗಳ ಅವುಗಳನ್ನು ಉಪಯೋಗಿಸುವ ವಿಧಾನ, ಕೆಲವರ ಸಹಾಯ ಇವು ಬೇಕಾಗುತ್ತೇ ಅಷ್ಟೆ. ಅನುಭವವೇ ಮುಖ್ಯವಾದುದು. ನಾನು ನನ್ನ ಜೀವನವೆಲ್ಲ ಇದೇ ಕೆಲಸ ಮಾಡಿದ್ದೇನೆ'' ಎಂದರು. ನಾನು ಆ ಉಪಕರಣಗಳು ಎಲ್ಲಿ ಸಿಕ್ಕುತ್ತವೆ ಎಂದು ಕೇಳಿದಾಗ ಅವರು ಝೂನ್ಸಿಯ ಒಂದು ವಿಳಾಸ ಹೇಳಿದರು. ಯಕ್ಷಿಣಿ ಉಪಕರಣ ಶಾಲೆ ಜಾನ್ಸಿ ಮ್ಯಾಜಿಕಲ್ ಇನ್‌ಸ್ಟ್ರುಮೆಂಟ್ಸ್ ಅಂಡ್ ಅಪ್ಲಯನ್‌ಸನ್ ಎಂಬ ವ್ಯಾಪಾರಿ ಸಂಸ್ಥೆ. ನಾನು ಮರುದಿನವೇ ಆ ಸಂಸ್ಥೆಗೆ ಕಾಗದ ಬರೆದೆ. ನಾಲ್ಕಾರು ದಿನಗಳಲ್ಲಿ ನನಗೆ ಅವರಿಂದ ಹನ್ನೆರಡು ರೂಪಾಯಿನ ಒಂದು ವಿ.ಪಿ. ಬಂತು. ಜೊತೆಯಲ್ಲಿ ಬಂದ ಕಾಗದದಲ್ಲಿ ಅವರು ಒಂದು ವಿ.ಪಿಯನ್ನು ಕಳುಹಿಸಿರುವುದಾಗಿಯೂ ಅದರಲ್ಲಿ ಅತ್ಯಂತ ಮುಖ್ಯವಾದ ವಸ್ತುವೂ ಇತರ ಮಾಹಿತಿಗಳೂ ಇರುವುದಾಗಿಯೂ ವಿ.ಪಿಯನ್ನು ಖಂಡಿತ ಬಿಡಿಸಿಕೊಳ್ಳಬೇಕೆಂದೂ ಬರೆದಿದ್ದರು. ನಾನು ತುಂಬ ಗಾಬರಿಯಾಯಿತು. ನಾನು ಯಾವುದೇ ಸಾಮಾನಿಗೂ ಬರೆದೇ ಇರಲಿಲ್ಲ. ಹನ್ನೆರಡು ರೂಪಾಯಿ ಎಂದರೆ ಆ ಕಾಲದಲ್ಲಿ ಸಣ್ಣ ಹಣವಲ್ಲ. ನನಗೆ ವಿದ್ಯಾರ್ಥಿನಿಲಯದಲ್ಲಿ ತಿಂಗಳಿಗೆ 7 ರೂಪಾಯಿಗೆ ಎರಡು ಹೊತ್ತು ಪುಷ್ಕಳ ಊಟ ಮತ್ತು ಮಧ್ಯಾಹ್ನ ಸಹ ತಿಂಡಿಗೆ ಸಾಂಬಾರ್ ಅನ್ನ ಅಥವಾ ಮೊಸರನ್ನ ದೊರೆಯುತ್ತಿದ್ದಿತು. ಹೀಗಿರುವಾಗ 12 ರೂಪಾಯಿ ವಿ.ಪಿ ಎಂದರೆ ಹೇಗೆ ಆದರೆ ನಮ್ಮೂರ ಸಾಹುಕಾರರಿಗೆ ಹಾಸನದಲ್ಲಿ ಲೇವಾದೇವಿಯಲ್ಲಿ ಒಂದು ನಾಡು ಹಂಚಿನ ಮನೆ ಸೇರಿತ್ತು. ಉಪಕರಣಗಳ ಉಪಯೋಗ ಕೈಚಳಕ ಮತ್ತು ಯಕ್ಷಿಣಿವಿದ್ಯೆಗೆ ಸಂಬಂಧಪಟ್ಟ ಇತರ ತಯಾರಿಕೆಯನ್ನು

ಅನುಭವದಿಂದ ಪಡೆದರೆ ಉತ್ತಮವೆಂದೂ ಅದಕ್ಕಾಗಿ ಎರಡು ತಿಂಗಳಾದರೂ ಝೂನ್ಸಿಗೆ ಬಂದು ನಮ್ಮ ಸಂಸ್ಥೆಯಲ್ಲಿ ತರಬೇತಿ ಪಡೆಯಬಹುದೆಂದೂ ತಿಳಿಸಿದ್ದರು. ಮಂತ್ರದಂಡ ಷಾರ ಕೈಯಲ್ಲಿದ್ದು ಅವನು ಗ್ಯಾಸ್‌ಲೈಟ್ ಬೆಳಕಿನಲ್ಲಿ ತಿರುಗಿಸುತ್ತಿರುವಾಗ ಮುತ್ತು ನವರತ್ನಗಳ ಮಾಯಾದಂಡವಾಗಿ ತೋರಿದ ಅದು, ಬರಿ ಒಂದು ಬಡಕೊಳವೆಯಾಗಿ ತೋರುತ್ತಿತ್ತು. ನಾನು ವಿದ್ಯಾರ್ಥಿ ದೆಸೆಯಲ್ಲಿದ್ದುದರಿಂದ ಸದ್ಯಕ್ಕೆ ಅದಾವುದೂ ಸಾಧ್ಯವಾಗದೆ ತೆಪ್ಪಗಾದೆ. ಆದರೂ ಸಹ ಅನಂತರ ಅನೇಕ ವರುಷಗಳವರೆಗೆ ಆ ಕ್ರಯಪಟ್ಟಿಯ ಪುಸ್ತಕವನ್ನು ಆಗಾಗ ಆಸೆಯಿಂದ ನೋಡಿ ನೋಡಿ ಇಡುತ್ತಿದ್ದೆ. ಈಚಿನ ವರ್ಷಗಳಲ್ಲಿ ಯಕ್ಷಣಿಗಾರನಾಗುವ ಬಯಕೆ ಇಲ್ಲದಿದ್ದರೂ ಒಂದು ಸಲ ಡಿಲ್ಲಿಗೆ ರೈಲಿನಲ್ಲಿ ಹೋಗುವಾಗ ದಾರಿಯಲ್ಲಿ ಝೂನ್ಸಿ ರೈಲ್ವೆ ನಿಲ್ದಾಣ ಸಿಕ್ಕಿತು. ಅದನ್ನು ನೋಡಿದ ಕೂಡಲೇ ಮತ್ತೆ ನನಗೆ ನನ್ನ ಬಾಲ್ಯದ ಆಸೆ ನೆನಪಾಯಿತು. ಅವರು ಅದನ್ನು ಮತ್ತೆ ಮನೆಯ ಯಜಮಾನನಿಗೇ ತಿಂಗಳಿಗೆ 15 ರೂಪಾಯಿಗಳಿಗೆ ಬಾಡಿಗೆಗೆ ಕೊಟ್ಟಿದ್ದರು. ಆ ಯಜಮಾನ ಮುನಸೀಫ್ ಕೋರ್ಟಿನಲ್ಲಿ ಜವಾನನಾಗಿದ್ದನು. ಅವನು ತನ್ನ ಕಂತನ್ನು ತಿಂಗಳ ಮೊದಲನೆ ತಾರೀಖಿಗೆ ಸಂಬಳ ಬಂದ ದಿನವೇ ಕೊಡಬೇಕೆಂದು ಸಾಹುಕಾರರು ಗೊತ್ತು ಮಾಡಿದ್ದರು. ಅವನು ತಾನಾಗಿಯೇ ನನ್ನ ಕೊಠಡಿಗೆ ಬಂದು ಕೊಡುವುದಕ್ಕಾಗಿ ಕಾಯದೆ ನಾನೇ ಒಂದನೇ ತಾರೀಖು ಸಂಜೆ, ಅವನು ಆಫೀಸಿನಿಂದ ಮನೆಗೆ ಸಂಬಳದೊಂದಿಗೆ ಬರುವ ವೇಳೆಗೆ ಹೋಗಿ ಕುಳಿತಿದ್ದು ವಸೂಲು ಮಾಡಿಕೊಂಡು ಬರುತ್ತಿದ್ದೆ. ಜವಾನ, ಹತ್ತು ರೂಪಾಯಿಯನ್ನು ಸಂಬಳ ಬಂದ ದಿನವೇ ನನಗೆ ಕೊಟ್ಟು ಬಿಡುತ್ತಿದ್ದನು. ಉಳಿದ ಐದು ರೂಪಾಯಿಯನ್ನು ನಾಲ್ಕಾರು ದಿನಗಳಲ್ಲಿ ಅವನ ಹೆಂಡತಿ ಇತರರ ಮನೆಗಳಲ್ಲಿ ಕೆಲಸಮಾಡಿ ತಂದ ನಂತರ ಕೊಡುತ್ತಿದ್ದನು. ಆ ಹಣವನ್ನು ಸಾಹುಕಾರರು ಹಾಸನಕ್ಕೆ ಬಂದಾಗ (ಅವರು ಪ್ರತಿವಾರವೂ ಕೋರ್ಟ್ ಕೆಲಸಕ್ಕೆ ಬರುತ್ತಿದ್ದರು) ನನ್ನಿಂದ ವಸೂಲು ಮಾಡಿಕೊಂಡು ಹೋಗುತ್ತಿದ್ದರು. ಅದರಲ್ಲಿ ಒಂದಾಣೆ ಎರಡಾಣೆ ನಾವು ಖರ್ಚುಮಾಡಿದ್ದರೂ ಅನಂತರ ಕೊಡುತ್ತೇನೆಂದು ಹೇಳಿದರೂ, ಸಾಹುಕಾರರು ನನ್ನನ್ನು ಹೋಗಿ ಊರಿನಲ್ಲಿ ನಮ್ಮ ತಂದೆಯವರಿಗೂ ಹೇಳಿ ನನ್ನನ್ನು ಬೈಯಿಸುತ್ತಿದ್ದರು. ಆದುದರಿಂದ ನಾನು ಅವರ ದುಡ್ಡನ್ನು ತುಂಬ ಎಚ್ಚರಿಕೆಯಿಂದ ಇಟ್ಟಿದ್ದು ಅವರಿಗೆ ಕೊಡುತ್ತಿದ್ದೆ. ನನಗೆ ವಿ.ಪಿ. ಬಂದಾಗ ನನ್ನಲ್ಲಿ ಸಾಹುಕಾರರ ಆ ಹಣ ಇತ್ತು. ಆ ಹಣ ಇಲ್ಲದಿದ್ದರೆ ನಾನು ವಿ.ಪಿ.ಯನ್ನು ಹಿಂದಿರುಗಿಸಿ ಬಿಡುತ್ತಿದ್ದೆ. ಠೀವಿಯಿಂದ ಮಖಮಲ್ ಜರಿ ಕೋಟು ಶರಾಯಿ ಹಾಕಿಕೊಂಡು ನಿದ್ರೆಗೆ ಸಂದ ಸುಂದರಿ ಹೆಣ್ಣನ್ನು ಗಾಳಿಯಲ್ಲಿ ನಿರಾಧಾರವಾಗಿ ಮಂತ್ರದಿಂದ ಸನ್ನೆ ಮಾಡುತ್ತಿರುವ ನನ್ನ ಭವಿಷ್ಯ ಮಾಂತ್ರಿಕತನವನ್ನು ಕಂಡು ನನ್ನಲ್ಲಿಯೇ ಹಿಗ್ಗುತ್ತ ನಾನು ಸಾಹುಕಾರರ ಹಣದಿಂದ ಹನ್ನೆರಡು ರೂಪಾಯಿಗಳನ್ನು ಕೊಟ್ಟು ವಿ.ಪಿ.ಯನ್ನು ಬಿಡಿಸಿಕೊಂಡೆ. ಅನಂತರ ನಮ್ಮ ತಂದೆಯವರು ಆ ಹಣವನ್ನು ಸಾಹುಕಾರರಿಗೆ ಕೊಟ್ಟರು. ಆತುರ ಆತುರವಾಗಿ ಬಿಚ್ಚಿ ನೋಡಿದೆ ಅದೊಂದು ಸುಮಾರು ಒಂದು ಅಡಿ ಉದ್ದ ಮತ್ತು ಒಂದುವರೆ ಅಂಗುಲದ ಚದರದ ರಟ್ಟು ಕಾಗದ ಪೊಟ್ಟಣ. ಅದರ ಒಳಗಡೆ ದುಂಡಾದ ಒಂದು ತಗಡಿನ ಕೊಳವೆ ಊದು ಕಡ್ಡಿ ಪೊಟ್ಟಣದಂಥ ಕೊಳವೆ. ಅದರ ಮೇಲೆ ಕೆಂಪು ಹಸಿರು ನೀಲಿ ಹಳದಿ ಜಾಂಬಳಿ ಮುಂತಾದ ವರ್ಣರಂಜಿತ ವೃತ್ತಗಳು. ಇನ್ನೊಂದು

ತುದಿಯಲ್ಲಿ ಸ್ವಲ್ಪ ಗೋಳಾಕಾರ ದುಂಡು. ಅದನ್ನು ನೋಡಿದ ಕೂಡಲೇ ಅದು ಮಂತ್ರದಂಡ (ಮ್ಯಾಜಿಕ್‌ದಂಡ) ಅದನ್ನು ನಾನು ಷಾನ ಕೈಯ್ಯಲ್ಲಿ ನೋಡಿದ್ದೆ. ನನಗೆ ನಿಜವಾಗಿ ರೋಮಾಂಚವೇ ಆಯಿತು. ನಾನು ನಡುಗುವ ಬೆರಳುಗಳಿಂದ ಮಂತ್ರದಂಡವನ್ನು ಪೊಟ್ಟಣದಿಂದ ಹೊರಕ್ಕೆ ತೆಗೆದೆ. ನೆಲದ ಮೇಲೆ ಇಡುವುದಕ್ಕೆ ಇಷ್ಟವಿಲ್ಲದೆ ನನ್ನ ಟೋಪಿಯ ಮೇಲೆ ಇಟ್ಟೆ. ಪೊಟ್ಟಣದ ತಳದಲ್ಲಿ ಒಂದು ಕಾಗದವಿತ್ತು. ''ಮಂತ್ರ, ದಂಡವನ್ನು ರವಾನಿಸಿದೆ. ನಮ್ಮ ಜಯಕ್ಕೇ ಇದೇ ಮೂಲ.''

ಗಣಿತದ ಒಂದು ಲೆಕ್ಕ, ತಾವೆಲ್ಲರೂ ಸ್ಕೂಲಿನಲ್ಲಿ ಇದನ್ನು ಮಾಡಿಯೇ ಇರುತ್ತೀರಿ. ಒಂದು ಗೋಡೆ ಕಟ್ಟಲು ಒಬ್ಬನಿಗೆ ಎರಡು ದಿನ ಬೇಕಾದರೆ, ಅದೇ ಗೋಡೆ ಕಟ್ಟಲು ನಾಲ್ಕು ಜನರಿಗೆ ಎಷ್ಟು ದಿನ ಬೇಕಾದೀತು? ಗಣಿತ ಬಲ್ಲವ ಲೆಕ್ಕಚಾರ ಮಾಡಿ ಅರ್ಧ ದಿನ ಸಾಕು ಎಂದು ನಿಖರವಾಗಿ ಉತ್ತರಿಸುತ್ತಾನಷ್ಟೆ.

ಆದರೆ, ಸೂಕ್ಷ್ಮಬುದ್ಧಿಯ ಗುಂಡ, 'ಅದಕ್ಕೆ ಒಂದು ಕ್ಷಣವೂ ಬೇಡ' ಎನ್ನುತ್ತಾನೆ. ವಿವರಣೆ ಕೇಳಿದರೆ 'ಆಗಲೇ ಒಬ್ಬ ಗೋಡೆ ಕಟ್ಟಿಯಾಗಿದೆಯಲ್ಲ, ಅದನ್ನು ಮತ್ತೆ ಕಟ್ಟುವುದಕ್ಕೆ ಜನ ಯಾಕೆ ಬೇಕು?' ಎಂದು ಮರು ಪ್ರಶ್ನೆಯನ್ನೇ ಮಾಡುತ್ತಾನೆ. ಆಧುನಿಕ ಕಂಟ್ರಾಕ್ಟರ್‌ನನ್ನು ಕೇಳಿದರೆ ಆತ ನಾಲ್ಕು ಜನರಿಂದ ಈ ಕೆಲಸ ಅಸಾಧ್ಯವೆಂದೇ ಪ್ರತಿಪಾದಿಸುತ್ತಾನೆ. ''ಎಲ್ಲಾದರೂ ಉಂಟಾ. ಗೋಡೆ ಕಟ್ಟೋಕೆ ಜನ ಮಾತ್ರ ಸಾಕೆ. ಅವರಿಗೆ ಟ್ರಕ್ಕು, ಕ್ರೇನು, ಕ್ರಷರ್‍ರು, ಟಿಪ್ಪರ್‍ರು ಎಲ್ಲ ಬೇಕಲ್ಲ. ಎಲ್ಲ ಸೇರಿ ಅದೆಷ್ಟು ದಿನವಾಗುತ್ತೆ ಅಂತ ಹೇಳಲಾರೆ. ಆದರೆ, ಖರ್ಚು ಮಾತ್ರ ರೂ 4 ಕೋಟಿಯ ಹತ್ತಿರ ಎಂದು ನಸುನಗುತ್ತ ಟೇಬಲ್ಲಿನ ಕೆಳಕ್ಕೆ ಕೈ ಚೆಲ್ಲಿರುತ್ತಾನೆ. ನಸುನಗುತ್ತಲೇ ಆ ಕೈಯನ್ನು ಹಿಡಿದ ರಾಜಕರಣಿಯನ್ನು ಕೇಳಿ. ಅವನದು ಎಲ್ಲರಿಗಿಂತಲೂ ಅದ್ಭುತವಾದ ಉತ್ತರ. ನೋಡಿ, ಹೀಗೆ ಅಂತ ಹೇಳೋಕ್ಕೆ ಬರಲ್ಲ. ಒಂದು ದಿನ ದಿನವಾಗಬಹುದು. ಒಂದು ವರ್ಷ ಆಗಬಹುದು. ಆಗದೇನೊ ಇರಬಹುದು. ನಮ್ಮ ಪ್ರಯತ್ನ ನಾವು ಮಾಡಬೇಕು ಅಷ್ಟೆ.

*(ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ ನನ್ನ ಬಾಲ್ಯದ ಆತ್ಮಕಥೆ ಸಂಕಲನದಿಂದ ಆಯ್ದುಕೊಳ್ಳಲಾಗಿದೆ.)*

---

ಹೆಂಚು ಒಡೆದು ಹೋಗಿ ಮನೆ ಸೋರ್‍ತಿತ್ತು. ಪಕ್ಕದ ಮನೆಯವನು ಇದನ್ನು ನೋಡಿ ಸೋಮುಗೆ ಯಾಕೆ ರೂಫ್ ರಿಪೇರಿ ಮಾಡಿಸಬಾರದು ಅಂದರು. ಈ ಮಳೇಲಿ ಹೇಗೆ ರಿಪೇರಿ ಮಾಡಿಸೋದು ಹೇಳಿ ಅಂದ. ಮಳೆ ನಿಂತ ಮೇಲೆ ಬಿಸಿಲಿರುವಾಗ ರಿಪೇರಿ ಮಾಡಿಸಬಹುದಲ್ವ ಅಂದ್ರೆ ಅದಕ್ಕೆ ಸೋಮು ಆಗ ರೂಫ್ ಸೋರ್‍ತಾ ಇರಲ್ವಲ್ಲ ಅಂದ.

## ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

– ದಂನಳ

- ದೇಶದ ಆರೋಗ್ಯ ಸರಿಪಡಿಸಲು ಹೋಗಿ ತಮ್ಮ ಆರೋಗ್ಯ ಹಾಳು ಮಾಡಿಕೊಂಡರೇ ಅಣ್ಣಾ ಹಜಾರೆ?
- ಜನಲೋಕಪಾಲ, ಲೋಕಪಾಲ, ಸರ್ಕಾರಿಪಾಲ, ಕೋಟಾಪಾಲ, ಧೋಕಾಪಾಲ...... ಕೊನೆಗೆ ಶೋಕಪಾಲ?
- ಕಾಂಗ್ರೆಸ್‌ನವರಿಗೆ ಮಮತಾ ಬ್ಯಾನರ್ಜಿ ದೀದಿ ಅಲ್ಲ, ದಾದಾ.
- ಇರುವೆಗೆ ಸಿಕ್ಕುವ ಒಂದು ಸಕ್ಕರೆ ಕಾಳು ಅದರ ಪಾಲಿಗೆ ಹಿಮಾಲಯ ನಿಮ್ಮ ಬಳಿ ಟಾರ್ಚ್ ಇದ್ದರೆ ಕತ್ತಲೆಯಲ್ಲಿ ನಡೆಯಲು ಸಿದ್ಧರಿರಬೇಕು.
- Diagnosis, however brilliant, is not the cure.
- ಕಾಲಹರಣದಿಂದ ಮನಸ್ಸಿಗೆ ಮುದ ಸಿಕ್ಕರೆ ಆಗ ಕಾಲಹರಣ ಆಗುವುದಿಲ್ಲ.
- ನನ್ನ ಪಾಡಿಗೆ ನಾನು ಫುಟ್‌ಪಾತಿನ ಮೇಲೆ ಕಾರು ಓಡಿಸಿಕೊಂಡು ಹೋಗ್ತಾ ಇದ್ದೆ. ನಡ್ಕೊಂಡು ಹೋಗ್ತಿದ್ದವನು ಕಾರಿಗೆ ಗುದ್ದಿ ಟೈರ್ ಅಡಿ ಬಿದ್ದ...

**ಮೆಲುಕು ಹಾಕುವಂತಹ ಮಾತುಗಳ ಗುಚ್ಛ**

- English is a bhery phunny language....
- ಧೈರ್ಯಶಾಲಿಗೆ ಅಸ್ತ್ರಗಳು ಬೇಕಾಗಿ ಬರುವುದಿಲ್ಲ. ಆದರೆ ಜಾಮೀನು ಬೇಕಾಗಿ ಬರಬಹುದು.
- ಎಫ್.ಎಂ. ಚಾನೆಲ್‌ಗಳಲ್ಲಿ ಕನ್ನಡ ತಾಯಿಗೆ ಜೀನ್ಸ್ ತೊಡಿಸಿರುತ್ತಾರೆ.
- ಆಹಾರ ಎಲ್ಲೆಡೆ ಸಮೃದ್ಧವಾಗಿ ಸಿಗುತ್ತಿದ್ದರೆ ಆಗ eat wave ಇದೆ ಎಂದರ್ಥ.
- Standard of living has improved but the quality of life has declined.
- ಮೆಡಿಟೇಷನ್ ಎಂಬುದು ಮೈಕ್ರೊಸ್ಕೋಪ್‌ನಂತೆ – ನಿಮ್ಮನ್ನು ನೀವೇ ಅರಿಯಲು. ಅದು ಟೆಲಿಸ್ಕೋಪ್‌ನಂತೆ – ಪ್ರಪಂಚವನ್ನು ಅರಿಯಲು.
- ಮದುವೆಯ ಬೆಳ್ಳಿ ಹಬ್ಬದ ಸಮಯದಲ್ಲಿ 'ನಿಮ್ಮ ದಾಂಪತ್ಯದ ಗುಟ್ಟೇನು?' ಎಂದು ಕೇಳಿದಾಗ ಗಂಡ ಗುಟ್ಟಾಗಿ ಹೇಳಿದ್ದು: ವಾರ್ ಅಂಡ್ ಪೀಸ್.
- To all things clergic I am allergic.

✵

# ಹೀಗೊಂದು ಹನೀಮೂನು

**- ಕುಮುದಾ ಪುರುಷೋತ್ತಮ್**

**ಮ**ಧ್ಯರಾತ್ರಿ ಮೂರರ ಸಮಯ. ಬೆಂಗಳೂರಿನ ವಿಮಾನ ನಿಲ್ದಾಣದಿಂದ ನಮ್ಮ ಮನೆಗೆ ಸುಮಾರು ನಲವತ್ತು ಕಿಲೋಮೀಟರ್‌ನ ದೀರ್ಘ ಪ್ರಯಾಣ ಮಾಡುತ್ತಿದ್ದೆವು. ಹಗಲೆಲ್ಲಾ ವಾಹನ ದಟ್ಟತೆಯಿಂದ, ರಸ್ತೆ ಕಾಮಗಾರಿಗಳಿಂದ ಮೇಲೆದ್ದು ಕಣ್ಣು ಮೂಗೊಳಗೆ ಸೇರಿ ರಂಪ ಮಾಡುವ ಧೂಳು ಧರೆಗಿಳಿದು ವಿಶ್ರಾಂತಿ ಪಡೆಯುತ್ತಿತ್ತು. ಕಾರಿನ ಗಾಜನ್ನು ಕೆಳಗಿಳಿಸಿ ಹೊರಗಿನ ಶುದ್ದ ಗಾಳಿ ಮುಖದ ಮೇಲೆ ಸುಳಿದಾಗ ಎಲ್ಲಿಲ್ಲದ ಉತ್ಸಾಹ. ಅಲ್ಲೊಂದಿಲ್ಲೊಂದು ಟ್ಯಾಕ್ಸಿ, ಲಾರಿಯ ಓಡಾಟ ಬಿಟ್ಟರೆ ರಸ್ತೆ ಮುಕ್ತವಾಗಿ ಕಂಬದ ಬೆಳಕಿನಲ್ಲಿ ಬೆಳ್ಳಿಯನ್ನೇ ಹರಿಸಿತ್ತು. ಹೊಸದಾಗಿ ವಿವಾಹಿತರಾದ ಮಗ ಸೊಸೆ ಮಾರೇಷಿಯಸ್ ದ್ವೀಪದಲ್ಲಿ ಒಂದು ವಾರದ ವಿಹಾರ ಮುಗಿಸಿ ಹಿಂತಿರುಗುತ್ತಿದ್ದು ಮಾವಯ್ಯ ತಮ್ಮ ಕಾರಿನಲ್ಲಿ ಮನೆಗೆ ಕರೆತರುತ್ತಿದ್ದರು. ಮಧ್ಯರಾತ್ರಿ, ಸ್ವಾಭಾವಿಕವಾದ ನಿದ್ದೆಯ ಸಮಯ. ಕಾರು ನಡೆಸುತ್ತಾ ತೂಕಡಿಸಬಾರದಲ್ಲ ಮಾತನಾಡ ತೊಡಗಿದರು.

''ನಿಮ್ಮತ್ತೆಯನ್ನು ಮದುವೆಯಾಗಿ ನಾನೂ ಹನಿಮೂನಿಗೆ ಹೋಗಿದ್ದೆ''

''ಹೋಗಿ ಮಾವ, ಎಂದಿನಂತೆ ಸಮಯ ಕಳೆಯಲು ಏನೋ ಒಂದು ಕಥೆ ಕಟ್ಬೇಡಿ'' ನನ್ನ ಮಗ ಛೇಡಿಸಿದ.

''ಇಲ್ಲಯ್ಯಾ ಸತ್ಯವನ್ನೇ ಹೇಳುತ್ತಿದ್ದೇನೆ. ಸತ್ಯವನ್ನಲ್ಲದೆ ಬೇರೇನೂ ಹೇಳುವುದಿಲ್ಲ.'' ಮುಂದಿದ್ದ ಗುರುರಾಯರ ಪುಟ್ಟ ಫೋಟೋ ಮುಟ್ಟಿ ಪ್ರಮಾಣ ಮಾಡಿದರು!

''ನಾನೂ ನಿಮ್ಮತ್ತೇನೂ ಹನಿಮೂನಿಗೆ ಹೋಗಿದ್ದು ಅಕ್ಷರಶಃ ಸತ್ಯ, ಜೊತೆಗೆ ನನ್ನ ಸಾಕಮ್ಮಜ್ಜಿ, ತಂಗಿಯರಾದ ಶಕ್ಕು, ಪದ್ದಿ ಹಾಗೂ ನನ್ನ ದೂರದ ಸಂಬಂಧಿ ಹನುಮಂತು ಬಂದಿದ್ದರು.''

''ಮಾವಯ್ಯ ಸುಮ್ನೆ ರೈಲು ಬಿಡ್ಬೇಡಿ, ಹನಿಮೂನಿಗೆ ಮನೆಮಂದಿ ಎಲ್ಲಾ ಜೊತೆಗೆ ಬರ್ತಾರಾ?'' ಈಗ ಕೀಟಲೆ ಮಾಡಿದ್ದು ನನ್ನ ಸೊಸೆ.

''ನೀವ್ಯಾರೂ ನಂಬೋದಿಲ್ಲ ಅಂತ ಗೊತ್ತು. ಆದ್ರೂ ಸತ್ಯ ಸತ್ಯಾನೇ. ಆಗಿನ ಕುಟುಂಬ ವ್ಯವಸ್ಥೆ ಹಾಗಿತ್ತು. ತುಂಬಿದ್ದ ಒಟ್ಟು ಕುಟುಂಬ. ಸ್ವಾತಂತ್ರ್ಯ ಕೊಟ್ಟರೆ ಮಗ ಎಲ್ಲಿ ತಮ್ಮ ಹತೋಟಿ ತಪ್ಪಿ ಹೆಂಡತಿಯ ಗುಲಾಮನಾಗಿ ಬಿಡ್ತಾನೋ ಅನ್ನೋ ಭಯ ಎಲ್ರಿಗೂ. ಇದರಿಂದ ವಿಚಿತ್ರ ಸನ್ನಿವೇಶ ಉಂಟಾಗುತ್ತಿತ್ತು.''

ಅಂದು ಮಾವ ಹೇಳಿದ್ದನ್ನು ಹಾಗೆಯೇ ನಿಮ್ಮ ಮುಂದಿಡುತ್ತಿದ್ದೇನೆ.

ಆಗಿನ ಕಾಲದಲ್ಲಿ ಮಧುಚಂದ್ರ ಕೇವಲ ಸಿನಿಮಾ ತೆರೆಗೆ ಸೀಮಿತವಾಗಿತ್ತು. ಅದೂ ಕೇವಲ ಕೈ ಕೈ ಹಿಡಿದು ಮರಸುತ್ತುವ ಮೂಲಕ, ಅಂದಿನ ಕುಟುಂಬ ವ್ಯವಸ್ಥೆಯಲ್ಲಿ ಕೇವಲ ಹೆಂಡತಿಯೊಡನೆ ಹೊರ ಊರಿಗೆ ವಿಹಾರಕ್ಕೆ ಹೊರಡುವುದು ಊಹಿಸಲೂ ಸಾಧ್ಯವಿರಲಿಲ್ಲ. ಮಾವಯ್ಯ ಮಾತ್ರ ಅಂತಹ ಒಂದು ಅವಕಾಶ ಕಲ್ಪಿಸಿಕೊಂಡರು.

ತಮ್ಮ ತಾಯಿಯ ಮುಂದೆ ಇದರ ಪ್ರಸ್ತಾಪ ಬಿಚ್ಚಿದರು.

ನಿನ್ನ ಸೊಸೆ ''ತನಗೆ ಒಳ್ಳೆಯ ಕಡೆ ಗಂಡು ಸಿಕ್ಕಿ ಮದುವೆಯಾದರೆ ನಂಜನಗೂಡಿನ ನಂಜುಂಡೇಶ್ವರನಿಗೆ ಗಂಡನ ಜೊತೆ ಬಂದು ಸೇವೆ ಸಲ್ಲಿಸುತ್ತೇನೆ'' ಅಂತ ಹರಕೆ ಮಾಡ್ಕೊಂಡಿದ್ದಳಂತೆ. ಈಗ ಹೋಗೋಣ ಅಂತಿದ್ದಾಳೆ. ತಪ್ಪಿದರೆ ನಂಜುಂಡೇಶ್ವರನ ಕೋಪ ನಿನಗೇ ಗೊತ್ತಲ್ಲಾ. 'ನಾನೂ ಅವ್ಳ ಹೋಗಿ ಬರೋದಾ?' ವಿಧೇಯತೆ ಇಂದಲೇ ಕೇಳಿದರು. ತಾಯಿಗೆ ಮಗನ ಚಾತುರ್ಯದ ಬಗ್ಗೆ ಗೊತ್ತಿತ್ತಲ್ಲಾ. ಸೊಸೆಯನ್ನು ಕೇಳಿದರು, ''ಹೌದೇನೇ? ಇವ್ನಂದಂತೆ ಹರೆಸಿಕೊಂಡಿದ್ಯಾ?''

ಮಾವಯ್ಯನಿಂದ ಮೊದಲೇ ಖಾಸಗಿ ಪಾಠ ಹೇಳಿಸಿ ಕೊಂಡಿದ್ದ ಸೊಸೆ ಬಾಯಿ ಬಿಚ್ಚದೆ ತಲೆಯಾಡಿಸಿದಳು. 'ನಂಜನಗೂಡು' ಎಂದು ಕೇಳಿಸಿಕೊಂಡ ಸಾಕಮ್ಮಜ್ಜಿ ಅದೆಲ್ಲಿದ್ದರೋ ಧುತ್ತನೆ ಪ್ರತ್ಯಕ್ಷವಾದರು.

''ಏನೆಂದೆ? ನಂಜನಗೂಡಾ? ನನ್ನ ತೌರು ಮನೆ ದೇವ್ರು ನಂಜುಂಡೇಶ್ವರ. ಮದುವೆಯಾದ್ಮೇಲೆ ನಂದು ತಿರುಪತಿ ತಿಮ್ಮಪ್ಪನ ಒಕ್ಕಲಾಯಿತು. ನಂಜುಂಡೇಶ್ವರನನ್ನು ಆರಾಧಿಸಿದರೆ ನಮ್ಗೆ ಆಗಿ ಬರೊಲ್ಲ ಅಂತ ನಿಮ್ಮ ತಾತ ಒಮ್ಮೆಯೂ ಕರೆದೊಯ್ಯಲೇ ಇಲ್ಲ. ಈಗ ಕಾಲ ಕೂಡಿ ಬಂದಿದೆ. ಹೇಗಾದ್ರೂ ಈ ಬಾರಿ ಈ ಮುದ್ಕೀಗೆ ನಂಜುಂಡೇಶ್ವರನ ದರ್ಶನ ಮಾಡಿಸಿ ಪುಣ್ಯ ಕಟ್ಟಿಕೊಳ್ಳೋ.'' ಈಮಾತು ಕೇಳಿಸಿಕೊಂಡ ತಂಗಿಯರಾದ ಶಕ್ಕು, ಪದ್ದಿ ಧಾವಿಸಿ ಬಂದು ಅಣ್ಣನನ್ನು ತರಾಟೆಗೆ ತೆಗೆದುಕೊಂಡರು.

''ಅಪ್ಪಣ್ಣಿ, ಹೆಂಡ್ತಿ ಬಂದ್ಲಂತ ನಮ್ಮನ್ನು ಮರೆತರೆ ನಾವು ಕೇಳ್ತೀವಾ? ನಾವು ಮೈಸೂರು ನೋಡೇ ಇಲ್ಲ. ಅರಮನೆ, ಚಾಮುಂಡಿ ಬೆಟ್ಟ ನೋಡ್ಬೇಕು. ಹೋಗ್ತಾ ಅವೆಲ್ಲಾ ನೋಡಿ ಆಮೇಲೆ ಬೇಕಾದ್ರೆ ನಂಜನಗೂಡಿಗೆ ಹೋಗೋಣ'' ಎಂದು ಅಣ್ಣನ ಸಮ್ಮತಿಗೆ ಕಾಯದೆ ಬಟ್ಟೆ ಬರೆ ಜೋಡಿಸಿಕೊಳ್ಳಲು ಹೋಗಿ ಬಿಟ್ಟರು.

ಇದನ್ನೆಲ್ಲಾ ನೋಡುತ್ತಾ ಕುಳಿತಿದ್ದ ಮಾವಯ್ಯನ ತೀರ್ಥರೂಪರು ಅಪೀಲೇ ಇಲ್ಲದ ತಮ್ಮ ರೂಲಿಂಗ್ ಕೊಟ್ಟು ಬಿಟ್ಟರು!

''ವಯಸ್ಸಾದ ಅಜ್ಜಿ, ಹರೆಯದ ಇಬ್ಬರು ಹೆಣ್ಣು ಮಕ್ಕಳು, ಜೊತೆಗೆ ಹೆಂಡ್ತಿ ಇವ್ರೆಲ್ಲರ ಜವಾಬ್ದಾರಿ ನೀನೊಬ್ನೇ ಹೊರೋದು ಕಷ್ಟವಾಗುತ್ತೆ. ನೀನಿನ್ನೂ ಶುದ್ಧ ಹುಡುಗು. ಸಹಾಯಕ್ಕೆ ನಮ್ಮ ಹನುಮಂತೂನ ಕರ್ಕೊಂಡು ಹೋಗು.''

ಈ ಹನುಮಂತು ಅನ್ನುವವ ಇವರ ಕುಟುಂಬದ ದೂರ ಸಂಬಂಧಿ. ಕಟ್ಟಾ ಬ್ರಹ್ಮಚಾರಿ ಹಾಗೂ ಬಜರಂಗ ಬಲಿಯ ಪರಮಭಕ್ತ. ಮದುವೆಯಾದವರೆಲ್ಲಾ ಮಹಾ ಪಾತಕಿಗಳು ಎಂದು ನಂಬಿದ್ದ. ಇವರ ಮನೆಯಲ್ಲಿದ್ದು ಧಾರಾಳವಾಗಿ ಹಾಲು, ತುಪ್ಪ, ಮೊಸರಿನ ಸಿಂಹಪಾಲು ಮುಕ್ಕಿ ಅಪಾರವಾದ ದೇಹಸಿಕಾ ಹೊಂದಿದ್ದ.

ಅಂತೂ ಒಂದು ಶುಭದಿನ ಒಂದು ಗುಂಪೇ ಮಾವಯ್ಯನ ಮಧುಚಂದ್ರ ಯಾತ್ರೆಗೆ ಹೊರಟಿತು. ಮೈಸೂರಿನ ಬಸ್ ನಿಲ್ದಾಣದಲ್ಲಿ ಇಳಿದಾಗ ಮಾವಯ್ಯನ ಬತ್ತಳಿಕೆಯ ಮೊದಲ ಅಸ್ತ್ರ ಹೊರ ಬಂದಿತು.

‘‘ಸಾಕಮ್ಮಜ್ಜಿ ಅವರ ಮೈದುನನ ಮನೇಲಿ ಇರ್ಲಿ. ಅವರ ಮಡಿ ಆಚಾರಕ್ಕೆಲ್ಲಾ ಅನ್ಕೂಲವಾಗುತ್ತೆ. ನಾವೆಲ್ರೂ ಅವರಲ್ಲೇ ಝಂಡ ಊರಿದ್ರೆ ಚನ್ನಿರೊಲ್ಲ. ನೀವು ನಾಲ್ಕು ಜನ ಅಲ್ಲಿರಿ. ನಾನು ಇವ್ಳೂ ಯಾವ್ದಾದ್ರೂ ಹೋಟಲಿನಲ್ಲಿ ಇದ್ದು ಮುಂಜಾನೆ ಎಲ್ರೂ ನಂಜನಗೂಡಿಗೆ ಹೋಗೋಣ.’’ ಶಕ್ಕು ಪದ್ದಿಯರು ಅಲ್ಲೇ ಮುಷ್ಕರಕ್ಕೆ ಕುಳಿತರು. ‘‘ಅಜ್ಜಿ ಜೊತೆ ಅವರ ಮನೇಲಿ ಇದ್ರೆ ನಮಗೆ ಸಿಗೋದು ಮೊಸರವಲಕ್ಕಿ ಇಲ್ಲಾ ರಾಗಿ ಹುರಿ ಹಿಟ್ಟುಂಡೆ.’’ ನೀವಿಬ್ರೇ ಹೋಟಲಿನಲ್ಲಿ ಮಸಾಲೆ ದೋಸೆ, ಮೈಸೂರು ಪಾಕು ತಿನ್ನೋ ಹುನ್ನಾರಾನ? ನಾವೂ ನಿಮ್ಜೊತೇನೇ ಹೋಟಲಿನಲ್ಲಿ ಇರ್ತೀವಿ ಎಂದು ಗೋಂದಿನಂತೆ ಅಂಟಿಕೊಂಡುಬಿಟ್ಟರು. ಈ ಹರೆಯದ ಹುಡುಗಿಯರ ರಕ್ಷಣೆಗೆ ನಿಯಮಿತನಾಗಿದ್ದ ಹನುಮಂತು ಸಾಮಾನನ್ನು ಹೆಗಲ ಮೇಲೆ ಹೋಟಲಿಗೆ ಇವರ ಹಿಂದೆ ಹೊರಟ.

ಹೋಟಲಿನಲ್ಲಿ ಎರಡು ರೂಮು ಬುಕ್ ಮಾಡಲು ಮಾವಯ್ಯ ಮುಂದಾದರೆ ಹನುಮಂತುವಿನದು ಅಲ್ಲೂ ಅಡ್ಡಗಾಲು. ‘‘ಎರಡು ರೂಮು ಯಾಕೋ? ಇಲ್ಲೆಲ್ಲಾ ರೂಮುಗಳು ಶಾನೆ ದುಬಾರಿನಂತೆ. ಅದೆಂತದೋ ಡಾರ್ಮಿಟರಿ ಅಂತಿರತ್ತಂತೆ. ಅದನ್ನೇ ತೊಗೊ, ಒಟ್ಟಿಗಿರೋಣ.’’ ಮಾವಯ್ಯನಿಗೆ ಅವನನ್ನು ಸಿಗಿದು ತೋರಣ ಕಟ್ಟುವಂತೆ ಆದರೂ ಅವನ ಕಬಂಧ ಬಾಹುಗಳನ್ನು ಕಂಡು ತೆಪ್ಪಗಾದರು.

ಸಂಜೆಯಾಗುತ್ತಲೇ ಶಕ್ಕು ಪದ್ದಿಯಿಂದ ‘‘ಕನ್ನಂಬಾಡಿ ಕಟ್ಟೆ.... ಬೃಂದಾವನದ ರಂಗುರಂಗಿನ ದೀಪಾಲಂಕಾರ....’’ ಎನ್ನುವ ಜಪ ಆರಂಭವಾಯಿತು. ವಿ. ಶಾಂತಾರಾಮರ ‘ಝನಕ್ ಝನಕ್ ಪಾಯಲ್ ಬಾಜೆ’ ಚಿತ್ರ ಬಿಡುಗಡೆಯಾಗಿದ್ದ ಸಮಯ. ಬೃಂದಾವನ ಉದ್ಯಾನದಲ್ಲಿ ರಂಗು ರಂಗಿನ ದೀಪಾಲಂಕಾರದ ನಡುವೆ ಚಿತ್ರೀಕರಣಗೊಂಡ ನೃತ್ಯ ಸನ್ನಿವೇಶ ವೀಕ್ಷಕರನ್ನು ಹುಚ್ಚು ಹಿಡಿಸಿತ್ತು. ಈಗ ಅದನ್ನು ನೋಡಲೇ ಬೇಕೆಂದು ಅಕ್ಕ ತಂಗಿಯರ ಹಟ. ಪಾಪ, ಮಾವಯ್ಯನಿಗೇನು ಆಸೆ ಇರಲಿಲ್ಲವೇ. ಆ ರಂಗು ರಂಗಿನ ಕಾರಂಜಿಯ ನಡುವೆ ಪತ್ನಿಯ ಕೈಹಿಡಿದು ಸುತ್ತಾಡುವ ಆಸೆ. ಆ ಕಾರಂಜಿಯ ಪ್ರತಿಬಿಂಬ ಪತ್ನಿಯ ಕಣ್ಣಿನಲ್ಲಿ ಕಾಣುವ ಆಸೆ. ಆದರೆ ನಡೆದದ್ದೇ ಬೇರೆ. ಉದ್ಯಾನವನ ತಲುಪಿದೊಡನೆ ನಾದಿನಿಯರಿಬ್ಬರಿಗೂ ಅತ್ತಿಗೆಯ ಮೇಲೆ ವಿಶೇಷ ಪ್ರೀತಿ ಸ್ನೇಹಗಳು ಉಕ್ಕಿತು. ಎಷ್ಟೆಂದರೆ ಅತ್ತಿಗೆಯ ಎಡಬಲ ನಿಂತು ಕೈಹಿಡಿದು ನಡೆದಾಡುವಷ್ಟು, ಪಾಪ ಮಾವಯ್ಯನ ಜೊತೆಗೆ ಹನುಮಂತುವೇ ಸಂಗಾತಿ. ಕಡೇ ಪಕ್ಷ ಪತ್ನಿಯ ಕೈ ಹಿಡಿದು ಒಂದು ಫೋಟೋವಾದರೂ ತೆಗೆಸಿಕೊಳ್ಳುವಾಸೆ. ಹನುಮಂತುವಿಗೆ ತಮ್ಮ ಬಾಕ್ಸ್ ಕ್ಯಾಮರಾ ಉಪಯೋಗಿಸುವ ಪರಿ ಹೇಳಿಕೊಟ್ಟು ಪತ್ನಿಯ ಭುಜದ ಸುತ್ತ ಕೈ ಹಾಕಿ ಹಲ್ಕಿರಿದರು. ಕ್ಲಿಕ್ಕಿಸುವ ಸಮಯ. ಎಲ್ಲೋ ಇದ್ದ ಶಕ್ಕು ಪದ್ದಿಯರು ಓಡಿ ಬಂದು ತಮ್ಮ ತಲೆ ತೂರಿಸಿ ಶಿವಪೂಜೆಯ ಕರಡಿಗಳಾದರು!

ಮರು ಮುಂಜಾನೆ ಯಾತ್ರಿಗಳು ನಂಜನಗೂಡಿನತ್ತ ಪಯಣಿಸಿದರು. ಧರ್ಮಶಾಲೆಯಲ್ಲಿ ವಸತಿ, ನದಿ ಸ್ನಾನ, ನಂಜುಂಡೇಶ್ವರನ ದರ್ಶನ ಎಲ್ಲವೂ ಸಾಂಗವಾಗಿ ನಡೆಯಿತು. ಸಂತೃಪ್ತರಾದ ಸಾಕಮ್ಮಜ್ಜಿ ಆನಂದಾತಿಶಯದಿಂದ ಈ ಯಾತ್ರೆಗೆ ಕಾರಣೀ ಭೂತಳಾದ ಹೊಸ ವಧುವನ್ನು ಅಷ್ಟ ಪುತ್ರ ಪ್ರಾಪ್ತಿರಸ್ತು ಎಂದು ಹರಸಿದ್ದೇ ಹರಸಿದ್ದು!

ಪರಿಸ್ಥಿತಿ ಹೀಗೆಯೇ ಮುಂದುವರೆದರೆ ತಮ್ಮ ಮಧುಚಂದ್ರ ಮೊದ್ದುಚಂದ್ರ ವಾಗೋದು ಮಾವಯ್ಯನಿಗೆ ಖಾತ್ರಿಯಾಯಿತು. ತಮ್ಮ ಬತ್ತಳಿಕೆಯ ಬ್ರಹ್ಮಾಸ್ತ್ರವನ್ನು ಹೊರತೆಗೆದು ಪ್ರಯೋಗಿಸುವ ಯೋಜನೆ ಹಾಕಿಕೊಂಡರು. ಪತ್ನಿಯೊಡನೆ ಗುಟ್ಟಿನಲ್ಲಿ ವ್ಯೂಹ ರಚನೆಯಾಯಿತು.


ಊರಿಗೆ ಹಿಂದಿರುಗಲು ಎಲ್ಲರೂ ಬಸ್ಸೇರಿ ಕುಳಿತಿದ್ದಾರೆ. ಡ್ರೈವರ್ ಹಾಗೂ ಕಂಡಕ್ಟರು ಬಸ್ಸೇರುವ ಮುನ್ನ ಮುಕ್ಕಾಲು ಉರಿದು ಬೂದಿಯಾದ ಬೀಡಿಯ ಕೊನೆಯ ಭಾಗದ ಹೊಗೆ ಆಸ್ವಾದಿಸುವ ಸಮಯ. ಮಾವಯ್ಯ ಪತ್ನಿಯ ಮೇಲೆ ಜೋರು ಶುರು ಮಾಡಿದರು. ''ನೀನು ಇಷ್ಟು ಬೇಜವಾಬ್ದಾರಿ ಅಂತ ನಾನು ತಿಳ್ಕೊಂಡಿರ್ಲಿಲ್ಲ. ಮೊನ್ನೆ ತಾನೇ ಚಪ್ಲಿ ಹರ್ದಿದೆ. ಬೇರೆ ಕೊಡ್ಸಿ ಅಂದೆ. ನಲ್ವತ್ತೊಂಬತ್ತು ರುಪಾಯಿ ತೊಂಬತ್ತೊಂಬತ್ತು ಪೈಸೆ ಕೊಟ್ಟು ತಂದದ್ದಾಯ್ತು. ಈಗ ಕೇಳಿದ್ರೆ ಧರ್ಮಶಾಲೆಯಲ್ಲಿ ಬಿಟ್ಟಿದ್ದೀನಿ ಅಂತೀಯ. ಹೋದ ಹೋದಲ್ಲಿ ನೀನು ಒಂದೊಂದು ಸಾಮಾನು ಬಿಡ್ತಾ ಬಂದ್ರೆ ನಾವು ಮುಂದೆ ಸಂಸಾರ ಹೇಗೆ ನಿಭಾಯ್ಸೋದು?''

ಅಷ್ಟು ಜನರ ಮುಂದೆ ಗಂಡ ಜೋರು ಮಾಡಿದರೆ ಹೆಂಡತಿಗೆ ಹೇಗಾದೀತು? ಪತಿ ಹೇಳಿಕೊಟ್ಟಂತೆ ಕಣ್ಣಿಗೆ ಸೆರಗು ಹಚ್ಚಿ ಬಿಕ್ಕಿದರು. ಸಾಕಮ್ಮಜ್ಜಿ ಹೃದಯ ಕರಗಿ ಹರಿಯಿತು. ''ಪಾಪ ಆ ಹುಡ್ಗೀ ಮೇಲೆ ಯಾಕೋ ರೇಗ್ತಿ? ಪಾಪದ ಹುಡ್ಗಿ ಹೆತ್ತವ್ರನ್ನ ಬಿಟ್ಟು ಇದೇ ನಮ್ಮನೇಗೆ ಕಾಲಿಟ್ಟಿದೆ. 'ಮರೆವು' ಅನ್ನೋದು ಇದ್ದದ್ದೇ. ಅದಕ್ಕಿಷ್ಟು ಹಗರಣ ಮಾಡೋದೇ?'' ಮಾವಯ್ಯ ಇನ್ನೂ ಧ್ವನಿ ಏರಿಸಿದರು. ಅಣ್ಣನ ಈ ಹೊಸ ಅವತಾರ ಕಂಡಿಲ್ಲದ ಶಕ್ಕು ಪದ್ದಿ ಬೆರಗಾಗಿ ನೋಡುತ್ತಾ ನಿಂತರು.

''ಹೊಸ ಚಪ್ಲಿ ಬಿಟ್ಟು ಬಂದಿದ್ದಾಳೆ. ಬೇಗ ಹೋದ್ರೆ ಸಿಗಬಹುದು'' ಎಂದು ಮಾವಯ್ಯ ಪತ್ನಿಯ ಕೈ ಹಿಡಿದು ಬ್ಯಾಗಿನ ಸಮೇತ ಕೆಳಗಿಳಿದರು. ಬಾಗಿಲ ಬಳಿ ನಿಂತಿದ್ದ ಹನುಮಂತು ಕೈಗೆ ಇಪ್ಪತ್ತರ ನೋಟೊಂದನ್ನು ತುರುಕಿ'' ನಿಮ್ಮಷ್ಟು ಜನಕ್ಕೆ ಟಿಕೆಟ್ ತೊಗೊ, ನಾವೀಗ ಬಂದ್ವಿ'' ಎಂದು ಉತ್ತರಕ್ಕೆ ಕಾಯದೆ ಧರ್ಮಶಾಲೆ ರಸ್ತೆಯಲ್ಲಿ ಮರೆಯಾದರು.

ಡ್ರೈವರ್ ಬಸ್ಸೇರಿ ಹಾರನ್ ಮಾಡುತ್ತಲೇ ಹೊರನಿಂತಿದ್ದವರೆಲ್ಲಾ ಬಸ್ಸೇರಿದರು. ಕಂಡಕ್ಟರ್ ಟಿಕೇಟ್ ಹರಿದು ತನ್ನ ಪವಿತ್ರ ಎಂಜಲು ಲೇಪಿಸಿ ಹಂಚತೊಡಗಿದ. ಕಂಡಕ್ಟರ್ ಸೀಟಿ ಊದುತ್ತಲೇ ಶಕ್ಕು ಪದ್ದಿ ಕೋರಸ್‌ನಲ್ಲಿ '' ರೀ ನಮ್ಮಣ್ಣ ಅತ್ತಿಗೆ.... ನಮ್ಮಣ್ಣ ಅತ್ತಿಗೆ'' ಕೂಗಿದರು. ಸಾಕಮ್ಮಜ್ಜಿ ಡ್ರೈವರ್ ಬಳಿ ಬಂದು ದಮ್ಮಯ್ಯ ಗುಡ್ಡೆ ಹಾಕ ತೊಡಗಿದರು. ತಡವಾಗಿ ಬಂದು ಬಸ್ಸೇರಿದ ಪ್ರಯಾಣಿಕನೊಬ್ಬ ವಿಷಯ ತಿಳಿದು ತಾನು ಕಂಡದ್ದನ್ನು ಕೂಗಿ ಹೇಳಿದ. ''ಯಾರ್ರೀ? ನವ ವಿವಾಹಿತರಂತೆ ಕಾಣುತ್ತಿದ್ದ ಜೋಡೀನಾ? ಊಟಿ ಕಡೆ ಹೊರಟ ಬಸ್ಸೇರಿ ಹೊರಟು ಹೋದ್ರು. ಇನ್ನು ಕಾಯೋದ್ರಲ್ಲಿ ಅರ್ಥ ಇಲ್ಲ, ರೈಟ್'' ಎಂದು ತಾನೇ ಸೀಟಿ ಹೊಡೆದ!

ಮುಂದೇನಾಯಿತು? ಹೊಸ ಜೋಡಿ ಮಧು ಚಂದ್ರ ಮುಗಿಸಿ ಬಂದಾಗ ಮನೆಯಲ್ಲೇನಾಯಿತು? ಗೊತ್ತಿಲ್ಲ, ಅಷ್ಟರಲ್ಲಿ ಮನೆ ತಲುಪಿ ಮಾವಯ್ಯ ಕೆಳಗಿಳಿದರು. ಕಥೆ ಅಲ್ಲಿಗೇ ಮುಕ್ತಾಯವಾಯಿತು.




Since 1998

**Whisper Hearing Aids**

Pvt. Ltd.

1030/13, 25 main, 39 cross,
4th 'T' block, Jayanagara, Bengaluru

SIEMENS

Authorised Hearing Care Centre

Avail **FREE** supply of batteries for a year on purchase of hearing aids for this week.

10am - 1:30pm, 5pm - 8pm

Appointment : 26640571, 9741765454

**ಕಿವಿ - ಕೇಳುವ ಅಂಗವೇ ಆದರೂ ಅದರ ಒಂದು ಭಾಗ ನಮ್ಮ ದೇಹದ ಸಮತೋಲನ ಮಾಡುವ ಕೆಲಸ ನಿಭಾಯಿಸುತ್ತದೆ. ಕೇಳಿಸುವ ಭಾಗಕ್ಕೆ ತೊಂದರೆಯಾದರೆ ಕಿವುಡುತನ ಬರುತ್ತದೆ, ಹಾಗೆಯೇ ಉಳಿದ ಭಾಗಕ್ಕೆ ತೊಂದರೆಯಾದರೆ ತಲೆಸುತ್ತು ಕಿವಿಮೊರೆತ ಉಂಟಾಗುತ್ತದೆ. ಕಿವಿಮೊರೆತಕ್ಕೆ ಉಳಿದಂತೆ ಹಲವಾರು ಕಾರಣಗಳು ಇದ್ದರೂ ಈ ಸೂಕ್ಷ್ಮವಾದ ಅಂಗದ ತೊಂದರೆಯೇ ಬಹುಮಟ್ಟಿನ ಕಾರಣ. ಬಹಳ ಸಲ ಈ ತೊಂದರೆ ಔಷಧಿಗೆ ಒಗ್ಗದು. ಮೊರೆತ ಮುಚ್ಚುವಂತೆ ಶಬ್ದವನ್ನು ಹಿಯರಿಂಗ್ ಏಡ್ ಮೂಲಕ ಕೊಡಬೇಕಾಗುತ್ತದೆ. ಸದ್ಯಕ್ಕೆ ಅದೇ ಉತ್ತರ. ಕಿವಿಯ ಸೂಕ್ಷ್ಮತೆ ಕಡಿಮೆಯಾದ ನಂತರ ಹಿಯರಿಂಗ್ ಏಡ್ ಧರಿಸಿ ಎಲ್ಲರಂತೆಯೇ ಮಾತಿನ ಚಟುವಟಿಕೆಯಲ್ಲಿ ಭಾಗವಹಿಸಬೇಕು, ಅದು ಸಾಮಾನ್ಯ ಜೀವನ.**

**ಡಾ|| ಜಿ. ಪುರುಷೋತ್ತಮ ಇಡಿ.ಡಿ.**

**ವಾಕ್ - ಶ್ರವಣದೋಷ ತಜ್ಞ, ವಿಸ್ಪರ್ ವಾಕ್ - ಶ್ರವಣ ಕೇಂದ್ರ**

# ಕುರಿಗಳು ಸಾ ಾ ಾ ಾ ಾರ್...

**- ಸಿ.ಆರ್. ಸತ್ಯ**

**ಅ**ರವತ್ತು ವರುಷಗಳು ಕಳೆದ ನಂತರ ನಾವೆಲ್ಲರೂ 'ಹಿರಿಯ ನಾಗರೀಕರು' ಎಂದು ನೊಂದಾಯಿಸಿಕೊಳ್ಳಬೇಕಲ್ಲವೆ? ಹಾಗೇನೇ ಈ ಸಮಾಜದ 'ಹಿರಿಯ ಕುರಿಗಳು' ಎಂದೂ ಕರೆಯಿಸಿಕೊಳ್ಳುವ ಲಭ್ಯ ಈಗ ನಮಗೆಲ್ಲ ಇದೆ.

ಮೊನ್ನೆ ನಾನು ನನ್ನ ಹೆಂಡತಿ ಬೆಂಗಳೂರಿನಲ್ಲಿರುವ 'ಹಿರಿಯ ಕುರಿಗಳ ಸೇವಾ ಸಮಿತಿ'ಯ ಕಛೇರಿಗೆ ಹೋಗಿ, ಅಲ್ಲಿಯ ನಿರ್ದೇಶಕರಾದ ಡಾ॥ ಕುರುಬಯ್ಯನವರೊಡನೆ ನಡೆಸಿದ ಸಂದರ್ಶನದ ವಿವರಗಳನ್ನು ನಿಮಗೆ ತಿಳಿಯಬಯಸುತ್ತೇನೆ.

'ಸಾರ್, ನಮ್ಮಿಬ್ಬರನ್ನೂ 'ಹಿರಿಯ ಕುರಿಗಳು' ಅಂತ ನೊಂದಾಯಿಸಿಕೊಳ್ಳೋಕ್ಕೆ ಬಂದಿದ್ದೀವಿ.'

'ಸಂತೋಷ. ಆದರೆ ಅದಕ್ಕೆ ಮುಂಚೆ ನಿಮ್ಮ ಅರ್ಹತೆಯನ್ನು ನಾನು ಅಳೆಯಬೇಕ್ರೀ. ನನ್ನ ಪ್ರಶ್ನೆಗಳಿಗೆ ಸರಿಯಾಗಿ ಉತ್ತರ ಕೊಡಿ.'

'ಆಯ್ತು ಸಾರ್.'

''ಡೇಟ್ ಆಫ್ ಬರ್ತ್ ಪ್ರೂಫ್ ತಂದಿದೀರಾ? ಗುಡ್! ಸರಿಯಾಗಿ ಇರೋಹಾಗಿದೆ. ಡೇಟ್ ಆಫ್ ಡೆತ್ ಸಧ್ಯಕ್ಕೇನೂ ಬೇಡಾ ಬಿಡಿ. ಓಹೋ! ಸರ್ಕಾರಿ ಸೇವೆಯಿಂದ ರಿಟೈರ್ ಆಗಿದೀರಾ? ಪೆನ್‌ಶನ್ ಬರ್ತಿದೆಯೇನು?''

'ಇಲ್ಲ ಸಾರ್.'

'ಯಾಕೆ?'

'ಅದಕ್ಕೆ ನಾನು ಬದುಕ್ಕಿದ್ದೀನಿ ಅಂತ ಒಂದು ಸರ್ಟಿಫಿಕೇಟ್ ಕೊಡಬೇಕಂತೆ. ಯಾರನ್ನ ಹೋಗಿ ಕೇಳಿದರೂ ನಿಮ್ಮನ್ನ ನೋಡಿದರೆ ಬದುಕಿದ್ದೀರಿ ಅಂತ ಯಾರಾರೂ ಹೇಳೋಕ್ಕೆ ಆಗುತ್ತೇನ್ರೀ? ಇನ್ನೆಲ್ಲಾದ್ರೂ ಕೇಳಿ ಹೋಗಿ ಅಂತ ಅಟ್ಟಿ ಕಳಿಸ್ತಾರೆ. ಹಾಗಾಗಿ ಇದುವರೆವಿಗೂ ಪೆನ್‌ಶನ್ ಕೈಗೆ ಗಿಟ್ಟಿಲ್ಲ ಸಾರ್.'

'ವೆರಿ ಗುಡ್! ನೀವಿಬ್ಬರೂ ವೋಟರ್ಸ್ ಲಿಸ್ಟ್‌ನಲ್ಲಿ ಇದೀರಾ? ವೋಟ್ ಹಾಕಿದ್ದೀರಾ?'

'ಲಿಸ್ಟ್‌ನಲ್ಲೇನೋ ಇದೀವಿ ಸಾರ್. ಆದರೆ ಇದುವರೆವಿಗೂ ವೋಟ್ ಹಾಕಿಲ್ಲ.'

'ಯಾಕ್ರೀ?'

'ನನ್ನ ಕಾರ್ಡಿನ ಮೇಲೆ ನನ್ನನ್ನ 'ಫೀಮೇಲ್' ಅಂತ ನನ್ನ ಹೆಂಡತಿ ಕಾರ್ಡ್ ಮೇಲೆ ಅವಳನ್ನ 'ಮೇಲ್' ಅಂತ ಬರೆದುಬಿಟ್ಟಿದ್ದಾರೆ ಸಾರ್. ಇದುವರೆವಿಗೂ ಕಾರ್ಡು ಬದಲಾಯಿಸಿಲ್ಲ, ವೋಟಿಂಗ್ ಬೂತ್‌ನಲ್ಲಿ ನಮ್ಮನ್ನೇ ಬೈದು ಓಡಿಸ್ತಾರೆ.'

'ಎಕ್ಸೆಲೆಂಟ್! ಯಾವಾಗಲಾದರೂ ನಿಮಗೆ 'ಕಿಟಕಿ ಸೇವೆ' ಲಭ್ಯವಾಗಿದ್ಯೇನ್ರೀ?'

'ಯಾವುದೂ ಇಲ್ಲ ಸಾರ್. ಬ್ಯಾಂಕ್ ಕೌಂಟರಿನಲ್ಲಿ, ರೈಲ್ವೆ ಕೌಂಟರಿನಲ್ಲಿ, ಬೆಂಗಳೂರು ಕೌಂಟರಿನಲ್ಲಿ, ಕ್ಯೂನಲ್ಲಿ ನಾನೇ ಯಾವಾಗಲೂ ಮೊದಲು ನಿಂತ್ಕೊಳೋದು. ಆದರೆ ಹಿಂದೆ ನಿಂತಿರೋ ಜನ ನನ್ನನ್ನ ಪಕ್ಕಕ್ಕೆ ತಳ್ಳಿ ಅವರವರ ಕೆಲಸ ಮುಗಿಸಿಕೊಂಡು ಹೋಗ್ತಾರೆ. ನನ್ನ ಸರದಿ ಬರೋ ಹೊತ್ತಿಗೆ ಕೌಂಟರ್ ಕ್ಲೋಸ್ ಆಗುತ್ತೆ.'

'ಗ್ರೇಟ್! ಗ್ರೇಟ್!! ನೀವು ಬಸ್ ಪ್ರಯಾಣ ಅದರಲ್ಲೂ ಬೆಂಗಳೂರು ಸಿಟಿ ಒಳಗೆ ಮಾಡ್ತೀರೇನೂ?'

'ಅಲ್ಲೂ ಅದೇ ಗೋಳು ಸರ್. ಬಸ್ ಸ್ಟ್ಯಾಂಡಿನ ಕ್ಯೂನಲ್ಲಿ ಯಾವತ್ತೂ ನಾನು ಮೊದಲನೆಯವನೇ! ಆದರೆ ಬಸ್ ಬಂದ ತಕ್ಷಣ ಅಲ್ಲಿ ತನಕ ಅದೃಶ್ಯವಾಗಿದ್ದ ಜನ ನುಗ್ಗಿ ಬಂದು, ನನ್ನನ್ನು ಫುಟ್‌ಪಾತಿಗೆ ತಳ್ಳಿ, ಬಸ್ಸಿಗೆ ಹತ್ಕೋತಾರೆ. ಕಂಡಕ್ಟರ್ ನನ್ನನ್ನು ನೋಡ್ತಾ – ಯಾಕ್ರೀ ನುಗ್ತೀರಾ? ಮುಂದಿನ ಬಸ್ಸಿನಲ್ಲಿ ನಿಧಾನವಾಗಿ ಬರೋದಕ್ಕೆ ಆಗಲ್ವಾ ನಿಮಗೆ? ಅಂತ ಬೈದು ಡಿಂಗ್ ಡಿಂಗ್ ಅಂತ ಬೆಲ್ ಬಾರಿಸ್ತಾನೆ ಸಾರ್.'

'ಫೆಂಟಾಸ್ಟಿಕ್! ಯಾವಾಗಲಾದರೂ ಅಮೇರಿಕಾಗೆ ಹೋಗಿದೀರೇನ್ರೀ?'

'ಇಲ್ಲ ಸರ್, ವೀಸಾ ಕೊಡಲ್ಲ ಅಂತ ಅಂದ್ರು.'

'ಯಾಕಂತೆ?'

'ಒಬ್ಬ ಬಿಳಿ ತೊಗಲಿನವನೇ ನಮ್ಮನ್ನ ಇಂಟರ್‌ವ್ಯೂ ಮಾಡಿದ್ದು ಸಾರ್. ನಮ್ಮನ್ನ ಮೇಲಿಂದ ಕೆಳಗಿನ ತನಕ ಅವನ ಕಿಟಕಿ ತೂತಿನಿಂದ ನೋಡಿ – ನಿಮ್ಮಂತಹ ಮುದಿಗೂಬೆಗಳು ಈಗಾಗಲೇ ಭಾರತದಿಂದ, ಪಾಕಿಸ್ತಾನದಿಂದ, ಮೆಕ್ಸಿಕೋನಿಂದ ಹೇರಳವಾಗಿ ಅಲ್ಲಿ ಬಂದು ಕೂತಿವೆ. ಇನ್ನು ನಿಮಗೆ ನಾವೆಲ್ಲಿಂದ ಜಾಗ ತರಲಿ? ಹಾಯಾಗಿ ರಾಮ ಕೃಷ್ಣಾ ಅಂತ ನಿಮ್ಮೂರಲ್ಲೇ ಇರಿ– ಅಂತ ಬೈದು ಕಳಿಸಿದ ಸಾರ್!'

'ವಂಡರ್‌ಫುಲ್! ಸರ್, ನಿಮ್ಮದೂ ನಿಮ್ಮ ಹೆಂಡತೀದೂ ಬೆಂಗಳೂರಿನ ರಸ್ತೆ ಮೇಲೆ ವಾಕಿಂಗ್ ಅನುಭವಗಳಿದ್ದರೆ ಸ್ವಲ್ಪ ಹೇಳಿ.'

'ಬಿ.ಬಿ.ಎಂ.ಪಿ. ಫುಟ್‌ಪಾತ್‌ನಿಂದಾಗಿ ನನಗೆ ಜ್ಞಾಪಕವಿರೋ ಹಾಗೆ ಒಂದು ಬಾರಿ ನನಗೆ ಮೂಳೆ ಮುರೀತು. ನನ್ನ ಹೆಂಡತೀಗೆ ಎರಡು ಬಾರಿ ಮುರೀತು ಸಾರ್. ಕ್ಯಾಲ್ಸಿಯಂ ಕಮ್ಮಿ ಸಾರ್ ಅದಕ್ಕೆ. ಬೇಕಾದರೆ, ಮೆಡಿಕಲ್ ಪ್ರೂಫ್ ಇದೆ ಕೊಡ್ತೀನಿ. ಅದಲ್ಲದೆ ನಮ್ಮಿಬ್ಬರಿಗೂ ತಲಾ ಒಂದೊಂದು ಸಲ ಬೇರೆ ಬೇರೆ ನಾಯಿಗಳೂ ಕಚ್ಚಿವೆ ಸಾರ್. ನಾಯಿಗಳ ಮೇಲೆ ಕಂಪ್ಲೇಂಟ್ ಬರೆದು ಕೊಟ್ಟಿದ್ದೀವಿ ಸಾರ್.'

'ಸಧ್ಯ, ಅವನ್ನ ಬಿ.ಬಿ.ಎಂ.ಪಿ.ಯವರು ಗಾಡೀಲಿ ಹಾಕ್ಕೊಂಡು ಹೋಗಿಲ್ಲ ತಾನೇ?'

'ಇಲ್ಲ ಸಾರ್. ಅವು ನಮ್ಮನೇ ಪಕ್ಕಾನೇ ಮನೆ ಮಾಡ್ಕೊಂಡು ಸಂಸಾರ ಬೆಳಸಿಕೊಂಡು ಹಾಯಾಗಿ ಇವೆ.'

‘ಸಂತೋಷ, ಸಂತೋಷ. ದಿನಾ ಮನೇನಲ್ಲಿ ಹೇಗ್ರೀ ಕಾಲಾ ಕಳೀತೀರಾ? ಟೀವೀ ಗೀವೀ ನೋಡ್ತೀರೇನೂ?’

‘ಇಲ್ಲಾ ಸಾರ್. ನಮ್ಮನೆ ಫುಲ್ ಟೈಮ್ ಕೆಲಸದವಳು ಯಾವಗಲೂ ಹಾಕ್ಕೊಂಡಿರ್‍ತಾಳೆ. ಯಾವಾಗಲೋ ಒಂದು ಸಲ ನನ್ನ ಹೆಂಡತಿ ಕನ್ನಡ ಸೀರಿಯಲ್ ನೋಡ್ತಾಳೆ. ಆದರೆ ಅವಳಿಗೆ ಅಳು ತಡೆಯೋದು ಕಷ್ಟ ಸಾರ್. ಆಫ್ ಮಾಡ್ರೀ ಅಂತ ನನಗೆ ಕೂಗಿ ಹೇಳ್ತಾಳೆ.’

‘ನೀವೂ?’

‘ನನಗೆ ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಶಾರುಕ್ ಖಾನ್, ಸಲ್ಮನ್ ಖಾನ್, ಖಾನ್ ಅಬ್ದುಲ್, ಗಫಾರ್ ಖಾನ್, ಬಿಜೆಪಿ ಕಮಲ, ಎರಡು ಬೆರಳಿಗೆ ಚಿಹ್ನೆ ಇವೆಲ್ಲಾ ಭಯ ತರುಸುತ್ವೆ ಸಾರ್. ರಾತ್ರಿ ನಿದ್ರೆ ಬರೋದಿಲ್ಲ.’

‘ಗ್ರೇಟ್ ಗ್ರೇಟ್! ನೀವೂ ಆಟೋರಿಕ್ಷಾಗಳಲ್ಲಿ ಓಡಾಡ್ತೀರೇನ್ರೀ?’

‘ಅಪರೂಪಕ್ಕೆ ಸಾರ್. ನಮ್ಮ ಮುಖ ನೋಡ್ತಾನೇ ಯಾವ ಡ್ರೈವರ್ರೂ ನಿಲ್ಲಿಸೋದೇ ಇಲ್ಲಾ. ನಿಲ್ಲಿಸಿ ಕರ್‍ಕೊಂಡು ಹೋದ್ರೂ – ಹಾಳು ಹಗಲಿನಲ್ಲೇ ಮೀಟರ್ ಮೇಲೆ ಡಬ್ಬಲ್ ಅಂತಾರೆ. ಜೊತೆಗೆ ಆಟೋಗಳು ಎತ್ತರಕ್ಕಿರುತ್ವೆ ಸಾರ್. ಒಳಕ್ಕೆ ಹತ್ತೋದೇ ಕಷ್ಟ, ಹತ್ತಿ ಕೂತರೆ ಇಳಿಯೋದೇ ಕಷ್ಟ.’

‘ಪಬ್ಲಿಕ್ ಜಾಗಗಳಲ್ಲಿ ಯಾವಾಗಲಾದರೂ ಬೈಯಿಸಿಕೊಂಡಿದ್ದೀರೇನ್ರಿ?’

‘ಖಂಡಿತವಾಗಿಯೂ ಸಾರ್. ಮೊನ್ನೆ ಜಯನಗರದಲ್ಲಿ ಫುಟ್‌ಪಾತ್ ಮೇಲೆ ಹೋಗ್ತಿದ್ವಿ. ಯಾವನೋ ಟೂ ವ್ಹೀಲರ್‌ನವನು ಸಿಗ್ನಲ್ ರೆಡ್ ಇದೆ ಅಂತ ಫುಟ್‌ಪಾತಿನ ಮೇಲೆ ಬಂದು ನಾವು ಅವನಿಗೆ ಅಡ್ಡ ಇದೀವಿ ಅಂತ ಬಾಯಿಗೆ ಬಂದ ಹಾಗೆ ಬೈದ. ಇನ್ನೊಂದು ದಿನ ಬೆಂಗಳೂರಿನ ಒಂದು ‘ಮಾಲ್’ ನೋಡೋಕ್ಕೆ ಹೋದ್ವಿ ಸಾರ್. ಅಲ್ಲಿ ಸೆಕ್ಯೂರಿಟಿನವನು ಅದೂ ಹಿಂದೀಲಿ – ನಿಮ್ಮಂತಹವರು ಇಲ್ಲಿ ಯಾಕೆ ಬರ್‍ತೀರಾ? ಈ ಜಾಗ ‘ಲೌವ್’ ಜೋಡಿಗಳಿಗೆ ಅಥವಾ ದುಡ್ಡು ಖರ್ಚು ಮಾಡೋ ಜನಕ್ಕೆ ಮಾಡಿರೋ ಜಾಗ. ಹೋಗ್ರೀ ಹೊರಕ್ಕೆ ಅಂತ ಬೈದು ಕಳಿಸಿದ. ಮೊನ್ನೆ ನನ್ನ ಬ್ಯಾಂಕ್‌ನಲ್ಲೂ ಹಾಗೆ ಆಯ್ತು ಸಾರ್. ಕ್ಯೂನಲ್ಲಿ ನಿಂತಿದ್ರೆ ನೀವು ಎಳೆಯೋ ಜುಜುಬಿ ನೂರು ರೂಪಾಯಿಗೆ ಎಷ್ಟು ಹೊತ್ತು ಮಾಡ್ತೀಯೋ ಅಜ್ಜಾ? ಅಂತ ನನ್ನ ಹಿಂದೆ ಇದ್ದವನು ನನ್ನನ್ನು ಬೈದ. ಮ್ಯಾನೇಜರ್ ಅವನನ್ನ ಸಮಾಧಾನ ಮಾಡೋಕ್ಕೆ ಕೌಂಟರ್‌ನಲ್ಲಿ ಅವನಿಗೇ ಮೊದಲು ದುಡ್ಡು ಕೊಡಸಿದರು.’

‘ಗುಡ್! ಗುಡ್!! ನಿಮಗೆ ಯಾರಾದರೂ ಯಾವಗಲಾದರೂ ಯಾತಕ್ಕಾದರೂ ಗೌರವ ಮಾಡಿದ್ದಾರೇನ್ರೀ? ಹಾರಾ ಗೀರಾ ಹಾಕಿದ್ದಾರೇನ್ರೀ? ಶಾಲೂ ಗೀಲೂ ಹೊದೆಸಿದ್ದಾರೇನ್ರೀ?’

‘ಇಲ್ಲ ಸಾರ್. ನಾನು ಹೊದ್ಕೋಳೋ ಶಾಲು ನಾನು ಕೊಂಡ್ಕೊಂಡಿದ್ದೇ.’

‘ನೀವು ನಿಜ ಹೇಳ್ತಿದೀರಿ ತಾನೆ?’

‘ದೇವರಾಣೆ ಸಾರ್.’

'ವೆರಿ ಗುಡ್!' ಅಂತ ಹೇಳಿ ಡಾ|| ಕುರುಬಯ್ಯನವರು 'ದೊಡ್ಡರಂಗಣ್ಣಾ!' ಅಂತ ಕೂಗಿದ್ರು. ಒಳಗಿನಿಂದ ಅವರು – ಅಸಿಸ್ಟೆಂಟ್ ಡೈರೆಕ್ಟರ್ ಅಂತೆ – ದೊಡ್ಡರಂಗಣ್ಣ ಒಂದು ಕೋಲು ಹಿಡ್ಕೊಂಡು ಬಂದ್ರು (ಕುರುಬರ ಹತ್ತಿರ ಇರೋಲ್ಲವೆ? ಆ ತರಹದ್ದು).

'ಇವರಿಬ್ಬರೂ ಒಳ್ಳೇ ಕ್ಯಾಂಡಿಡೇಟ್ಸ್ ಕಣ್ರೀ. ಅರ್ಜಿ ತೊಗೊಂಡು ಈಗಲೇ ನೊಂದಾಯಿಸಿ ಅವರಿಗೆ ಕಾರ್ಡ್ ಇಶ್ಯೂ ಮಾಡಿ' ಅಂತ ಆರ್ಡರ್ ಮಾಡಿದ್ರು. ನಮ್ಮ ಕಡೆ ತಿರುಗಿ

'ಒಂದು ಘಂಟೆ ಕಾಲ ವೈಟ್ ಮಾಡಿ. ಕಾರ್ಡ್ ಕೊಡ್ತಾರೆ' ಅಂತ ಅಂದರು.

'ಅಲ್ಲಿ ತನಕ ಇಲ್ಲಿ ಕೂತಿರಬಹುದೆ?' ಅಂತ ನನ್ನ ಹೆಂಡತಿ (ಆರ್ತರೈಟಿಸ್ ಕ್ಯಾಲ್ಶಿಯಂ ಡಿಫಿಶಿಯನ್ಸಿ) ಕೇಳಿದಳು.

'ಒಂದು ಘಂಟೆ ಕಾಲಕ್ಕೆಲ್ಲಾ ಏನು ಕೂತ್ಕೊಳ್ಳೋದ್ರೀ? ಹೊರಗಡೆ ನಿಂತಿರಿ. ಕಾರ್ಡು ಸಿಗುತ್ತೆ' ಅಂತ ಕುರುಬಯ್ಯನವರು ಗುಡುಗಿದರು.

ಇದು ನಡೆದದ್ದು ಬೆಳಿಗ್ಗೆ ಹನ್ನೊಂದು ಘಂಟೆಗೆ. ಸಂಜೆ ನಾಲ್ಕು ಘಂಟೆಗೆ ದೊಡ್ಡರಂಗಣ್ಣ ನಮಗೆ ಕಾರ್ಡುಗಳನ್ನು ಕೊಟ್ಟರು. ಅಲ್ಲಿ ತನಕ ನಾವು ನಿಂತೇ ಇದ್ವಿ. ಕಾರ್ಡಿನಲ್ಲಿ ನಮ್ಮ ಫೋಟೋಗಳನ್ನು ಲಗತ್ತಿಸಿ 'ಹಿರಿಯ ಕುರಿಗಳು' ಅಂತ ನೊಂದಾಯಿಸಿದ್ದರು. Recognised by Govt. of Karnataka ಅಂತ ಒಂದು ಠಸ್ಸೇನೂ ಇತ್ತು! ಅಷ್ಟರಲ್ಲಿ ನನ್ನ ಹೆಂಡತಿ ಕೂಗಿದಳು: 'ಅಯ್ಯೋ! ಇಲ್ಲೂ ಹಾಗೇ ಆಗಿದ್ಯಲ್ರೀ?' 'ನಿಮ್ಮನ್ನ ಹೆಣ್ಣು ಕುರಿ ನನ್ನನ್ನು ಗಂಡು ಕುರಿ ಅಂತ ತಪ್ಪು ತಪ್ಪಾಗೇ ಪ್ರಿಂಟ್ ಮಾಡಿದಾರಲ್ರೀ....?' ಅಂತ.

ಅಸಿಸ್ಟೆಂಟ್ ಡೈರೆಕ್ಟರ್ ದೊಡ್ಡರಂಗಣ್ಣನವರಿಗೆ ಅದೆಷ್ಟು ಕೋಪ ಬಂತೂ ಅಂತೀರಿ!

'ಕುರಿ ಅಂದರೆ ಕುರೀ ರ್‍ರೀ! ಗಂಡೋ ಹೆಣ್ಣೋ ಅಂತ ಯಾರ್ ಕೇಳ್ತಾರೆ? ಸುಮ್ಮನೆ ಕಾರ್ಡ್ ತೊಗೊಂಡು ಹೊರಡಿ! ಅಂತ ಅವರ ಕೋಲನ್ನ ನೆಲಕ್ಕೆ ಕುಕ್ಕಿದರು.'

ಅಷ್ಟು ಹೊತ್ತಿಗೆ ನಾವು ಅಧಿಕೃತವಾಗಿ ಕುರಿಗಳಿಗಳಾಗಿದ್ದೆವಲ್ಲಾ? ಸರಿ ಸಾರ್ ಅಂತ ಅಷ್ಟಕ್ಕೇ ಸಂತೋಷ ಪಟ್ಕೊಂಡು ಮನೇಗೆ ಬಂದ್ವಿ.

ಓದುಗರೇ, ನಿಮ್ಮಲ್ಲಿ ಯಾರಾದರೂ 'ಹಿರಿಯ ಕುರಿಗಳು' ಅಂತ ನೊಂದಾಯಿಸಿಕೊಳ್ಳಬೇಕಾದರೆ ನನ್ನನ್ನೇ ಸಂಪರ್ಕಿಸಿ. ನನಗೀಗ ಅದಕ್ಕೆ ಬೇಕಾದ ಪ್ರೊಸೀಜರ್ಸ್ ಎಲ್ಲಾ ಚೆನ್ನಾಗಿ ಗೊತ್ತು.

❖

---

ನೀವು ಬುದ್ಧಿವಂತರು ಅಂತ ತೋರಿಸಿಕೊಂಡರೆ ಎಲ್ಲಾ ಕೆಲಸಗಳೂ ನಿಮ್ಮ ತಲೆಯ ಮೇಲೇ ಬೀಳುತ್ತವೆ.
ನೀವು ಅತೀ ಬುದ್ಧಿವಂತರಾದರೆ ಅಂಥಾ ಕೆಲಸಗಳಂದ ನೀವೇ ತಪ್ಪಿಸಿಕೊಳ್ಳುತ್ತೀರ.

# ಹಿರಿಯರೊಬ್ಬರ ಸಾಮಾಜಿಕ ಕಳಕಳಿ....

- ಎಚ್. ಗೋಪಾಲಕೃಷ್ಣ

**ಮೈ**ಸೂರು ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿದ್ದಾಗ ಶ್ರೀ ಕುವೆಂಪುರವರು ತಮ್ಮ ಪ್ರೀತಿಪಾತ್ರರಾದ ಶಿಷ್ಯರೊಬ್ಬರಿಗೆ (ಶ್ರೀ ಸುಬ್ಬರಾಯಾಚಾರ್ಯರು) ಒಂದು ಹಾಸ್ಟೆಲನ್ನು ನೋಡಿಕೊಳ್ಳುವ ಜವಾಬ್ದಾರಿ ವಹಿಸಿದರಂತೆ. ಗುರುಗಳು ಹೇಳಿದ್ದನ್ನು ಸಂಪೂರ್ಣ ಭಯಭಕ್ತಿಯಿಂದ ಪಾಲಿಸುತ್ತಿದ್ದ ಶಿಷ್ಯ ಆಗಲಿ ಎಂದು ಜವಾಬ್ದಾರಿ ಹೊತ್ತುಕೊಂಡರು. ಆ ಹಾಸ್ಟೆಲು ಮುಖ್ಯವಾಗಿ ಆಗತಾನೇ ಹೈಸ್ಕೂಲು ಮುಗಿಸಿ ಕಾಲೇಜಿಗೆ ಬಂದು ಸೇರುತ್ತಿದ್ದ ಅಷ್ಟಾಗಿ ಅಷ್ಟೇನೂ ಪ್ರಬುದ್ಧರಲ್ಲದ ಹುಡುಗರಿಂದ ತುಂಬಿದ್ದು ಯಾವಾಗಲೂ ಹಿರಿಯರೊಬ್ಬರ ಮಾರ್ಗದರ್ಶನದ ಅವಶ್ಯಕತೆ ಅಗತ್ಯವಾಗಿ ಬೇಕೇ ಆಗಿತ್ತು. ಹಾಸ್ಟೆಲು ನೋಡಿಕೊಳ್ಳುವ ಜವಾಬ್ದಾರಿ ಹೊತ್ತವರಿಗೆ ಇದು ಮೊದಲ ದಿವಸದಿಂದಲೇ ಅನುಭವಕ್ಕೆ ಬಂದಿತು. ಮೊಟ್ಟಮೊದಲಿಗೆ ಹುಡುಗರಲ್ಲಿ ಶಿಸ್ತು ಮೂಡಿಸುವುದು ಅಗತ್ಯವೆಂದು ಇವರಿಗನ್ನಿಸಿತು. ಬೆಳಿಗ್ಗೆ ಏಳಬೇಕಾದ ಸಮಯ ಯಾವುದು, ಮಧ್ಯಾಹ್ನ ಊಟ ಮಾಡಬೇಕಾದ ಸಮಯ ಯಾವುದು, ಸಂಜೆ ಎಷ್ಟು ಹೊತ್ತಿನವರೆಗೆ ಆಟ ಆಡಬೇಕು, ನಂತರ ಹಾಸ್ಟೆಲಿನ ರೂಮಿನೊಳಗೆ ಸೇರಬೇಕಾದ ಸಮಯ, ಪಾಠ ಪ್ರವಚನ ಮಾಡಬೇಕಾದ ಸಮಯ, ರಾತ್ರಿ ಊಟದ ಸಮಯ, ರಾತ್ರಿ ಹಾಸಿಗೆ ಸೇರಬೇಕಾದ ಸಮಯ... ಹೀಗೆ ಸಮಯಗಳ ಪಟ್ಟಿ ಮಾಡಿ ನೋಟೀಸು ಬೋರ್ಡಿನಲ್ಲಿ ಹಾಕಿದರು. ಅದರ ಜತೆಗೆ ಹಾಸ್ಟೆಲಿನಲ್ಲಿ ಪಾಲಿಸಬೇಕಾದ ಕೆಲವು ನಿಯಮಾವಳಿಗಳನ್ನೂ ರೂಪಿಸಿದರು ಅದೂ ನೋಟೀಸು ಬೋರ್ಡಿಗೆ ಬಂದಿತು. ಬಚ್ಚಲು ಮನೆಯಲ್ಲಿ ನೀರು ಹೇಗೆ ಮಿತಿಯಲ್ಲಿ ಉಪಯೋಗಿಸಬೇಕು, ಸ್ನಾನ ಮಾಡಬೇಕಾದರೆ ಸ್ವಚ್ಛತೆಯನ್ನು ಇತರರಿಗೆ ತೊಂದರೆಯಾಗದ ಹಾಗೆ ಹೇಗೆ ಕಾಪಾಡಿಕೊಳ್ಳುವುದು, ಊಟ ಮಾಡಬೇಕಾದರೆ ಹೇಗೆ ಅದನ್ನು ಮಾಡಬೇಕು, ಆಹಾರವನ್ನು ಪೋಲು ಮಾಡದಿರುವುದು ಮೊದಲಾದ ನೀತಿ ಸಂಹಿತೆಗಳ ಸಂಗಡ ಅವರವರ ಕೊಠಡಿಗಳನ್ನು ಹೇಗೆ ಆಕರ್ಷಕ ರೀತಿಯಲ್ಲಿ ಇಟ್ಟುಕೊಳ್ಳಬೇಕು ಅನ್ನುವುದು ಮತ್ತೊಂದು ಸೂಚನೆ. ಎದ್ದ ಕೂಡಲೇ ಹೊದ್ದಿಕೆಗಳನ್ನು ಮಡಿಸಿ ಹಾಕಿ, ಷರಟು ಪ್ಯಾಂಟುಗಳು ಕಬೋರ್ಡಿನಲ್ಲಿರಲಿ, ಕಸವನ್ನು ಕಸದ ಡಬ್ಬದಲ್ಲೇ ಹಾಕಿ... ಹೀಗೆ ಮಾಡಬೇಕಾದ ಮಾಡಬಾರದ (ಡೂಸು ಡೋಂಟ್ ಡೂಸೂ!) ಕೆಲಸಗಳ ಪಟ್ಟಿಯನ್ನು ನೋಟೀಸು ಬೋರ್ಡಿನಲ್ಲಿಯೂ ಹಾಕಿ ಪ್ರತಿಯೊಬ್ಬರ ರೂಮಿನಲ್ಲಿಯೂ ನೇತು ಹಾಕಿದರು. ಮೀಟಿಂಗ್ ಮಾಡಿ ಹುಡುಗರಿಗೆ ಅದೆಷ್ಟು ಸಲಹೆ ಸೂಚನೆ ನೀಡಬಹುದೋ ಅವೆಲ್ಲವನ್ನೂ ನೀಡಿದರು.

ಹುಡುಗರು ಹುಡುಗರೇ ಅವರ ಪಾಡಿಗೆ ಅವರು ಇವರ ಮಾತು ಕೇಳಿದರು, ಅವರ ಪಾಡಿಗೆ ಅವರು ಅವರವರ ಅಭ್ಯಾಸಗಳನ್ನು ಮುಂದುವರೆಸಿದರು. ಎರಡು ಮೂರು ದಿವಸ

ಬಿಟ್ಟು ಸುಬ್ಬರಾಯಾಚಾರ್ಯರು ಹುಡುಗರ ರೂಮಿನ ತಪಾಸಣೆಗೆ ಹೋದರು. ಹೊದ್ದಿಕೆಗಳು ಎಲ್ಲೆಂದರಲ್ಲಿ ಬಿದ್ದಿತ್ತು. ಷರ್ಟು, ಪ್ಯಾಂಟು ಹಾಸಿಗೆ ಮೂಲೆಯಲ್ಲಿ ಮೊಗಚಿತ್ತು, ಹುಡುಗರ ಟವೆಲ್ಲು ನೆಲದ ಮೇಲೆ ಬಿದ್ದು ನೆಲದ ಮಣ್ಣು ಅದಕ್ಕೆ ಮೆತ್ತಿತ್ತು. ರೂಮಿನ ತುಂಬಾ ಹರಿದ ಕಾಗದಗಳ ಚೂರು ಹರಡಿತ್ತು.

ಇವರು ಹಾಸಿಗೆ ಹೊದಿಕೆಗಳನ್ನ ಸರಿಯಾಗಿ ಮಡಿಸಿ ಅದರದರ ಜಾಗದಲ್ಲಿ ಇಟ್ಟರು. ಷರಟು ಪ್ಯಾಂಟುಗಳನ್ನ ತೆಗೆದು ಕಬೋರ್ಡಿಗೆ ಸೇರಿಸಿದರು. ಪರಕೆಯಿಂದ ರೂಮಿನ ಕಸ ಜಾಡಿಸಿದರು, ಕೊಳೆಯಾಗಿದ್ದ ಬಟ್ಟೆಗಳನ್ನ ತಾವೇ ತೆಗೆದು ಒಗೆಯೋ ಬಂಡೆಯಬಳಿ ನಡೆದು ಅವುಗಳನ್ನು ಒಗೆದು ಶುಭ್ರಮಾಡಿ ಒಣಗಿಹಾಕಿದರು. ಇವರ ಕೆಲಸವನ್ನು ನೋಡುತ್ತಿದ್ದ ಅವರ ಗೆಳೆಯರು ಇದೇನೋ ಹೊಸಾ ಅವತಾರ ಅಂತ ಕೇಳಿದರು. ಪಾಪ ಮಕ್ಕಳು ಹಳ್ಳಿಗಳಿಂದ ಬಂದಿರ್ತಾರೆ, ಅವರಿಗೆ ಪಟ್ಟಣದ ಅದರಲ್ಲೂ ಹಾಸ್ಟೆಲಿನ ನೀತಿ ನಿಯಮಾವಳಿಗಳು ಇನ್ನೂ ಅರ್ಥವಾಗಿರೋಲ್ಲ, ಕೊಂಚ ಶಿಸ್ತನ್ನು ನಾವೇ ಕಲಿಸಿದರೆ ಆಮೇಲೆ ಅವರೇ ಕಲಿತುಕೊಳ್ತಾರೆ... ಅಂದರು ಸುಬ್ಬರಾಯಾಚಾರ್ಯರು. ಎರಡು ಮೂರು ತಿಂಗಳಲ್ಲಿ ಹುಡುಗರು ದಾರಿಗೆ ಬಂದರಂತೆ. ಹೊದಿಕೆಗಳನ್ನು ಮಡಿಸಿ ಇಟ್ಟರು, ಷರಟು ಪ್ಯಾಂಟು ಕಬೋರ್ಡಿಗೆ ಸೇರಿದವು, ಕಸಕಡ್ಡಿಗಳು ಕಸದ ಬುಟ್ಟಿಯಲ್ಲಿ ಸೇರಿದವು, ಬಚ್ಚಲು ಮನೆಯಲ್ಲಿ ನೀರಿನ ಸದುಪಯೋಗವಾಯಿತು... ಮೇಷ್ಟರಿಗೆ ತೊಂದರೆ ಕೊಡ್ತಾ ಇದೀವಿ ಅಂತ ಅವರಿಗೆ ಅನಿಸಿತಂತೆ!

ಅದರ ಜತೆಜತೆಗೆ ಹುಡುಗರ ಪಾಠಗಳಲ್ಲಿ ತಮ್ಮ ನೆರವನ್ನೂ ಸೂಕ್ತ ಮಾರ್ಗದರ್ಶನವನ್ನೂ ನೀಡುತ್ತಿದ್ದರು. ಇದು ತನ್ನ ಕೆಲಸದ ಪರಿಧಿಗೆ ಮೀರಿದ್ದು ಎನ್ನುವ ಭಾವನೆಯೇ ಇರದೇ ಸಂಪೂರ್ಣವಾಗಿ ತೊಡಗಿಕೊಳ್ಳುತ್ತಿದ್ದರು.

ಇದೆಲ್ಲಕ್ಕಿಂತಲೂ ಆಶ್ಚರ್ಯ ಉಂಟು ಮಾಡಿದ ಸಂಗತಿ ಅಂದರೆ – ಸುಬ್ಬರಾಯಾಚಾರ್ಯರು ಹುಡುಗರ ತಿಂಡಿ ತೀರ್ಥದ ಬಗ್ಗೆ ತೆಗೆದುಕೊಳ್ಳುತ್ತಿದ್ದ ಕಾಳಜಿ. ಮಾರುಕಟ್ಟೆಗೆ ಹೋಗಿ ಪ್ರತಿಯೊಂದು ತರಕಾರಿಯನ್ನೂ ಇವರೇ ಆಯ್ಕೆ ಮಾಡುತ್ತಿದ್ದರಂತೆ. ಅದರಲ್ಲಿ ತಾಜಾ ಹಾಗೂ ಗುಣಮಟ್ಟಕ್ಕೆ ಹೆಚ್ಚು ಒತ್ತು ನೀಡುತ್ತಿದ್ದರಂತೆ. ಹುಡುಗರು ಮಾಂಸಾಹಾರ ಬೇಕು ಎಂದಾಗ ಇವರೇ ಅದನ್ನೂ ಬಲ್ಲವರಿಂದ ಕೇಳಿ ತಿಳಿದುಕೊಂಡು ಆಯ್ಕೆ ಮಾಡುತ್ತಿದ್ದರಂತೆ. ಇವರು ಪೂರ್ಣ ಸಸ್ಯಾಹಾರಿಯಾಗಿದ್ದರೂ ಹುಡುಗರ ಈ ಅಗತ್ಯದ ಪೂರೈಕೆಗೆ ಶ್ರಮತೆಗೆದುಕೊಳ್ಳುತ್ತಿದ್ದರಂತೆ. ಈ ಸಂಗತಿಯನ್ನು ಅವರನ್ನು ತುಂಬಾ ಹತ್ತಿರದಿಂದ ಬಲ್ಲವರು ಮೊನ್ನೆ ಹೇಳಿದಾಗ ಆ ಕಾಲದವರು ಎಂಥಹ ಶ್ರದ್ಧೆಯನ್ನು ತಮ್ಮ ಕೆಲಸದಲ್ಲಿ ತೋರುತ್ತಿದ್ದರು ಎಂದು ಸೋಜಿಗಪಟ್ಟೆ. ಒಪ್ಪಿ ಕೊಂಡ ಕೆಲಸ ಕಾರ್ಯಗಳು ತಮ್ಮ ರೀತಿ ನೀತಿ ನಿಯಮಾವಳಿಗಳಿಗೆ ಇರಿಸು ಮುರುಸು ಉಂಟು ಮಾಡಿದರೂ ಅದನ್ನು ಪಾಲಿಸಿಕೊಂಡು ಹೋಗುವ ಕಾಯಕ – ಕಾಯಕವೇ ಕೈಲಾಸವನ್ನು ಅಳವಡಿಸಿಕೊಂಡಿದ್ದರು ಎನ್ನುವುದು ನಮ್ಮ ಪೀಳಿಗೆಯವರಿಗೆ ಮಾದರಿ. ಅವರಿಂದ ಮಾರ್ಗದರ್ಶನ ಪಡೆದ ಹಲವಾರು ಜನ ಸಮಾಜದಲ್ಲಿ ಸಭ್ಯತೆಯನ್ನು ರೂಪಿಸಿದರು ಎನ್ನುವುದು ಅವರಿಗೆ ತೃಪ್ತಿ ನೀಡಿದ ಸಂಗತಿ.

❖